ಹೊಸೂರಮ್ಮ-ಸಾಂಸ್ಕೃತಿಕ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು
ರಾಜಶೇಖರ ಜಮದಂಡಿ

ಮಾರ್ಗದರ್ಶಕರು
ಡಾ.ಮಂಜುನಾಥ ಬೇವಿನಕಟ್ಟಿ

ಜಾನಪದ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೨೧

೧೯೯೬

ಸಂಪೂರ್ಣ ಸಂ. ಕ. ಚರಿತೆ.

31

31

ಹೊಸೂರಮ್ಮ-ಸಾಂಸ್ಕೃತಿಕ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು
ರಾಜಶೇಖರ ಜಮದಂಡಿ

ಮಾರ್ಗದರ್ಶಕರು
ಡಾ.ಮಂಜುನಾಥ ಬೇವಿನಕಟ್ಟಿ

ಜಾನಪದ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೧೯೯೬

ಪ್ರಮಾಣ ಪತ್ರ

"ಹೊಸೂರಮ್ಮ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಡಾ: ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರೆ ಯಾವುದೇ ಉದ್ದೇಶಗಳಿಗಾಗಲಿ ಬಳಸಿ ಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ :: ವಿದ್ಯಾರಣ್ಯ.

ದಿನಾಂಕ : ೧೪. 11.1996.

(ರಾಜಶೇಖರ ಜಮದಂಡಿ)
ಎಂ.ಫಿಲ್ ವಿದ್ಯಾರ್ಥಿ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೃಢೀಕರಣ ಪತ್ರ

ಶ್ರೀ ರಾಜಶೇಖರ ಜಮದಂಡಿ ಇವರು '' ಹೊಸೂರಮ್ಮ ಸಾಂಸ್ಕೃತಿಕ ಅಧ್ಯಯನ '' ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ನನ್ನ ಜೊತೆ ಸಮಾಲೋಚಿಸಿ ಸಿದ್ಧಪಡಿಸಿದ್ದಾರೆ. ಎಂ.ಫಿಲ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಯಾವುದೇ ಭಾಗವನ್ನು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಬಳಸಿಕೊಂಡಿರುವುದಿಲ್ಲ.

ದಿನಾಂಕ: ೧೪.೧೧.೯೬.

ಸ್ಥಳ: ವಿದ್ಯಾರಣ್ಯ.

(ಡಾ: ಮಂಜುನಾಥ ಬೇವಿನಕಟ್ಟಿ)

ಮಾರ್ಗದರ್ಶಕರು

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃತಜ್ಞತೆಗಳು

- ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ. ಫಿಲ್ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ: ಚಂದ್ರಶೇಖರ ಕಂಬಾರರವರಿಗೆ, ಮಾನ್ಯ ಕುಲಸಚಿವರಾದ ಪ್ರೊ: ಹಿ.ಚಿ. ಬೋರಲಿಂಗಯ್ಯನವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ: ಶೇಷಾದ್ರಿಯವರಿಗೆ,

- ಅತ್ಯಂತ ಕಾಳಜಿವಹಿಸಿ ಅಧ್ಯಯನದ ಕ್ರಮವನ್ನು ಬೋಧಿಸಿದ ಹಾಗೂ ಮಾರ್ಗದರ್ಶಕರಾದ ಡಾ: ಮಂಜುನಾಥ ಬೇವಿನಕಟ್ಟಿಯವರಿಗೆ,

- ಅಧ್ಯಯನಕ್ಕೆ ಪೂರಕವಾದ ಸಲಹೆ ಸೂಚನೆಗಳನ್ನು ನೀಡಿದ ಹಾಗೂ ಅಧ್ಯಯನದ ಬಗ್ಗೆ ಆಗಾಗ ವಿಚಾರಿಸುತ್ತಿದ್ದ ಡಾ: ಪುರುಷೋತ್ತಮ ಬಿಳಿಮಲೆ, ಪ್ರೊ: ಲಕ್ಷ್ಮಣ ತೆಲಗಾವಿ ಹಾಗೂ ಡಾ: ದೇವರ ಕೊಂಡಾರೆಡ್ಡಿ, ಡಾ: ವಿಠ್ಠಲರಾವ್ ಗಾಯಕವಾಡ, ಡಾ: ರಹಮತ್ ತರೀಕೆರೆ, ಪ್ರೊ: ಮಲ್ಲೇಪುರಂ ಜಿ. ವೆಂಕಟೇಶ್, ಶ್ರೀಯುತರಾದ ಸ.ಚಿ.ರಮೇಶ್, ಶಿವಾನಂದ ವಿರಕ್ತಮಠ ಹಾಗೂ ಚೆಲುವರಾಜು ಮುಂತಾದವರಿಗೆ.

- ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶ್ರೀ ಮುನ್ವಾಚಾರ ಅವರಿಗೆ,

- ಗ್ರಂಥಗಳನ್ನು ಒದಗಿಸಿಕೊಟ್ಟ ಶ್ರೀಮತಿ ನಾಗವೇಣಿ, ಶ್ರೀ ಮಲ್ಲಿಕಾರ್ಜುನ ಹಾಗೂ ಅವರ ಸಿಬ್ಬಂದಿವರ್ಗದವರಿಗೆ,

- ನನ್ನ ಮಿತ್ರರಾದ ಕಲ್ಲಂಭಟ್, ವಿಶ್ವನಾಥ, ಜಗದೀಶ ಮಠದ ಗಂಗಾಧರ, ಶಿವಕುಮಾರ, ತಾರಿಹಳ್ಳಿ ಹನುಮಂತಪ್ಪ, ವಿರೂಪಾಕ್ಷ, ನರಸಿಂಹಮೂರ್ತಿ, ಮುಂತಾದವರಿಗೆ.

- ನನ್ನ ಚಿಂತನೆಗಳನ್ನು ಸದಾ ಹಂಚಿಕೊಂಡು ಅಧ್ಯಯನದ ಅಭ್ಯುದಯಕ್ಕೆ ಆಶೀರ್ವದಿಸಿದ ಪೂಜ್ಯ ತಂದೆ–ತಾಯಿಯವರಿಗೆ,

- ಈ ಪ್ರಬಂಧದ ಬೆರಳಚ್ಚು ಮಾಡುವಲ್ಲಿ ಸಹಕರಿಸಿದ ನನ್ನ ರೇಖಾಳಿಗೆ, ಅಲ್ಲದೆ ತಮ್ಮನಾದ ಶಿವಕುಮಾರ ಹಾಗೂ ಸೊಸೆ ಶೋಭಾ ಇವರಿಗೆ,

- ಕ್ಷೇತ್ರಕಾರ್ಯದಲ್ಲಿ ಅನೇಕ ಜನರು ನೆರವು ನೀಡಿದ್ದಾರೆ. ಅವರ ಹೆಸರುಗಳ ಪಟ್ಟಿ ಕೊನೆಯಲ್ಲಿ ನೀಡಿದ್ದೇನೆ.

ಇವರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳು.

— ರಾಜಶೇಖರ ಜಮದಂಡಿ.

ಪರಿವಿಡಿ

—— oooo ——

ಅಧ್ಯಾಯ — ಒಂದು :

1.1 ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

1.2 ಅಧ್ಯಯನದ ಮಹತ್ವ

1.3 ಅಧ್ಯಯನದ ವಿಧಾನ

1.1 ಅಧ್ಯಯನದ ವ್ಯಾಪ್ತಿ, ಮತ್ತು ಸ್ವರೂಪ :

ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಪ್ರಾಥಮಿಕ ಆಕರಗಳನ್ನು ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿ ಪುನರ್ರಚಿಸುವುದು ಇಂದು ಅನಿವಾರ್ಯವಾಗಿದೆ. ಇಂದು ಜಗತ್ತಿನ ಎಲ್ಲಾ ವಿಧಿ-ವಿಧಾನಗಳು ಅಧುನೀಕರಣದ ಪ್ರಭಾವಕ್ಕೊಳಗಾಗಿ ವಿವಿಧ ರೀತಿಯ ಪ್ರಕ್ರಿಯೆಗಳಿಂದ ಹಾಗೂ ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಂದ ತನ್ನದೇ ಆದ ಬದಲಾವಣೆಗೊಳಗಾಗಿ ಹೊಸ ರೂಪ ಪಡೆಯುತ್ತಿವೆ. ಪ್ರತಿಯೊಂದು ಸಮಾಜವು ತನ್ನ ಸ್ವಂತಿಕೆಯನ್ನು ಮರು ರೂಪಿಸಲು ಪರಂಪರಾನುಗತವಾಗಿ ಬಂದಂಥಹ ಕೆಲವು ಸಾಂಸ್ಕೃತಿಕ ಮಹತ್ವಗಳ ಬಗ್ಗೆ ಅಧ್ಯಯನ ಮಾಡಬೇಕಾದುದು ಅತ್ಯವಶ್ಯಕ.

ಇಂದು ಜಾನಪದದ ಅಂಶಗಳ ಮೂಲಕ ಸಾಂಸ್ಕೃತಿಕವಾಗಿ ಸಂಶೋಧನೆ ಮಾಡಬೇಕಾದ ಕೆಲಸ ಬಹಳವಿರುತ್ತದೆ. ಗ್ರಾಮದೇವತೆಗಳ ಪರಿಚಯ ಅಲ್ಲಿನ ಪರಿಸರ ಅದರೊಂದಿಗೆ ಇರುವ ಮನುಷ್ಯನ ಸಂಬಂಧ ಹಾಗೂ ಸಾಂಸ್ಕೃತಿಕವಾಗಿ ಬದಲಾಗುತ್ತಿರುವ ಅನೇಕ ಅಂಶಗಳನ್ನು ಅಧ್ಯಯನದ ಮೂಲಕ ಬೆಳಕಿಗೆ ತರುವುದು ಇಂದು ಅಗತ್ಯವಾಗಿದೆ. ಇದುವರೆಗೆ ಗ್ರಾಮೀಣ ದೇವತೆಗಳ ಜೊತೆಗೆ ; ಜನಪದ ಕಥೆ, ಹಾಡು, ಐತಿಹ್ಯ, ಆಚರಣೆ ನಂಬಿಕೆಗಳನ್ನೇ ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆಸಿರುವ ಪ್ರಯತ್ನಗಳು ಕಡಿಮೆ ಎಂದು ಹೇಳಬಹುದು.

ಒಂದು ಗ್ರಾಮದ ಜೀವನಾಡಿಯಾದ ಗ್ರಾಮದೇವತೆಯ ಮೂಲ ಹಾಗೂ ಸಾಂಸ್ಕೃತಿಕ ನೆಲೆಗಳ ಅಧ್ಯಯನದ ರಚನೆಗೆ ತಾಮ್ರಪಟ, ಕಡತಗಳು, ತಾಳೆಗರಿಗಳು ಹಾಗೂ ಪುರಾತನವಾದ ವಸ್ತುಗಳು ಮೂಲಾಧಾರಗಳಾಗಿರುತ್ತವೆ. ಹೊಸೂರು ಗ್ರಾಮಕ್ಕೆ ಪುರಾತನವೆನ್ನಬಹುದಾದ ಇಂತಹ ಯಾವುದೇ ಅತೀ ಮಹತ್ವವೆನ್ನಬಹುದಾದ ದಾಖಲೆಗಳು ಅಥವಾ ಪುರಾವೆಗಳು ದೊರೆಯುವುದು ಕಡಿಮೆ ಎನ್ನಬಹುದು.

ಹೊಸೂರಿಗೆ ತನ್ನದೇ ಆದ ವಿಜಯನಗರ ಕಾಲದ ಶಾಸನಗಳ ಚರಿತ್ರೆ, ಪುರಾಣ, ಸಾಹಿತ್ಯ, ನಂಬಿಕೆ,ಆಚರಣೆ, ಭೌಗೋಳಿಕ ಪರಿಸರ, ಜನಾಂಗ, ಭಾಷೆ ವ್ಯವಸ್ಥೆ, ಕಸುಬು, ಕಲೆ ಮುಂತಾದ ಹತ್ತಾರು ಪ್ರಾಥಮಿಕ ಅಂಶಗಳು ಅಲ್ಲಿ ಸಿಗುತ್ತವೆ. ಇವುಗಳ ಆಧಾರದ ಮೇಲೆ ಅಧ್ಯಯನದ ಸ್ವರೂಪವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಇದೆಲ್ಲಕ್ಕೂ ಹೆಚ್ಚಾಗಿ ಪರಂಪರಾನುಗತವಾಗಿ ಜನಪದರ ಬಾಯಿಂದ ಬಾಯಿಗೆ ಹರಿದು ಬಂದ ಕಥೆಗಳನ್ನು ಇಟ್ಟುಕೊಂಡು ಪುನರ್ ವಿಮರ್ಶಿಸಿ ಸಾಂಸ್ಕೃತಿಕ ಚೌಕಟ್ಟಿನೊಳಗೆ ಹಿಡಿದಿಡಲು ಇಲ್ಲಿ ಪ್ರಯತ್ನಿಸಲಾಗಿದೆ.

1.2 ಅಧ್ಯಯನದ ಮಹತ್ವ :

ಗ್ರಾಮಗಳಲ್ಲಿರುವ ದೇವತೆಗೆ ಸಂಬಂಧಿಸಿದ ಹಾಗೂ ಅಲ್ಲಿನ ಜನಪದರಲ್ಲಿ ಬಹಳ ಹಿಂದಿನಿಂದ ಬಂದ ಆಚರಣೆಗಳು ತುಂಬಾ ಮಹತ್ವಪಡೆದುಕೊಂಡಿರುತ್ತವೆ. ಇಂದಿನ ಗ್ರಾಮಗಳು ಆಧುನಿಕ ನಾಗರಿಕತೆಯ ಕೈಗಾರೀಕೀಕರಣದ ಪ್ರಭಾವಕ್ಕೊಳಗಾಗಿ ಸಂಸ್ಕೃತಿಯಲ್ಲಿ ಬದಲಾವಣೆಗಳಾಗುತ್ತಿವೆ. ಇಂಥಹ ಸಂಕ್ರಮಣಾವಸ್ಥೆಯ ಸಂದರ್ಭದಲ್ಲಿ ಮೂಲೆಗುಂಪಾಗುತ್ತಿರುವ ಗ್ರಾಮದ ಪರಿಸರದ ಹಾಗೂ ಆಯಾ ದೇವತೆಗೆ ಸಂಬಂಧಿಸಿದ ಆಚರಣೆಯ ಕುರಿತಾಗಿ ಅಧ್ಯಯನ ಮಾಡುವ ಕೆಲಸ ತುಂಬಾ ಮಹತ್ವ ಪಡೆದುಕೊಳ್ಳುಬಹುದು.

ಈಗಾಗಲೇ ಈ ದೇವತೆಗೆ ಸಂಬಂಧಿಸಿದ 'ಸ್ಥಳ ಪುರಾಣ' ಎಂಬ ಪುಸ್ತಕವು ಸಂಕ್ಷಿಪ್ತ ಮಾಹಿತಿಯನ್ನು ಮಾತ್ರ ನೀಡುತ್ತಿದೆ. ಆದರೆ ಅದರಲ್ಲಿ ಅಂತಹ ಮಹತ್ವದ ವಿವರಣೆ ಹಾಗೂ ಗ್ರಾಮಕ್ಕೆ ಸಂಬಂಧಿಸಿದ ಯಾವುದೇ ಅಂಕಿ ಅಂಶಗಳು ಕಂಡುಬರುವುದಿಲ್ಲ. ಆದ್ದರಿಂದ ಪ್ರಸ್ತುತ ಸಂಪ್ರಬಂಧದ ಮಹತ್ವವೇನೆಂದರೆ, ಸದರಿ ದೇವತೆಗೆ ಸಂಬಂಧಿಸಿದ ಎಲ್ಲಾ ಸಾಂಸ್ಕೃತಿಕ ವಿಧಿ–ವಿಧಾನಗಳು ಹಾಗೂ ಅವುಗಳ ಆಚರಣೆಗಳ ಜೊತೆಗೆ ಅಭಿವೃದ್ಧಿಯತ್ತ ಸಾಗುತ್ತಿರುವ ಗ್ರಾಮದ ಸಂಕ್ಷಿಪ್ತ ಪರಿಚಯವನ್ನು ಸಹ ಮಾಡಲಾಗಿದೆ.

ಈ ವಿಷಯಕ್ಕೆ ಬೇಕಾದ ಸಂಪೂರ್ಣ ಮಾಹಿತಿಗಳನ್ನು ಸಂಗ್ರಹಿಸಲು ನೇರವಾಗಿ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿ ಒಟ್ಟಾರೆ ಪರಿಸರವನ್ನು ವೀಕ್ಷಿಸಿ ಹಾಗೂ ಸ್ಥಳೀಯರ ಅಭಿಪ್ರಾಯಗಳನ್ನು ಕ್ರೋಡೀಕರಿಸಿಕೊಳ್ಳಲಾಗಿದೆ. ಅಲ್ಲದೆ ಸಂಪ್ರಬಂಧದ ರಚನೆಗೆ ಪರೋಕ್ಷವಾಗಿ ನೆರವಾಗುವ ಕೆಲವು ಪುಸ್ತಕಗಳ ಸಹಾಯ ತೆಗೆದುಕೊಂಡಿದ್ದೇನೆ. ಒಟ್ಟಾರೆ ಈ ಪ್ರಬಂಧವು ಹೊಸೂರಮ್ಮ ಬಗೆಗೆ ಪ್ರಾಥಮಿಕ ಮಾಹಿತಿಗಳನ್ನು ಕೊಡುವುದಾಗಿದೆ. ಜೊತೆಗೆ ಅಗತ್ಯವೆನಿಸಿದ ಕೆಲವು ಕಡೆಗಳಲ್ಲಿ ವಿಷಯ ವಿಶ್ಲೇಷಣೆ ಸಹ ಮಾಡಲಾಗಿದೆ.

1.3 ಅಧ್ಯಯನದ ವಿಧಾನ :

ಅಧ್ಯಯನಕ್ಕೆ ಸಂಬಂಧಿಸಿದ ವಸ್ತು ಅಥವಾ ಕ್ಷೇತ್ರವನ್ನು ಆಯ್ದುಕೊಂಡು ಆ ವಿಷಯದ ಬಗ್ಗೆ ಈಗಾಗಲೇ ನಡೆದಿರುವ ಚರ್ಚೆ, ಮಾಹಿತಿ, ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಕೆಲ ಊಹೆಗಳನ್ನು ಮಾಡುವುದು. ನಂತರ ಊಹೆಗಳನ್ನು ಸಮರ್ಥಿಸುವ ಬೇರೆ ಆಧಾರಗಳನ್ನು ಕ್ರೋಡೀಕರಿಸಿ ವಿವರಿಸುವುದು.

ಸಂಪ್ರಬಂಧವನ್ನು ರಚಿಸುವ ಸಂದರ್ಭದಲ್ಲಿ ಸಿಗುವ ಆಕರಗಳನ್ನು ತರ್ಕಬದ್ಧವಾಗಿ ಬಳಸಿಕೊಂಡು ಸತ್ಯವನ್ನು ಅನ್ವೇಷಿಸುವುದು ಒಂದು ಕ್ರಿಯೆಯಾಗಿರುತ್ತದೆ. ಇಲ್ಲಿ ದೊರಕುವ ಪ್ರಾಥಮಿಕ ಅಂಶಗಳ ಪ್ರಕಟಣೆಗೆ ನೇರವಾಗಿ ಕ್ಷೇತ್ರಕಾರ್ಯವನ್ನು ಆಯ್ದುಕೊಂಡು ಜನರ ಬಾಯಿಂದ ಹರಿದು ಬಂದ ಕಥೆ, ಹಾಡು, ಮುಂತಾದವುಗಳ ಮುಖಾಂತರ ಊಹೆಯ ಬೆಳಕು ಚೆಲ್ಲಬಹುದು.

ಕ್ಷೇತ್ರಕಾರ್ಯಕ್ಕನುಗುಣವಾಗಿ ಈ ಸಂಪ್ರಬಂಧವನ್ನು ಒಂಭತ್ತು ಅಧ್ಯಯನಗಳ ವಿಧಾನದಲ್ಲಿ ವಿಭಾಗಿಸಲಾಗಿದೆ. ಹೊಸೂರು ಗ್ರಾಮದ ಪರಿಚಯ ಅಲ್ಲಿನ ಭೌಗೋಳಿಕತೆ, ಆರ್ಥಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಅಂಕಿ ಅಂಶಗಳು ಇತ್ಯಾದಿಗಳನ್ನು ವಿವರಿಸಲಾಗಿದೆ. ಅಲ್ಲದೆ ಚಾರಿತ್ರಿಕ ಹಾಗೂ ಪೌರಾಣಿಕ ಹಿನ್ನೆಲೆ ನಂತರ ಸಾಂಸ್ಕೃತಿಕ ವಿವರಗಳಲ್ಲಿ ಮೂರ್ತಿ ಪರಿಚಯ, ಪೂಜೆ ನಂಬಿಕೆ ಮುಂತಾದವುಗಳನ್ನು ಪರಿಚಯಿಸಲಾಗಿದೆ. ತದನಂತರ ಹೊಸೂರಮ್ಮ ಮುಖ್ಯವಾದ ಜಾತ್ರಾ ಉತ್ಸವವನ್ನು ವಿವರಿಸಲಾಗಿದೆ. ಕೊನೆಯ ಅನುಬಂಧದಲ್ಲಿ ರೇಖಾನಕ್ಷೆ, ಛಾಯಾಚಿತ್ರ, ವಕ್ತೃಗಳ ಪರಿಚಯವನ್ನು ಸಹ ಸಂಪ್ರಬಂಧದಲ್ಲಿ ತಿಳಿಸಲಾಗಿದೆ.

ಅಧ್ಯಾಯ — ಎರಡು : —

— — — o o o — — —

2.1 ಹೊಸೂರು :

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ ಸುಮಾರು 4 ಅಥವಾ 5 ಕಿಲೋಮೀಟರ್ ದೂರದಲ್ಲಿರುವ ಈ ಪುಟ್ಟ ಗ್ರಾಮವೇ ಹೊಸೂರು. ಮೊದಲಿಗೆ ಹೊಸೂರನ್ನು ಪ್ರವೇಶಿಸುವ ಮಾರ್ಗದ ಇಕ್ಕೆಡೆಗಳಲ್ಲಿ ಹಚ್ಚ ಹಸಿರಿನ ಸೊಬಗನ್ನೊಳಗೊಂಡ ಹೊಲ-ಗದ್ದೆಗಳು ನೋಡುಗರ ಕಣ್ಣನ್ನು ಮತ್ತೆ ಮತ್ತೆ ಸೆಳೆಯುತ್ತವೆ. ವರ್ಷಪೂರ್ತಿ ನೀರಿನ ಅನುಕೂಲತೆ ಇಲ್ಲಿ ದೊರೆಯುವುದರಿಂದ ಯಾವಾಗಲೂ ಹಸಿರಿನ ಪ್ರಕೃತಿ ಸೌಂದರ್ಯ ತುಂಬಾ ಆಹ್ಲಾದಕರವಾಗಿ ಕಾಣುತ್ತದೆ.

ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಜನವಸತಿ ಇದ್ದಿರಲೂಬಹುದು. ತಾಳಿಕೋಟೆಯ ಕೊನೆಯ ಯುದ್ಧದ ಸಂದರ್ಭದಲ್ಲಿ ಈ ಗ್ರಾಮ ಹಾಳಾಗಿ ಹೋಗಿರಬಹುದು. ಅನಂತರ ಬಹಳ ವರ್ಷಗಳ ಹಿಂದಿನಿಂದಲೂ ಇಲ್ಲಿ ಈ ದೇವಿಯ ಮುಖ್ಯ ದೇವಸ್ಥಾನ ಮತ್ತು ಇತರೆ ಸಣ್ಣ ದೇವಸ್ಥಾನಗಳನ್ನು ಬಿಟ್ಟರೆ ಬರೀ ಹೊಲ-ಗದ್ದೆಗಳನ್ನೊಳಗೊಂಡ ನಿರ್ಜನ ಪ್ರದೇಶವಾಗಿತ್ತು. ಮತ್ತೆ ಈ ಗ್ರಾಮ ಜನವಸತಿಯಾಗಿ ಬೆಳೆದು ಬಂದಿದ್ದು ಕೇವಲ 25 ಅಥವಾ 30 ವರುಷಗಳಿಂದೀಚೆಗೆ ಎನ್ನಬಹುದು. ಈ ಸ್ಥಳದಲ್ಲಿ ಹಿಂದೆ ಜನರು ತಮ್ಮ ತಮ್ಮ ಭೂಮಿಗಳಲ್ಲಿ ಹಗಲಿರುಳೆನ್ನದೆ ಬಿಸಿಲಲ್ಲಿ ಬೆವರುತ್ತ, ಮಳೆಯಲ್ಲಿ ನೆನೆಯುತ್ತ, ಚಳಿಗಾಳಿಗೆ ನಡುಗುತ್ತಲೇ ತಮ್ಮ ದಿನ ನಿತ್ಯದ ಕಾಯಕದಲ್ಲಿ ನಿರತರಾಗುತ್ತಿದ್ದರು. ಕೆಲವೊಮ್ಮೆ ತಮ್ಮ ಭೂಮಿಯಲ್ಲಿ ಹಗಲೆಲ್ಲಾ ದುಡಿದು ರಾತ್ರಿ ವಾಪಾಸು ಹೊಸಪೇಟೆ ಅಥವಾ ಚಿತ್ತವಾಡಿಗೆಯಲ್ಲಿರುವ ತಮ್ಮ ಮನೆಗಳಿಗೆ ಹಿಂದಿರುಗುತ್ತಿದ್ದರು. ದಿನಗಳೆದಂತೆ ತಮ್ಮ ತಮ್ಮ ಭೂಮಿಗಳಲ್ಲಿಯೇ ಮನೆಗಳನ್ನು ಕಟ್ಟಿಕೊಂಡು ಅಲ್ಲಿಯೇ ಜನರೆಲ್ಲಾ ಗುಂಪು ಗುಂಪಾಗಿ ವಾಸಿಸಲಾರಂಭಿಸಿದರು. ಅಂದಿನಿಂದ ಅದು ಹೊಸ ಗ್ರಾಮವಾಗಿ ಪರಿವರ್ತನೆಯಾಗಿ ಬೆಳೆದು ಬಂದಿರಬಹುದೆಂಬುದು ಸ್ಥಳೀಕರ ಅಭಿಪ್ರಾಯ. ಬಹಳ ಹಿಂದಿನಿಂದಲೂ ಈ ಗ್ರಾಮಕ್ಕೆ 'ಹೊಸೂರು ಮಾಗಾಣಿ' ಎಂದು ಹೇಳುವುದುಂಟು. ಹೊಸೂರಿಗೆ ಹೊಂದಿಕೊಂಡಂತೆ ಇಪ್ಪತ್ತೇರಿ ಮತ್ತು ಹಾನಗಲ್ ಎಂಬ ಚಿಕ್ಕ ಪ್ರದೇಶಗಳು ಕಂಡುಬರುತ್ತವೆ.

ಅಲ್ಲಿನ ಮುಖ್ಯ ದೇವತೆಯಾಗಿರುವ ಹೊಸೂರಮ್ಮನ ಪ್ರಭಾವದಿಂದ ಈ ಗ್ರಾಮವನ್ನು 'ಹೊಸೂರು' ಎಂದೇ ಕರೆಯಲಾಗುತ್ತದೆ. ಈ ರೀತಿ ಉದಯವಾಗತೊಡಗಿದ ಚಿಕ್ಕ ಗ್ರಾಮವನ್ನು ಜನರು ಹೊಸೂರು ಅಥವಾ ಹೊಸೂರಮ್ಮ ಎಂದೇ ಕರೆಯುವ ರೂಢಿ ಕಂಡುಬರುತ್ತದೆ. ಹೊಸೂರು ಗ್ರಾಮದಲ್ಲಿ ಸುಮಾರು 250 ಮನೆಗಳಿವೆ. ನಾನಾ ಜಾತಿಯ ಜನರು ಅಲ್ಲಿ ವಾಸಿಸುತ್ತಿದ್ದಾರೆ. ಗ್ರಾಮದಲ್ಲಿ ವಿದ್ಯುತ್ ಸಾಕರ್ಯ ಕಲ್ಪಿಸಲಾಗಿದೆ. ಇತ್ತೀಚೆಗೆ ಸರ್ಕಾರಿ ಬಸ್ಸಿನ ವ್ಯವಸ್ಥೆ ಹಾಗೂ ಡಾಂಬಾರು ರಸ್ತೆಯನ್ನೂ

ಸಹ ಮಾಡಲಾಗಿದೆ. ಹಾಗೆಯೇ ಇಲ್ಲಿ ಹರಿಯುತ್ತಿರುವ ತುಂಗಭದ್ರ ನದಿಯ ಆಚೆಯ ದಡದಲ್ಲಿರುವ 'ಹುಲಗಿ' ಗ್ರಾಮವನ್ನು ಅದೇ ಗ್ರಾಮದೇವತೆಯಾಗಿರುವ ಹುಲಗೆಮ್ಮ ದೇವಿಯ ಪ್ರಭಾವದಿಂದ ಕರೆಯಲಾಗುತ್ತಿದೆ. ಮುಖ್ಯವಾಗಿ ದೇವಸ್ಥಾನವು ಒಳಾರ್ಥದಲ್ಲಿ ಜನಸ್ಥಾನವೇ ಆಗಿರುತ್ತದೆ. ಜನರ ವಾಸ ಸ್ಥಾನವಿಲ್ಲದೇ ದೇವಸ್ಥಾನಕ್ಕೆ ಹುಟ್ಟು ಇರುವುದಿಲ್ಲ.

ಇದಲ್ಲದೆ ವಿಜಯನಗರದ ಕಾಲದಿಂದಲೂ ಈ ಹೊಸೂರಮ್ಮನ ಹೆಸರು ಪ್ರಚಲಿತ-ದಲ್ಲಿರುವುದನ್ನು ಅಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಹೊಸೂರಮ್ಮನ ಗುಡಿಯ ಬಲ ದ್ವಾರಪಾಲಕ ವಿಗ್ರಹದ ಬಳಿ ಇರುವ ಶಾಸನದಲ್ಲಿ ಹೊಸೂರು ಮಹಾಮಾಯಿಗೆ ಬ್ರಾಹ್ಮಣ ಚಿತ್ತವಾಡಿಗೆಯ ಕೆಲವು ಗ್ರಾಮಗಳನ್ನು ದತ್ತಿ ಬಿಟ್ಟದುಂ'' ಎಂಬುದಾಗಿ ಹೊಸೂರಿನ ಹೆಸರು ಕಂಡುಬರುತ್ತದೆ.

2.2 ಹೊಸೂರಿನ ನಿಸರ್ಗದ ಚೆಲುವು :

ಇತ್ತೀಚಿಗೆ ಕೆಲವಾರು ವರ್ಷಗಳಿಂದ ಜನವಸತಿಯನ್ನು ಪಡೆದುಕೊಳ್ಳುತ್ತಿರುವ ಹೊಸೂರಮ್ಮ ಅಥವಾ ಹೊಸೂರು ಗ್ರಾಮವು, ದೇವಿಯ ಮಹಿಮೆಯಿಂದ ಹಾಗೂ ಹಬ್ಬ ಹುಣ್ಣಿಮೆ, ಜಾತ್ರೆಗಳಂತಹ ಉತ್ಸವ ಆಚರಣೆಗಳಿಂದ ಜನರನ್ನು ಆಕರ್ಷಿಸುತ್ತದೆ. ಇದು ಒಂದೆಡೆಯಾದರೆ ಇನ್ನೊಂದೆಡೆ ಹೊಸೂರು ಈ ಚಿಕ್ಕ ಗ್ರಾಮವು ಒಂದು ಉತ್ತಮ ನಿಸರ್ಗದ ಚೆಲುವನ್ನು ಪಡೆದುಕೊಂಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಇಲ್ಲಿ ಸದಾ ಹಚ್ಚ ಹಸಿರಿನಿಂದ ಕಂಗೊಳಿಸುವ ಹೊಲ-ಗದ್ದೆಗಳು ನೋಡುಗರ ಕಂಗಳಿಗೆ ಹಬ್ಬವನ್ನುಂಟು ಮಾಡುತ್ತಿವೆ.

ನಗರದಲ್ಲಿ ವಾಸಿಸುತ್ತಿರುವ ಜನರು ತಮ್ಮ ದಿನ ನಿತ್ಯದ ಯಾಂತ್ರಿಕ ಬದುಕಿಗೆ ಬೇಸತ್ತು, ದಣಿದು ಬಂದವರಿಗೆ ಈ ಪುಟ್ಟ ಗ್ರಾಮದಲ್ಲಿರುವ ''ಹಸಿರು'' ಚೈತನ್ಯ ತುಂಬುವುದರಲ್ಲಿ ಆಶ್ಚರ್ಯವಿಲ್ಲ. ಈ ಗ್ರಾಮಕ್ಕೆ ಹೋಗುವ ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ಕಣ್ಣು ಹಾಯಿಸಿದಷ್ಟೂ ಹೊಲ-ಗದ್ದೆಗಳು ಕಾಣಬರುತ್ತವೆ. ಅಲ್ಲದೆ ಅಲ್ಲಲ್ಲಿ ಮಾವು, ಬೇವು ಹಾಗೂ ಆಲದ ಮರಗಳುಂಟು. ಹಾಗೆಯೇ ಗ್ರಾಮದ ಸುತ್ತಲೂ ದೂರ-ದಲ್ಲಿ ಕಣ್ಣು ಹಾಯಿಸಿದರೆ ಚಿಕ್ಕದಾದ ಹಾಗೂ ದೊಡ್ಡದಾದ ಬೆಟ್ಟಗಳ ಸಾಲುಗಳು ಕಾಣುತ್ತವೆ.

ತುಂಗಭದ್ರ ನದಿಯು ದೇವಸ್ಥಾನದಿಂದ ಒಂದು ಕಿ.ಮೀಟರ ದೂರದಲ್ಲಿ ಹರಿಯುತ್ತಿದೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಹತ್ತಿರದಲ್ಲಿರುವ ಟಿ.ಬಿ.ಡ್ಯಾಂನಿನ ಹೆಚ್ಚುವರಿ ನೀರು ಹೊರಬಂದಾಗ ಈ ನದಿಯೂ ಸಹ ತುಂಬಿ ಹರಿಯುತ್ತಿರುತ್ತದೆ. ಆಗ ನೋಡಲು ತುಂಬಾ ಸುಂದರವಾಗಿ ಕಾಣುತ್ತದೆ. ।

2.3 ಭೌಗೋಳಿಕತೆ ಹಾಗೂ ಸೌಲಭ್ಯ :

ಹೊಸೂರಿನ ಒಟ್ಟು ಭೌಗೋಳಿಕ ಪ್ರದೇಶ 3,121.15 ಎಕರೆಗಳಷ್ಟಿದೆ. (ಏಪ್ರಿಲ್‌ದಲ್ಲಿ) ನೀರಾವರಿಯನ್ನೊಳಗೊಂಡ ಹಾಗೂ ಬಿತ್ತನೆಯಾಗುತ್ತಿರುವ ಇಲ್ಲಿನ ನಿವ್ವಳ ಪ್ರದೇಶವು 1,834.34 ಎಕರೆಯಷ್ಟಿದೆ. (ಅಂದರೆ ಹೊಸೂರಿನ ಪ್ರದೇಶವನ್ನು ಹೊಂದಿಕೊಂಡಂತೆ ಇಪ್ಪತ್ತೇರಿ, ಹಾನಗಲ ಹಾಗೂ ಎರೆಬಯಲು ಎಂಬ ಚಿಕ್ಕ ಪ್ರದೇಶಗಳು ಹೊಂದಿಕೊಂಡಿವೆ.) ಬಂಜರು ಹಾಗೂ ಕೃಷಿಗೆ ಯೋಗ್ಯವಲ್ಲದ ಪ್ರದೇಶವು 1,066.13 ಎಕರೆ, ಇತರೆ ಬೀಳುಪ್ರದೇಶ 6.15 ಎಕರೆ ಮತ್ತು ರುದ್ರಭೂಮಿಗಾಗಿ ಮೀಸಲಿಟ್ಟ ಸ್ಥಳ 11.13 ಎಕರೆಗಳಷ್ಟಿದೆ. ಈ ಗ್ರಾಮದಲ್ಲಿ ಹರಿಜನ ಕೇರಿ, ನದಿ ರಸ್ತೆ, ಅಥವಾ ಪವಾಡದ ಆಂಜನೇಯ ರಸ್ತೆ, ಬಂಡೀರ ಓಣಿ ಮತ್ತು ಊರಮ್ಮನ ಗುಡಿ ರಸ್ತೆ ಮುಂತಾದ ಚಿಕ್ಕ ಚಿಕ್ಕ ಓಣಿಗಳಿವೆ. ಒಂದು ಗರಡಿಮನೆ ಇದೆ. ಇದರ ಉಪಯೋಗವನ್ನು ಈಗಲೂ ಅಲ್ಲಿನ ಕೆಲ ಜನರು ಬಳಸಿಕೊಳ್ಳುತ್ತಿದ್ದಾರೆ. ಅಲ್ಲದೆ ನಾಲ್ಕೈದು ಟೀ ಹೊಟೆಲಗಳಿವೆ. ಹಾಗೂ ಒಂದೆರಡು ಕಿರಾಣಿ ಅಂಗಡಿಗಳು ಉಂಟು. ಈ ಗ್ರಾಮದಲ್ಲಿ ಎರಡು ತೋಡು ಬಾವಿಗಳಿವೆ. ವಿದ್ಯುತ್ ಚಾಲಿತ ಹಾಗೂ ಡಿಸೆಲಚಾಲಿತ ಪಂಪಸೆಟ್ಟುಗಳಿವೆ. ಇಲ್ಲಿ ಯಾವುದೇ ಕೆರೆ ಮತ್ತು ಏತ ನೀರಾವರಿಗಳಿಲ್ಲ. ಆದರೆ ಕೈಯಿಂದ ಉಪಯೋಗಿಸುವ ನಾಲ್ಕು ಕೊಳವೆ ಬಾವಿ (ಬೋರವೆಲ್) ಗಳು ಇವೆ. ಅಲ್ಲದೆ ಮೂರು ಕಾಲುವೆಗಳು ವರ್ಷಪೂರ್ತಿ ಹರಿಯುತ್ತಿರುತ್ತವೆ.

2.4 ಭೂ ಹಿಡುವಳಿ ವಿವರ :

ಹೊಸೂರಿಗೆ ಹೊಂದಿಕೊಂಡಂತೆ ಇಪ್ಪತ್ತೇರಿ ಹಾಗೂ ಹಾನಗಲ ಪ್ರದೇಶಗಳ ಮತ್ತು ಹೊಸೂರು ಗ್ರಾಮದ ಜನಸಂಖ್ಯೆ 1991ರ ಜನಗಣತಿಯ ಪ್ರಕಾರ ಸುಮಾರು 3,000 ಎಂದು ಗುರುತಿಸಲಾಗಿದೆ. ಈ ಗ್ರಾಮವು ಕೃಷಿ ಪ್ರಧಾನವಾದ ಗ್ರಾಮವಾಗಿದೆ. ಇಲ್ಲಿ ಬಹಳಷ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿಕೊಂಡಿದ್ದಾರೆ.

ಈಗ ಹೊಸೂರಿನಲ್ಲಿ ವಾಸವಾಗಿರುವ ಪೂಜಾರಿ ವೀರಣ್ಣ ಅವರು ಹೇಳುವಂತೆ, ಹೊಸೂರು ದೇವಿಗೆ ಸಂಬಂಧಿಸಿದಂತೆ ಸುತ್ತ-ಮುತ್ತ ಸುಮಾರು 70 ಅಥವಾ 80 ಎಕರೆ ಭೂಮಿಯಿತ್ತು. ನಮ್ಮ ತಾತ ಮುತ್ತಾತನ ಕಾಲದಿಂದಲೂ ಹಾಗೆಯೇ ಉಳಿದುಕೊಂಡು ಬಂದಿತ್ತು. ಆ ಭೂಮಿಯನ್ನು ಕೇವಲ ಕೆಲವೇ ಜನರಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ಬಿಟ್ಟುಕೊಡ-ಲಾಗಿತ್ತು. ಅದರಿಂದ ಬಂದ ಆಸ್ತಿಯನ್ನೆಲ್ಲ ಈ ದೇವಸ್ಥಾನದ ವಾರ್ಷಿಕ ಮತ್ತು ಜಾತ್ರೆ ಆಚರಣೆಗಳಿಗೆ, ಬಳಸಲಾಗುತ್ತಿತ್ತು. ದೇವಿಗಾಗಿ ನಿತ್ಯ ಸೇವೆ ಸಲ್ಲಿಸುವವರಾದ ಹೂ ಪತ್ರೆ ತರುವವರಿಗೆ, ಪಲ್ಲಕ್ಕಿ ಹೊರುವವರಿಗಾಗಿ, ವಾದ್ಯ ಬಾರಿಸುವವರಿಗೆ, ಪವಾಡ ಮಾಡುವವರಿಗೆ ಅರ್ಚಕರಿಗೆ ಹಾಗೂ ಹಾಡು ಹೇಳುವವರಿಗೆ ಮುಂತಾದವರಿಗೆಲ್ಲ ಅವರವರಿಗೆ ತಕ್ಕಂತೆ ಮೂರು ಅಥವಾ ನಾಲ್ಕು ಎಕರೆ ಜಮೀನನ್ನು ಅವರ ಜೀವನೋಪಾಯಕ್ಕಾಗಿ ಬಿಟ್ಟುಕೊಡಲಾಗಿತ್ತು. ನಂತರ ಸುಮಾರು 1974-75ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಹೊರಡಿಸಿದ ಆಜ್ಞೆಯ ಪ್ರಕಾರ ಹಾಗೂ ಏಳನೇ ಫಾರಂನ ಪ್ರಕಾರ ಯಾರು ಯಾರು ದೇವಸ್ಥಾನಕ್ಕೆ ಸಂಬಂಧಿಸಿದ ಭೂಮಿಯಲ್ಲಿ ದುಡಿಯುವ ರೈತರೆಲ್ಲರೂ ಅದಕ್ಕೆ ತಮ್ಮದೇ ಪೂರ್ಣ ಹಕ್ಕು-ಬಾಧ್ಯತೆ-ಗಳನ್ನು ಪಡೆದುಕೊಂಡರು. ಹೀಗಾಗಿ ಈಗ ಶ್ರೀಹೊಸೂರಮ್ಮ ದೇವಸ್ಥಾನಕ್ಕೆ ಸಂಬಂಧಿಸಿದ ಎಲ್ಲಾ ಜಮೀನು ರೈತರ ಪಾಲಾಯಿತು. ಈಗ ಕೇವಲ 2 ಅಥವಾ 3 ಎಕರೆ ಭೂಮಿ ಉಳಿದುಕೊಂಡಿದೆ. ಇದನ್ನು ಬ್ರಾಹ್ಮಣ ಪೂಜಾರಿಗಳೊಬ್ಬರು ಉಪಯೋಗಿಸಿ-ಕೊಳ್ಳುತ್ತಿದ್ದಾರೆ ಎಂಬುದು ತಿಳಿದು ಬರುತ್ತದೆ.

ಇನ್ನು ಈ ಹೊಸೂರಿನಲ್ಲಿ ವರ್ಷ ಪೂರ್ತಿ ನೀರಿನ ಅನುಕೂಲ ಇರುವುದರಿಂದ ಇಲ್ಲಿನ ರೈತರು ಬಿಡುವಿಲ್ಲದೆ ತಮ್ಮ ಸಣ್ಣ ಸಣ್ಣ ಭೂಮಿಯಲ್ಲಿ ವ್ಯಾಪಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದರಿಂದ ಅವರ ಗುಣಮಟ್ಟ ಉತ್ತಮವಾಗಿದೆ. ಈ ಗ್ರಾಮದಲ್ಲಿ ವ್ಯವಸಾಯವನ್ನೇ ಅವಲಂಬಿತವಾಗಿರುವುದರಿಂದ ಹಾಗೂ ಕುಟುಂಬಗಳು ಅನೇಕ ಭಾಗಗಳಾಗಿ ಇರುವುದರಿಂದ ಅತೀ ಹೆಚ್ಚಿನ ಭೂಮಿಯು ಯಾರಲ್ಲಿಯೂ ಕಂಡುಬರುವುದಿಲ್ಲ. ಕೇವಲ ಸಣ್ಣ ಹಾಗೂ ಅತಿಮಧ್ಯಮ ಅತೀ ಸಣ್ಣ ಭೂ ಹಿಡುವಳಿದಾರರ ಸಂಖ್ಯೆ ಹೆಚ್ಚು ಕಂಡುಬರುತ್ತದೆ. ಮಧ್ಯಮ ಹಾಗೂ ದೊಡ್ಡ ಭೂ ಹಿಡುವಳಿದಾರರ ಸಂಖ್ಯೆ ಇಲ್ಲ ಇಲ್ಲವೇ ಇಲ್ಲ. ಈ ಬಗ್ಗೆ ಅಂಕಿ-ಅಂಶಗಳ ಮೂಲಕ ಮುಂದಿನ ಪುಟದಲ್ಲಿ ಕಾಣುವ ಪಟ್ಟಿಯೊಂದನ್ನು ಗಮನಿಸಬಹುದು.

ಭೂ ಹಿಡುವಳಿ ವಿವರ (1990–91ರ ಕೃಷಿ ಗಣತಿಯ ಆಧಾರ)

ವಿವರಗಳು	ಹಿಡುವಳಿದಾರರ ಸಂಖ್ಯೆ	ಒಟ್ಟು ವಿಸ್ತೀರ್ಣ (ಎಕರೆಗಳಲ್ಲಿ)	ನೀರಾವರಿ ಪ್ರದೇಶ (ಎಕರೆಗಳಲ್ಲಿ)
ಅತೀ ಸಣ್ಣ ಹಿಡುವಳಿದಾರರು (ಎರಡೂವರೆ ಎಕರೆಗಳಿಗಿಂತ ಕಡಿಮೆ)	600	1,250	1,250
ಸಣ್ಣ ಹಿಡುವಳಿದಾರರು (ಎರಡೂವರೆ ಹಾಗೂ ಐದು ಎಕರೆಗಳಿಗಿಂತ ಕಡಿಮೆ)	25	130	130
ಅರೆ ಮಧ್ಯಮ ಹಿಡುವಳಿದಾರರು (ಐದು ಹಾಗೂ ಹತ್ತು ಎಕರೆಗಳಿಗಿಂತ ಕಡಿಮೆ)	31	310	310
ಮಧ್ಯಮ ಹಾಗೂ ದೊಡ್ಡ ಹಿಡುವಳಿದಾರರ ಸಂಖ್ಯೆ (ಹತ್ತು ಹಾಗೂ ಇಪ್ಪತ್ತೈದು ಎಕರೆಗಳು)	ಇಲ್ಲ	ಇಲ್ಲ	ಇಲ್ಲ

2.5 ಆರ್ಥಿಕತೆ :

ಹೊಸನೂರು ಗ್ರಾಮವು ಮುಖ್ಯವಾಗಿ ಕೃಷಿ ಪ್ರಧಾನವಾದುದೆಂದು ಹಿಂದೇ ಹೇಳ-ಲಾಗಿದೆ. ಹೊಸನೂರು ಗ್ರಾಮದಲ್ಲಿ ಕಪ್ಪು ಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಇದರ ವಿಸ್ತಾರ 1,834 ಎಕರೆಗಳಷ್ಟು ಹರಡಿಕೊಂಡಿದೆ. ಬಹಳ ಜಿಗುಟಾಗಿರುವ ಈ ಮಣ್ಣಿನ ಫಲವತ್ತತೆಯು ಉಪಯೋಗ ಮತ್ತು ಸದಾ ಕಾಲುವೆಗಳ ಅನುಕೂಲವಿರುವುದರಿಂದ ಇಲ್ಲಿನ ಎಲ್ಲಾ ರೈತರು ವರ್ಷಪೂರ್ತಿ ಹೆಚ್ಚಾಗಿ ತಮ್ಮ ಭೂಮಿಗಳಲ್ಲಿ ಕಬ್ಬು ಮತ್ತು ಭತ್ತವನ್ನು

ಬೆಳೆಯುತ್ತಾರೆ. ಎರಡು ಅಥವಾ ಮೂರು ಕಿಲೋಮೀಟರ್ ದೂರದಲ್ಲಿರುವ ಚಿತ್ತವಾಡಿಗೆ–ಯಲ್ಲಿ ಸಕ್ಕರೆ ಕಾರ್ಖಾನೆ (1933ರಲ್ಲಿ ಸ್ಥಾಪನೆ) ಇರುವುದರಿಂದಲೂ ಸಹ ಕಬ್ಬಿನ ಬೆಳೆಗೆ ಒಳ್ಳೆಯ ಅನುಕೂಲ ಕಲ್ಪಿಸಿದಂತಾಗಿದೆ ಎಂದು ಅಲ್ಲಿನ ರೈತರು ಹೇಳುತ್ತಾರೆ. ರೈತರು ತಾವು ಬೆಳೆದ ಒಟ್ಟು 1,475 ಎಕರೆಗಳಲ್ಲಿನ ಕಬ್ಬನ್ನು ಅಂದರೆ ಸುಮಾರು 85 ರಷ್ಟು ಉತ್ಪನ್ನವನ್ನು ಈ ಸಕ್ಕರೆ ಕಾರ್ಖಾನೆಗೆ ಸಾಗಿಸುತ್ತಾರೆ. ಇದರಿಂದ ಬಂದ ಹಣದಿಂದ ನೆಮ್ಮದಿಯಿಂದ ಇಲ್ಲಿ ಜೀವನ ಸಾಗಿಸುತ್ತಿದ್ದಾರೆ.

ಇದಲ್ಲದೆ ತೆಂಗು, ಬಾಳೆ, ಮುಂತಾದವುಗಳನ್ನು ಸಹ ಈ ಗ್ರಾಮದಲ್ಲಿ ಬೆಳೆಯು–ತ್ತಿದ್ದಾರೆ. ಕಳೆದ ಮೂರು ವರುಷಗಳಿಂದ ಈ ಒಟ್ಟಾರೆ ಇದರ ಅಂಕಿ ಅಂಶಗಳನ್ನು ಗಮನಿಸಿದರೆ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಪ್ರಮಾಣದ ಇಳುವರಿಯನ್ನು ಕಾಣಬಹುದು.

ಬೆಳೆಗಳ ವಿವರ ಈ ರೀತಿಯಾಗಿದೆ : (ವಿಸ್ತೀರ್ಣ ಎಕರೆಗಳಲ್ಲಿ)

ಹೆಸರು	1993–94ರ ಸಾಲಿನಲ್ಲಿ ವಿಸ್ತೀರ್ಣ, ಉತ್ಪನ್ನ	1994–95ರ ಸಾಲಿನಲ್ಲಿ ವಿಸ್ತೀರ್ಣ, ಉತ್ಪನ್ನ	1995–96ರ ಸಾಲಿನಲ್ಲಿ ವಿಸ್ತೀರ್ಣ, ಉತ್ಪನ್ನ
ಕಬ್ಬು	1,374·01–85%	1,375·00– 90%	1,475·00– 90%
ಬಾಳೆ	160·75–75%	110·00– 85%	120·00–90%
ನೆಲ್ಲು (ಭತ್ತ)	303·00–80%	352·16–85%	250·00–85%
ತೆಂಗು	11·94–50%	18·94–50%	15·00–70%

ಇದಲ್ಲದೆ ಗ್ರಾಮದಲ್ಲಿ ಕೆಲವರು ಮಲ್ಲಿಗೆ, ಗುಲಾಬಿ ಮುಂತಾದ ಹೂವುಗಳನ್ನು ತೋಟಗಳಲ್ಲಿ ಬೆಳೆಯುತ್ತಿದ್ದಾರೆ. ಮತ್ತೆ ಕೆಲವರು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಬೆರಳೆಣಿಕೆಯಷ್ಟು ಜನರು ಮಾತ್ರ ಸರ್ಕಾರಿ ಹುದ್ದೆಗಳಲ್ಲಿರುವುದು ಕಂಡು ಬರುತ್ತದೆ. ಒಟ್ಟಾರೆ ಗ್ರಾಮದ ಜನರ ಜೀವನದ ಗುಣಮಟ್ಟ ಹಾಗೂ ಆರ್ಥಿಕಮಟ್ಟ ಸಾಧಾರಣವಾಗಿ ಉತ್ತಮವಾಗಿದೆಯೆಂದು ಹೇಳಬಹುದು.

2·6 ಸಾಮಾಜಿಕತೆ :

ಈ ಗ್ರಾಮದಲ್ಲಿ ಹೆಚ್ಚಾಗಿ ನಾಯಕ ಜನಾಂಗದವರು ವಾಸ ಮಾಡುತ್ತಿದ್ದಾರೆ. ಇವರಲ್ಲದೆ ಮೂರ್ನಾಲ್ಕು ವೀರಶೈವ ಕುಟುಂಬಗಳು ಹಾಗೂ ಒಂದೆರಡು ಬ್ರಾಹ್ಮಣ ಕುಟುಂಬಗಳು ಹಾಗೆಯೇ ಮುಸ್ಲಿಮ ಜನಾಂಗದವರು, ಒಂದೆರಡು ಶೆಟ್ರು ಮನೆಗಳು ಹಾಗೂ ಗಂಗಾಮತಸ್ಥರೂ ಕೂಡ ಅಲ್ಲಿ ವಾಸಮಾಡುತ್ತಿದ್ದಾರೆ. ಈ ಗ್ರಾಮದ ಅಧಿದೇವತೆ-ಯಾದ ಹೊಸೂರು ದೇವತೆಗೆ ನಡೆದುಕೊಳ್ಳುವವರು, ಹರಕೆ ಒಪ್ಪಿಸುವವರು, ಹಾಗು ನಂಬಿಕೆ ಇಟ್ಟುಕೊಂಡವರು ಹೆಚ್ಚಾಗಿ ನಾಯಕ ಜನಾಂಗದವರು ಮಾತ್ರ. ಇದಲ್ಲದೆ ಇನ್ನುಳಿದ ಜಾತಿಯ ಜನರೂ ಸಹ ಈ ದೇವಿಗೆ ನಡೆದುಕೊಳ್ಳುವುದುಂಟು.

ಪ್ರತಿ ವರ್ಷ ಜರುಗುವ ಜಾತ್ರಾ ಸಮಯದಲ್ಲಿ ಎಲ್ಲಾ ಜನಾಂಗದ ಹಿರಿಯರು ಈ ಗ್ರಾಮದಲ್ಲಿ ಸಭೆ ಸೇರುತ್ತಾರೆ. ಜಾತ್ರೆಗೆ ಸಂಬಂಧಿಸಿದ ಕೆಲ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಜಾತ್ರೆಯಲ್ಲಿ ಮೊದಲಿಗೆ ಕಂಕಣ ಧಾರಣ ಆದ ನಂತರ ಅಲ್ಲಿರುವ ಯಾರ ಮನೆಯಲ್ಲಿಯೂ ಮತ್ತೆ ಕಂಕಣ ಕಟ್ಟುವ ಸಂದರ್ಭವನ್ನು ನಿಷೇಧಿಸಲಾಗಿರುತ್ತದೆ. ಜಾತ್ರೆಯ ಸಮಯದಲ್ಲಿ ಆಗ ತಮ್ಮ ಮನೆಗಳಿಗೆ ಸುಣ್ಣ ಬಣ್ಣ ಬಳಿಯುವುದುಂಟು. ಹಾಗೂ ನೆಂಟರಿಷ್ಟರನ್ನು ಕರೆ ಕಳಿಸಿಕೊಳ್ಳುತ್ತಾರೆ. ನಂತರ ಅತ್ಯಂತ ಉತ್ಸಾಹದಿಂದ ದೇವಿಯ ಜಾತ್ರೆಯನ್ನು ಸುಮಾರು 8—10 ದಿವಸಗಳ ಕಾಲ ಒಂದಾಗಿ ಆಚರಿಸುತ್ತಾರೆ. ಗ್ರಾಮದಲ್ಲಿ ಒಂದು ವೇಳೆ ಜಗಳ ಹಾಗೂ ಇತರೇ ತೊಂದರೆಗಳು ಸಂಭವಿಸಿದರೆ ಆಗಲೂ ಕೂಡ ಗ್ರಾಮದ ಹಿರಿಯರ ಸಮ್ಮುಖದಲ್ಲಿ ಅವುಗಳ ತೀರ್ಮಾನವನ್ನು ಕಂಡುಕೊಳ್ಳುವ ಪರಿಪಾಠವಿದೆ ಎಂಬ ವಿಷಯ ಅಲ್ಲಿನ ಕೆಲ ಜನರಿಂದ ತಿಳಿದು ಬಂದಿದೆ.

ಗ್ರಾಮದಲ್ಲಿ ಯಾವುದೇ ಕುಟುಂಬದಲ್ಲಿ ಮದುವೆ ಹಾಗೂ ಇತರೇ ಶುಭ ಕಾರ್ಯ ನಡೆಯುವ ಸಂದರ್ಭದಲ್ಲಿ ಗ್ರಾಮದವರೆಲ್ಲರೂ ಒಟ್ಟುಗೂಡಿ ಸಹಕರಿಸುವುದುಂಟು. ಹಾಗೆಯೇ ಯಾರ ಮನೆಯಲ್ಲಾಗಲಿ ಅಥವಾ ಯಾವ ಜಾತಿಯವರೇ ಆಗಿರಲಿ ಸಾವು ಸಂಭವಿಸಿದ ಪಕ್ಷದಲ್ಲಿ ಇಡೀ ಗ್ರಾಮದ ಜನತೆ ಅಂತಿಮ ಯಾತ್ರೆಯಲ್ಲಿ ಸಹಭಾಗಿತ್ವ ಹೊಂದುವದುಂಟು. ಅಲ್ಲಿನ ಪವಾಡದ ಪೂಜಾರಿ ಹಾಗೂ ಜೋಗತಿಯವರು ಆ ಹೆಣವನ್ನು ಮಣ್ಣು ಮಾಡುವವರೆಗೂ ಉಪವಾಸವಿರುತ್ತಾರೆ. ಎಲ್ಲಾ ಕ್ರಿಯೆಗಳು ಮುಗಿದ ನಂತರ ಸ್ನಾನ ಪೂಜೆ ಮುಗಿಸಿ ದೇವಿಯ ದರ್ಶನ ಪಡೆದು ಊಟ ಮಾಡುತ್ತಾರೆ.

ಒಂದು ಗ್ರಾಮವು ಅಭಿವೃದ್ಧಿ ಪಾತ್ರದಲ್ಲಿ ಮುನ್ನಡೆಯಲು ನೆರವಾಗುವ ಎಲ್ಲಾ ಭೌತಿಕ ಕಾರಣಗಳಲ್ಲಿ ಎಷ್ಟು ಸಮೀಪವಾಗಿದೆ ಹಾಗೂ ವ್ಯವಹಾರಿಕವಾಗಿ ಎಷ್ಟು ಬದಲಾವಣೆಗಳು ಸಂಭವಿಸುತ್ತವೆಂಬುದು ಪ್ರಮುಖ ನಿರ್ಣಾಯಕ ಅಂಶಗಳಾಗಿರುತ್ತವೆ. ನಗರದಲ್ಲಿ ಏನೇ ಬದಲಾವಣೆಯಾದರೆ ಅಥವಾ ಹೊಸ ಹೊಸ ವಸ್ತುಗಳ ಬಳಕೆ ಆರಂಭವಾದರೆ ನಿಧಾನವಾಗಿಯಾದರೂ ಅವು ಗ್ರಾಮಗಳಲ್ಲಿ ಕಾಣುವುದುಂಟು. ಈ ಹಿನ್ನೆಲೆಯಲ್ಲಿ ಹೊಸೂರಿನ ಗ್ರಾಮದಲ್ಲಿ ಕೆಲವು ಮನೆಗಳಲ್ಲಿ ಆಧುನಿಕ ವಸ್ತುಗಳು ಬಳಕೆಯಾಗುತ್ತಿವೆ. ಅದರಲ್ಲಿ ಟೀ.ವಿ ಯು ಸಹ ಒಂದು. ಈ ಗ್ರಾಮದಲ್ಲಿ ಸುಮಾರು ನಲವತ್ತು ಮನೆಗಳಲ್ಲಿ ಈ ಟೀ.ವಿ ಕುಟುಂಬದ ಸದಸ್ಯರೊಂದಿಗೆ ಬೆರೆತುಕೊಂಡಿದೆ. ತಮ್ಮ ತಮ್ಮ ಭೂಮಿಗಳಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೂ ದುಡಿದು ಬಂದ ನಂತರ ಟೀ.ವಿ ಯು ಮುಂದೆ ಕುಳಿತು ನೋಡುವ ಉತ್ಸಾಹ ಅಲ್ಲಿನ ಜನರಲ್ಲಿ ಕಂಡುಬರುತ್ತದೆ. ಇದಲ್ಲದೆ ಒಂದೆರಡು ಮನೆಗಳಲ್ಲಿ ಫೋನ್ ಕೂಡ ಕಂಡುಬರುತ್ತದೆ.

2.7 ಶಿಕ್ಷಣ :

ಈ ಗ್ರಾಮದಲ್ಲಿ ಒಂದನೆ ತರಗತಿಯಿಂದ ಐದನೇ ತರಗತಿಯ ವರೆಗಿನ ಪ್ರಾಥಮಿಕ ಶಾಲೆಯೊಂದಿದೆ. ಇಲ್ಲಿ ಪ್ರೌಢ ಶಾಲೆ ಹಾಗೂ ಇತರೆ ಯಾವುದೇ ಶಿಕ್ಷಣಕ್ಕೆ ಸಂಬಂಧಿಸಿದ ಶಾಲೆಗಳಿಲ್ಲ. ಆದಗ್ಯೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಗ್ರಾಮದ ಮಕ್ಕಳು ಹತ್ತಿರದ ಚಿತ್ರವಾಡಗಿ ಹಾಗೂ ಹೊಸಪೇಟೆಗೆ ಹೋಗುತ್ತಾರೆ. ಈ ಗ್ರಾಮದ ಶಾಲೆಗೆ ಹತ್ತಿರದ ಇಪ್ಪತ್ತೇರಿ ಹಾಗೂ ಹಾನಗಲ ಪ್ರದೇಶದ ಮಕ್ಕಳು ಸಹ ಕಲಿಯಲು ಬರುತ್ತಾರೆ. ಈಗ 1993—94ರ ಸಾಲಿನಿಂದ 1995—96ರ ಸಾಲಿನ ವರೆಗೆ ಇಲ್ಲಿ ವಿದ್ಯಾಭ್ಯಾಸ ಮಾಡಿರುವ ಮಕ್ಕಳ ಸಂಖ್ಯೆ ಹಾಗೂ ಈ ವರ್ಷಗಳಲ್ಲಿ ಶಿಕ್ಷಕರ ಸಂಖ್ಯೆಯು ಈ ಕೆಳಗಿನ ಅಂಕಿ—ಅಂಶಗಳಿಂದ ತಿಳಿದು ಬರುತ್ತದೆ.

1993—94 ರಲ್ಲಿ		**ಒಟ್ಟು**	
ವಿದ್ಯಾರ್ಥಿಗಳು — 150	ವಿದ್ಯಾರ್ಥಿನಿಯರು — 100	250	ಅಧ್ಯಾಪಕರ ಸಂಖ್ಯೆ — 6
1994—95 ರಲ್ಲಿ —			
ವಿದ್ಯಾರ್ಥಿಗಳು — 180	ವಿದ್ಯಾರ್ಥಿನಿಯರು— 90	270	ಅಧ್ಯಾಪಕರ ಸಂಖ್ಯೆ — 6
1995—96 ರಲ್ಲಿ			
ವಿದ್ಯಾರ್ಥಿಗಳು — 170	ವಿದ್ಯಾರ್ಥಿನಿಯರು—110	280	ಅಧ್ಯಾಪಕರ ಸಂಖ್ಯೆ —6

ಇನ್ನು ಈ ಗ್ರಾಮದಲ್ಲಿ ಮೆಟ್ರಿಕವರೆಗಿನ ವಿದ್ಯಾಭ್ಯಾಸ ಮಾಡಿರುವ ಮತ್ತು ಸಾಮಾನ್ಯ ಉನ್ನತ ವಿದ್ಯಾಭ್ಯಾಸ ಪಡೆದವರು ಎಷ್ಟು ಜನರೆಂಬುದನ್ನು ಈ ಮುಂದೆ ನೀಡಲಾಗಿರುವ ಅಂಕಿ ಅಂಶಗಳ ಪಟ್ಟಿಯನ್ನು ಗಮನಿಸಬಹುದಾಗಿದೆ.

ವೈದ್ಯಕ ಉತ್ತೀರ್ಣರಾದವರು	ಪ. ಜಾತಿ	ಪ. ಪಂಗಡ	ಇತರೆ	ಒಟ್ಟು
ಪುರುಷರು	20	04	25	49
ಸ್ತ್ರೀಯರು	12	03	15	30
ಸಾಮಾನ್ಯ ಉನ್ನತ ಶಿಕ್ಷಣ ಪಡೆದವರು				
ಪುರುಷರು	70	20	106	286
ಸ್ತ್ರೀಯರು	50	18	40	108

2.8 ಜಾನುವಾರು ಸಂಪತ್ತು :

	ಸಂಖ್ಯೆ (1993–94ರಲ್ಲಿ)	1994–95ರಲ್ಲಿ	1995–96ರಲ್ಲಿ
ಎತ್ತುಗಳು	185	187	180
ಹಸುಗಳು	65	65	74
ಎಮ್ಮೆಗಳು	30	35	40
ಕೋಣಗಳು	20	24	30
ಕುರಿಗಳು	20	28	38
ಕೋಳಿಗಳು	170	178	185
ಹಂದಿಗಳು	50	45	55

ಅಧ್ಯಾಯ — ಮೂರು :

3.1 ಕಥೆ ಮತ್ತು ಐತಿಹ್ಯಗಳು

3.2 ಬೆಳಕಿಗೆ ಬಂದ ಕೃತಿಗಳು

ಕಥೆ ಮತ್ತು ಐತಿಹ್ಯ :

ಗ್ರಾಮದೇವತೆಗಳ ಸೃಷ್ಟಿಗೆ ನಾನಾ ಕಥೆಗಳುಂಟು. ಪ್ರಾರಂಭದಲ್ಲಿ ಪ್ರಕೃತಿಯ ಅಘಟಿತ ಘಟನೆಗಳು ಅವುಗಳ ಮಹತ್ವದಿಂದ ಪೂಜಾರ್ಹವಾದವು. ಅಲೆಮಾರಿತನ-ವನ್ನು ಬದಲಾಯಿಸಿ ಒಂದೆಡೆ ನೆಲಸಿ ವಾಸಕ್ಕಾಗಿ ಗ್ರಾಮಗಳನ್ನು ಸೃಷ್ಟಿಸಿಕೊಂಡ ಈ ಮನುಷ್ಯ. ತನ್ನ ಗ್ರಾಮದಲ್ಲಿ ತನ್ನ ದೇವತೆಯನ್ನು ಸ್ಥಾಪಿಸಿಕೊಂಡ. ಮನುಷ್ಯ ಗ್ರಾಮಗಳನ್ನು ಹುಟ್ಟು ಹಾಕಿದಾಗ ಗ್ರಾಮದೇವತೆಗಳೂ ಕೂಡ ಹುಟ್ಟಿಕೊಂಡವು.

ಗ್ರಾಮದೇವತೆಗಳ ಸೃಷ್ಟಿಯ ಬಗೆಗೆ ಒಂದು ಕಟ್ಟು ಕಥೆಹೀಗಿದೆ :
ಪರಶುರಾಮ ತನ್ನ ತಂದೆ ಜಮದಗ್ನಿಯ ಆಜ್ಞೆಯ ಪ್ರಕಾರ ಸ್ವಂತ ತಾಯಿ ರೇಣುಕೆಯ ತಲೆಯನ್ನು ಕಡಿದು ಹಾಕುವ ಪ್ರಸಂಗಬಂತು. ತಂದೆಯ ಅಪ್ಪಣೆಯನ್ನು ಮೀರು-ವಂತಿಲ್ಲ. ಒಂದು ರೀತಿಯ ಉದ್ವೇಗದ ಅತಂತ್ರ ಸ್ಥಿತಿ ಪರಶುರಾಮನಿಗೆ ಉಂಟಾಯಿತು. ತನ್ನ ಪರಶು (ಕೊಡಲಿ) ವನ್ನು ತೆಗೆದುಕೊಂಡು ಆವೇಶದಿಂದ ತಾಯಿ ರೇಣುಕೆಯ ತಲೆಯನ್ನು ಕಡಿದು ಹಾಕಿದ. ರೇಣುಕೆಯ ರುಂಡದ ಚೂರುಗಳು ಬಿದ್ದ ಕಡೆಗಳಲ್ಲಿ ಒಂದಕ್ಕೆರಡರಂತೆ ಹೊಸ ತಲೆಗಳಾಗಿ ಹುಟ್ಟಿದವು. ಹೀಗೆ ಅಸಂಖ್ಯಾತ ತಲೆಗಳು ಹುಟ್ಟಿಕೊಂಡವು. ಕೊನೆಗೆ ಅವಳ ಪತಿವ್ರತೆಯ ಮಹತ್ವಕ್ಕೆ ಮೆಚ್ಚಿ ಅನುಗ್ರಹದಿಂದ ಜೀವದಾನ-ವನ್ನು ಜಮದಗ್ನಿ ಅನುಗ್ರಹಿಸಿದ.

ಉಳಿದ ಅಸಂಖ್ಯಾತ ತಲೆಗಳ ಗತಿ ಏನು? ಅವುಗಳೆಲ್ಲಾ ಗ್ರಾಮದೇವತೆಗಳಾಗ-ಲೆಂದು ಪರಶುರಾಮ ವರ ನೀಡಿದ. ಅದರಂತೆ ರೇಣುಕೆಯ ತಲೆಯಿಂದ ಹುಟ್ಟಿಬಂದ ತಲೆಗಳೆಲ್ಲಾ ಗ್ರಾಮದೇವತೆಗಳಾದವು. ಅವೆಲ್ಲಾ ರೇಣುಕೆಯ ರುಂಡದ ಸಂಕೇತಗಳು. ದೇಹವಿಲ್ಲದೆ ಕೇವಲ ರುಂಡದ ಭಾಗವನ್ನು ಪೂಜಿಸುವುದು ಬಹಳ ಹಿಂದಿನಿಂದಲೂ ಹಾಗೆಯೇ ಬಂದಿದೆ. (ಗ್ರಾಮದೇವತೆಗಳು: ಪು.8.9)

ಈ ಮೇಲಿನ ಕಥೆಯ ಹಿನ್ನೆಲೆಯಲ್ಲಿ ಹೊಸೂರಮ್ಮ ಗ್ರಾಮದೇವತೆಯೂ ಸಹ ರೇಣುಕೆಯ ಅವತಾರವೆನ್ನಬಹುದು. ಶಾಂತಿಮೂರ್ತಿಯಾಗಿ ಇಲ್ಲಿ ಕಂಗೊಳಿಸಿದರೆ, ಕೆಲವು ಕಡೆಗಳಲ್ಲಿ ಉಗ್ರ ಸ್ವರೂಪಳಾಗಿ ತನ್ನ ಮಹಿಮೆಯನ್ನು ವ್ಯಕ್ತಪಡಿಸಿದಾಳೆ.

ಹೊಸೂರಮ್ಮನ ಬಗ್ಗೆ ಗ್ರಾಮದ ಜನರು ಹೇಳುವ ಕಥೆಯೊಂದು ಹೀಗಿದೆ :

ರೇಣುಕೆಯು (ಹೊಸೂರಮ್ಮ) ತನ್ನ ಪತಿವ್ರತೆಯ ಪ್ರಭಾವದಿಂದ ಹಾವನ್ನು ಸಿಂಬೆಯನ್ನಾಗಿ ಮಾಡಿಕೊಂಡು ಅದರ ಮೇಲೆ ನೀರು ತುಂಬಿದ ಉಸುಕಿನ ಕೊಡವನ್ನು ನದಿಯಿಂದ ದಿನಾಲು ತಲೆಯ ಮೇಲೆ ಹೊತ್ತುಕೊಂಡು ಬಂದು ತನ್ನ ಪತಿ ಜಮದಗ್ನಿಯ ಪೂಜೆಯಲ್ಲಿ ಸಹಾಯ ಮಾಡುತ್ತಿದ್ದಳು.

ಒಮ್ಮೆ ಜಮದಗ್ನಿಯು ದೇವರ ಪೂಜೆಯಲ್ಲಿ ಇದ್ದಾಗ ರೇಣುಕೆಯು ಪೂಜೆಗೆಂದು ನೀರು ತರಲು ತುಂಗಾಭದ್ರಾನದಿಗೆ ಹೋದಳು. ಅಲ್ಲಿ ಸ್ನಾನ ಮಾಡು-ವಾಗ ಆಕೆಗೆ ಚಿತ್ರರಥನೆಂಬ ಗಂಧರ್ವನು ತನ್ನ ವನಿತೆಯರೊಂದಿಗೆ ನೀರಿನಲ್ಲಿ ಆಟ-ಆಡುತ್ತಿರುವುದನ್ನು ನೋಡತೊಡಗಿದಳು. ಆ ವಿಚಿತ್ರವಾದ ಆಟವನ್ನು ನೋಡುತ್ತಾ ಮೈಮರೆತು ನಿಂತಾಗ ಅವಳ ಮನಸ್ಸು ವಿಕಾರ(ಚಂಚಲ)ವಾಗತೊಡಗಿತು.
ಆ ಸಮಯದಲ್ಲಿ ತಕ್ಷಣ ಎಚ್ಚತ್ತುಕೊಂಡು ದಿನನಿತ್ಯದಂತೆ ನದಿಯ ದಡದಲ್ಲಿದ್ದ ಉಸುಕನ್ನು ತೆಗೆದುಕೊಂಡು ಕೊಡವನ್ನು ಮಾಡತೊಡಗಿದಳು. ಎಷ್ಟು ಪ್ರಯತ್ನ ಮಾಡಿದಾಗ್ಯೂ ರೇಣುಕೆಯಿಂದ ಉಸುಕಿನ ಕೊಡ ಸಿದ್ಧವಾಗಲಿಲ್ಲ. ಬರೀಗೈಯಿಂದ ವಾಪಾಸು ಆಶ್ರಮಕ್ಕೆ ಹಿಂದಿರುಗಿದಳು.

ಬರೀಗೈಯಿಂದ ಬಂದ ತನ್ನ ಪತ್ನಿಯನ್ನು ಕಂಡು ತಮ್ಮ ದಿವ್ಯಜ್ಞಾನ-ದಿಂದ ಎಲ್ಲವನ್ನೂ ತಿಳಿದುಕೊಂಡ ಜಮದಗ್ನಿಯು ಕೋಪಗೊಂಡು ಅವಳಿಗೆ ಶಾಪ ನೀಡಿದನು. ಅಲ್ಲದೆ ತನ್ನ ನಾಲ್ವರು ಮಕ್ಕಳನ್ನು ಕರೆದು ರೇಣುಕೆಯ ತಲೆಯನ್ನು ಕಡಿದು ಹಾಕಲು ಹೇಳಿದಾಗ ಆ ನಾಲ್ಕು ಮಕ್ಕಳು ತಮಗೆ ತಾಯಿ ಕೊಂದ ಪಾಪ ಬರಬಹುದೆಂದು ಹೆದರಿ ಅದಕ್ಕೆ ಒಪ್ಪಲಿಲ್ಲ. ಆಮೇಲೆ ಕೊನೆಯ ಮಗ ಪರಶುರಾಮ-ನಿಗೆ ಹೇಳಿದಾಗ ತಂದೆಯ ಮಾತನ್ನು ಮೀರದೆ ಪರಶುರಾಮ ಹುಲಗಿ ಪ್ರದೇಶದಲ್ಲಿನ ನದಿಯ ದಡದಲ್ಲಿ ನಿಂತು ತನ್ನ ತಾಯಿ ರೇಣುಕೆಯ ತಲೆಯನ್ನು ವೇಗದಿಂದ ಕಡಿದನು. ತಲೆಯಭಾಗ ನದಿಯ ಆಚೆಯ ದಡದಲ್ಲಿ ಹೊಸೂರಿನಲ್ಲಿ ಬಿತ್ತೆಂದು ಹಾಗೂ ಉಳಿದ ಪಾದದಿಂದ ಕಂಠಪರ್ಯಂತವಾದ ದೇಹದ ಭಾಗ ಹುಲಗಿ ಪ್ರದೇಶದಲ್ಲಿಯೇ ಬಿತ್ತೆಂಬುದಾಗಿ ಜನರು ಹೇಳುತ್ತಾರೆ.

ಮುಂದೆ ಕೆಲವು ಕಾಲದ ನಂತರ ರೇಣುಕೆಯನ್ನು ಕ್ಷಮಿಸಿದ ಜಮದಗ್ನಿ ಈ ರೇಣುಕೆಯ ರುಂಡ ಮತ್ತು ಮುಂಡದ ಭಾಗವನ್ನು ಒಂದುಗೂಡಿಸಿ ಜೀವದಾನ ಮಾಡಿದ. ಆಗ ಪರಶುರಾಮನು ತನ್ನ ಕೈಯಿಂದಲೇ ಒಂದು ದುಂಡಾಕಾರವಾದ ಶಿಲೆಯನ್ನು ತನ್ನ ತಾಯಿಯ ದಿಂಬು ಬದಿಯಲ್ಲಿಯೂ ಮತ್ತೊಂದನ್ನು ರುಂಡ ಬದಿಯಲ್ಲಿಯೂ ಇರಿಸಿ ಪರಶುವಿನಿಂದ ಭಿನ್ನವಾದ ಸ್ವಭಾವದಿಂದೊಡಗೂಡಿದ ಸಾಕ್ಷಾತ ಲಕ್ಷ್ಮೀದೇವಿಯ ದುರ್ಗಾರೂಪವನ್ನು ಮಾಡಿದ. ಆತನ ಇಚ್ಛೆಯಂತೆ ಎರಡೂ ಪ್ರದೇಶಗಳಲ್ಲಿ '' ನೀನು ಈ ಕಲಿಯುಗ ಇರುವವರೆಗೂ ಇದೇ ಪ್ರದೇಶಗಳಲ್ಲಿ ಇದ್ದು ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸು'' ಎಂದು ಹೇಳಿ ಮಹೇಂದ್ರ ಪರ್ವತದೆಡೆಗೆ ಹೋದನೆಂದು ಜನಪದರು ಹೇಳುತ್ತಾರೆ.

ಈ ಕಥೆಯ ಹಿನ್ನೆಲೆಯಂತೆ ಆಚೆ ದಡದಲ್ಲಿ ಪಾದದಿಂದ ಕಂಠಪರ್ಯಂತ ಇರುವ ದೇಹವು ಹುಲಿಗೆಮ್ಮಳಾಗಿ ಹಾಗೂ ಈಚೆ ದಡದಲ್ಲಿ ಶಿರದಭಾಗವು ಹೊಸೂರಮ್ಮಳಾಗಿ ಈ ಇಬ್ಬರೂ ಅಕ್ಕತಂಗಿಯರಾಗಿ ವಾಸವಾಗಿದ್ದಾರೆ. ಶಾಂತಿಯ ಮೂರ್ತಿಯಾಗಿ ಹೊಸೂರಿನಲ್ಲಿ ಅಕ್ಕ ಕಂಗೊಳಿಸಿದರೆ, ಉಗ್ರಸ್ವರೂಪಳಾಗಿ ತಂಗಿ ಹುಲಿಗಿಯಲ್ಲಿ ವಾಸವಾಗಿದ್ದಾಳೆಂದೂ ಸಹ ಜನಪದರು ಇಂದಿಗೂ ತಮ್ಮ ಕಥೆಯಲ್ಲಿ ಹೇಳುತ್ತಾರೆ.

ಐತಿಹ್ಯಗಳು;:

ಈ ದೇವಸ್ಥಾನದ ಗರ್ಭಗುಡಿಯಲ್ಲಿ ದೇವಿಯ ಕಣ್ಣಿನ ಸ್ಥಳದಲ್ಲಿ ಎರಡು ಸಾಲಿಗ್ರಾಮಗಳಿರುವುದು ಕಂಡುಬರುತ್ತದೆ. ಅವುಗಳಲ್ಲಿ ಒಂದು ವಾಸುದೇವ ಸಾಲಿಗ್ರಾಮ ಮತ್ತೊಂದು ಲಕ್ಷ್ಮೀನರಸಿಂಹ ಸಾಲಿಗ್ರಾಮಗಳೆಂದು ಅಲ್ಲಿನ ಪೂಜಾರಿಯೊಬ್ಬರು ಹೇಳುತ್ತಾರೆ. ಬಹಳ ಹಿಂದಿನ ಕಾಲದಲ್ಲಿ ಈ ದೇವಸ್ಥಾನಕ್ಕೆ ಋಷಿ ಮುನಿಗಳಾದ ಶ್ರೀ ವ್ಯಾಸರಾಮರು ಬಂದಿದ್ದರೆಂದೂ ಅವರು ಕೆಲವು ದಿನ ಈ ಗ್ರಾಮದಲ್ಲಿದ್ದು ತಮ್ಮಲ್ಲಿದ್ದ ಎರಡು ಸಾಲಿಗ್ರಾಮಗಳನ್ನು ದೇವಿಗೆ ಕೊಟ್ಟು ಹೋಗಿರುವರೆಂಬ ಐತಿಹ್ಯಗಳನ್ನು ಈಗಲೂ ಅಲ್ಲಿನ ಪೂಜಾರಿಯೊಬ್ಬರು ಹೇಳುತ್ತಾರೆ. ಆ ಐತಿಹ್ಯಗಳು ಈ ರೀತಿಯಾಗಿವೆ.

ಒಮ್ಮೆ ಶ್ರೀ ವ್ಯಾಸರಾಯರು ವಿಜಯನಗರ ಸಾಮ್ರಾಜ್ಯಕ್ಕೆ ಆಗಮಿಸಿದ ಸಂದರ್ಭದಲ್ಲಿ ಹೊಸೂರಿಗೆ ದಿಗ್ವಿಜಯ ಮಾಡಿ ಅಲ್ಲಿಯೇ ಇದ್ದ ತಮ್ಮ ಶಿಷ್ಯನ ಮನೆಯಲ್ಲಿ ಉಳಿದುಕೊಂಡರು. ಕೆಲ ದಿನಗಳ ನಂತರ ಅವರು ಆಗಮಿಸಿರುವ ವಿಷಯ ಇಡೀ ಗ್ರಾಮಕ್ಕೆ ತಿಳಿದು ಊರ ಪ್ರಮುಖರೆಲ್ಲಾ ಅವರಲ್ಲಿಗೆ ಬಂದರು. ಹಾಗೂ ಹೊಸೂರಮ್ಮ ದೇವಸ್ಥಾನದಲ್ಲಿ ದೇವತಾರ್ಚನೆಮಾಡಿ ಕೀರ್ತನೆಯನ್ನು ನಡೆಸಿಕೊಡ-ಬೇಕೆಂದು ಭಕ್ತಿಯಿಂದ ಬೇಡಿಕೊಂಡರು. ಅವರ ಬೇಡಿಕೆಗೆ ಬೆಲೆ ನೀಡದೇ ಉದಾಸೀನ ವ್ಯಕ್ತಪಡಿಸಿದರಂತೆ.

ಮುಂದೆ ಕೆಲ ದಿನಗಳ ನಂತರ ವ್ಯಾಸರಾಯರು ತಮ್ಮ ಶಿಷ್ಯರೊಡಗೂಡಿ ತುಂಗಭದ್ರಾ ನದಿಗೆ ಹೋಗಿ ಸ್ನಾನ ಮುಗಿಸಿ ಅಲ್ಲಿಯೇ ತಮ್ಮ ದಿನ ನಿತ್ಯದಂತೆ ಪೂಜೆಯಲ್ಲಿ ಮಗ್ನರಾದರು. ಎಲ್ಲವನ್ನೂ ಮುಗಿಸಿಕೊಂಡು ಅದೇ ಶಿಷ್ಯರೊಡಗೂಡಿ ವಾಪಾಸು ಮನೆಗೆ ಬರುವಾಗ ದಾರಿಯ ಮಧ್ಯದಲ್ಲಿ ಅವರಿಗೆ ಇದ್ದಕ್ಕಿದ್ದಂತೆ ಕಣ್ಣುಗಳು ಮಸುಕಾಗಿ ಏನೂ ಕಾಣದ ಹಾಗೆ ಕತ್ತಲಾದಂತೆ ಭಾಸವಾಯಿತಂತೆ. ಜ್ಞಾನಿಗಳೂ, ತಪೋನಿಷ್ಠರೂ, ಮಹಾಪಂಡಿತರಾದ ವ್ಯಾಸರಾಯರು ತಮ್ಮ ಜ್ಞಾನದ ಬಲದಿಂದ ಅವಲೋಕನ ಮಾಡಿದರು. ತಾವು ಜನರ ಹಾಗೂ ಊರ ಪ್ರಮುಖರ ಅಪೇಕ್ಷೆಯನ್ನು ಉದಾಸೀನ ಮಾಡಿದುದರ ಫಲವೆಂದುಕೊಂಡು, ಇದು ದೇವಿಯ ಪ್ರಕೋಪದಿಂದ ಆಗು-ತ್ತಿರಬೇಕೆಂದು ಅರಿತು ತಮಗೆ ಕಣ್ಣುಗಳು ಕಾಣುತ್ತಿಲ್ಲವೆಂದು ಹೇಳಿ ಶಿಷ್ಯರ ಸಹಾಯ-ದಿಂದ ಮನೆಗೆ ಬಂದು ವಿಶ್ರಾಂತಿ ಪಡೆದರಂತೆ. ತಮಗೆ ದೇವಿಯ ಕರೆ ಬಂದಿದೆ ಎಂದುಕೊಂಡು ಮರುದಿನ ಯಾವ ಶಿಷ್ಯನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗದೇ ಸ್ವತಃ ತಾವೇ ನೇರವಾಗಿ ದೇವಿಯ ಗರ್ಭಗುಡಿಯೊಳಕ್ಕೆ ಧಾವಿಸಿದರಂತೆ.

ತನ್ನ ಆರಾಧ್ಯ ದೇವತೆಯಾದ ಶ್ರೀ ವೇಣುಗೋಪಾಲನ ಪೂಜೆಯನ್ನು ಗರ್ಭಗುಡಿಯಲ್ಲಿಯೇ ಮಾಡಿದರು. ನಂತರ ದೇವಿಯನ್ನು ಪೂಜಿಸಿ ಪ್ರಾರ್ಥನೆ ಮಾಡಿದರು. ವ್ಯಾಸರಾಯರಿಗೆ ಮಸುಕಾಗಿದ್ದ ಕಣುಗಳು ಆಗ ಮೊದಲಗಿಂತಲೂ ಪ್ರಕಾಶಮಾನವಾದವಂತೆ. ಅತ್ಯಂತ ಭಕ್ತಿಯಿಂದ ಆ ತಾಯಿಯ ಸಂಕಲ್ಪದಂತೆ ಅಂದಿನಿಂದ ದಿನನಿತ್ಯ ಅಲ್ಲಿಯೇ ಪೂಜೆಯನ್ನು ಕೈಗೊಳ್ಳುವುದಲ್ಲದೆ ಅಲ್ಲಿನ ಜನರಿಗೆ ಬೇಕಾದ ಕೀರ್ತನೆಯನ್ನು ಮಾಡಿದರಂತೆ.

ಒಂದು ದಿನ ರಾತ್ರಿ ವ್ಯಾಸರಾಯರು ನಿದ್ರಾವಸ್ಥೆಯಲ್ಲಿದ್ದಾಗ ದೇವಿಯು ಅವರ ಸ್ವಪ್ನದಲ್ಲಿ ಬಂದು ರುಕ್ಮಿಣಿ, ಸತ್ಯಭಾಮಾ ಸಹಿತ ಶ್ರೀ ಕೃಷ್ಣನ ದೇವತಾರ್ಚನೆ ಮುಗಿದ ನಂತರ ನಿಮ್ಮಲ್ಲಿರುವ ಸುಂದರವಾದ ಎರಡು ಸಾಲಗ್ರಾಮಗಳನ್ನು ನನಗೆ ದಾನ ಮಾಡಬೇಕೆಂದಳು. ಅವುಗಳನ್ನು ನನ್ನ ಕಣ್ಣುಗಳಲ್ಲಿ ಇರಿಸಿಕೊಳುವೆನೆಂದಳು. ಅಲ್ಲದೆ ಅವುಗಳನ್ನು ನೀವು ಬೆನ್ನ ಹಿಂಬದಿಯಲ್ಲಿ ಕೈಗಳನ್ನು ಚಾಚಿ ಎರಡೂ ಕೈಗಳಲ್ಲಿ ಒಂದೊಂದು ಹಿಡಿದು ನಿಂತಾಗ ನಾನು ಸ್ವೀಕರಿಸುವೆನೆಂದು ಹೇಳಿ ಅದೃಶ್ಯಳಾದಳು. ತಕ್ಷಣ ನಿದ್ರೆಯಿಂದೆದ್ದು ತಮ್ಮ ಸ್ವಪ್ನದಲ್ಲಿ ದೇವಿಯು ಬಂದಿದ್ದು ಹಾಗೂ ಸಾಲಗ್ರಾಮ ಗಳನ್ನು ಕೇಳಿದ್ದುದನ್ನು ನೆನೆದು ಬಹಳ ಆನಂದದಿಂದ ಕುಣಿದಾಡಿದರಂತೆ. ದೇವಿಯ ಆಜ್ಞೆಯ ಮೇರೆಗೆ ಮರುದಿನ ಎಂದಿನಂತೆ ಗರ್ಭಗುಡಿಯಲ್ಲಿ ಪೂಜಾದಿಗಳನ್ನು ಮುಗಿಸಿದರು. ನಂತರ ಬೆನ್ನ ಹಿಂಬದಿಯಲ್ಲಿ ಕೈ ಚಾಚಿ ಕಣ್ಣಿಂದ ನೋಡದೆ ನಿಂತುಕೊಂಡರು. ಆಗ ದೇವಿಯು ನಡೆದು ಬರುವ ಗೆಜ್ಜೆಯ ಸಪ್ಪಳವನ್ನು ಆಲಿಸಿದರು. ಆ ಸಾಲಗ್ರಾಮ ಗಳನ್ನು ತೆಗೆದುಕೊಂಡು ದೇವಿಯು ಅಸದೃಶ್ಯಳಾದಳು.

ಈಗ ಕಂಡುಬರುವ ಸಾಲಗ್ರಾಮಗಳನ್ನು ಇಲ್ಲಿನ ದೇವಿಯ ಕಣ್ಣುಗಳೆಂದು ಬಹಳ ಹಿಂದಿನಿಂದಲೂ ಪೂಜಿಸುತ್ತಾ ಬರಲಾಗಿದೆ ಎಂದು ಅಲ್ಲಿನ ಪೂಜಾರಿಯವರು ಹೇಳುತ್ತಾರೆ.

ಈ ಮೇಲಿನ ಕಥೆಯನಾಧರಿಸಿ ಸುಪ್ರಭಾತ ಪದ್ಯಗಳ ರಚನೆಯಲ್ಲಿ ಸಾಲಗ್ರಾಮ ಗಳ ಬಗ್ಗೆ ಶ್ರೀ ರಂಗೋಪಂಥನಾಗರಾಜರಾಯರು ಈ ರೀತಿ ಬರೆದಿದ್ದಾರೆ.

ವ್ಯಾಸರಾಜರ ಕೊಂಡುಬಂಕ ಮುರಿದಂಥತೆಯ
ಬೀಸಿ ಪೂಜಿಸಿ ಕೊಟ್ಟು ದಿವ್ಯದೃಷ್ಟಿಯನು
ವಾಸುದೇವನ ಶಿಲೆಗಳೆರಡಕ್ಷಿಯೆನಿಸುತ್ತ
ತೋಷಿಸಿದ ಹೊಸೂರಮ್ಮ ತವ ಸುಪ್ರಭಾತಂ :

ಇದಲ್ಲದೆ ಇನ್ನೊಂದು ಐತಿಹ್ಯ ಹೀಗಿದೆ:

ಬಹಳ ವರುಷಗಳ ಹಿಂದೆ ಹೊಸೂರಮ್ಮ ದೇವಿಯ ಪೂಜೆಯನ್ನು ವೀರಶೈವರೇ ಮಾಡುತ್ತಿದ್ದರು. ಅಂದರೆ ವಿಭೂತಿ (ಭಸ್ಮ) ಧರಿಸುವವರು ಪೂಜಿಸುತ್ತಿದ್ದರು. ತಮ್ಮ ದಿನ ನಿತ್ಯದ ಆಹಾರವಾದ ತರಕಾರಿಗಳಲ್ಲೊಂದಾದ ಬದನೆಕಾಯಿ ಹಾಗೂ

ಉಳ್ಳಾಗಡ್ಡಿಯನ್ನು ನಿತ್ಯವೂ ನೈವೇದ್ಯಕ್ಕೆಂದು ಪ್ರಸಾದ ತಯ್ಯಾರು ಮಾಡುತ್ತಿದ್ದರು. ಹಾಗೆಯೇ ಪೂಜೆಯಾದ ನಂತರ ನೈವೇದ್ಯ ಮಾಡಿ ಭಕ್ತರಿಗೆ ಹಂಚುತ್ತಿದ್ದರು. ಒಮ್ಮೆ ಈ ದೇವಸ್ಥಾನಕ್ಕೆ ಶ್ರೀ ವ್ಯಾಸರಾಯರು ತಮ್ಮ ಶಿಷ್ಯರೊಡಗೂಡಿ ಆಗಮಿಸಿದರು. ಇಲ್ಲಿ ನಿತ್ಯವೂ ನೈವೇದ್ಯವಾಗುತ್ತಿದ್ದ ಬದನೆಕಾಯಿ ಮತ್ತು ಉಳ್ಳಾಗಡ್ಡಿಯನ್ನು ನೋಡಿ ಅಸಹ್ಯ ವ್ಯಕ್ತಪಡಿಸಿದರು (ಕಾರಣ ಕೆಲ ಬ್ರಾಹ್ಮಣರು ಈ ತರಕಾರಿಗಳನ್ನು ಸೇವಿಸುವುದಿಲ್ಲ) ಅಲ್ಲದೆ ದೇವಿಯ ಗರ್ಭಗುಡಿಯಲ್ಲಿ ತಾವು ಪೂಜೆಗೆ ಕುಳಿತುಕೊಳ್ಳುವುದಿಲ್ಲವೆಂದು ನಿರಾಕರಿಸಿದರು. ಅಲ್ಲಿಯೇ ಹರಿಯುತ್ತಿದ್ದ ತುಂಗಭದ್ರಾ ನದಿಗೆ ಹೋಗಿ ಅಲ್ಲಿಯೇ ದಡದಲ್ಲಿ ಪೂಜೆಗೆ ಕುಳಿತುಕೊಳ್ಳುವುದೆಂದು ನಿರ್ಧರಿಸಿದರು. ಆ ನದಿಯಲ್ಲಿ ಸ್ನಾನ ಮುಗಿಸಿಕೊಂಡು ದಡದಲ್ಲಿ ಕುಳಿತು ತಮ್ಮಲ್ಲಿದ್ದ ಶ್ರೀಕೃಷ್ಣನ ವಿಗ್ರಹ ಹಾಗೂ ಸಾಲಗ್ರಾಮಗಳನ್ನು ಜೋಳಿಗೆಯಿಂದ ಹೊರತೆಗೆದು ಪೂಜಿಸಿದರು. ನಂತರ ಸ್ವಲ್ಪ ಕಾಲ ದ್ಯಾನ ಮುದ್ರೆಯಲ್ಲಿ ತಪಸ್ಸಿಗೆ ಕುಳಿತರು. ಅವರು ಕಣ್ಮುಚ್ಚಿ ತಪಸ್ಸಿಗೆ ಕುಳಿತಿರುವುದನ್ನು ತೀಕ್ಷ್ಣ ದೃಷ್ಟಿಯಿಂದ ಕಂಡುಕೊಂಡ ಈ ಹೊಸೂರಮ್ಮದೇವಿಯು ತನ್ನ ಹತ್ತಿರ ಬಾರದ ಈ ವ್ಯಾಸರಾಯರಿಗೆ ಪಾಠ ಕಲಿಸಬೇಕೆಂದು ನಿರ್ಧರಿಸಿದಳು. ಅಲ್ಲಿನ ಶಿಷ್ಯರಿಗೂ ಕೂಡ ಗೊತ್ತಾಗದ ಹಾಗೆ ಶ್ರೀಕೃಷ್ಣ ಮೂರ್ತಿಗಳೆಡೆಯಲ್ಲಿದ್ದ ಅನೇಕ ಸಾಲಿಗ್ರಾಮಗಳಲ್ಲಿ ಎರಡನ್ನು ಮಾತ್ರ (ಶ್ರೀಲಕ್ಷ್ಮೀನರಸಿಂಹ ಮತ್ತು ವಾಸುದೇವ ಸಾಲಗ್ರಾಮಗಳು) ತೆಗೆದುಕೊಂಡಳು. ನಂತರ ದ್ಯಾನಮುದ್ರೆಯಿಂದ ಹೊರಬಂದ ವ್ಯಾಸರಾಯರು ತಮ್ಮ ಸಾಲಗ್ರಾಮಗಳನ್ನು ನೋಡಿದಾಗ ಅಲ್ಲಿರಲಿಲ್ಲ. ತಮ್ಮ ಶಿಷ್ಯರಿಗೆ ಕೇಳಿದಾಗ ಅವರು ತಮಗೇನೂ ಗೊತ್ತಾಗಲಲ್ಲವೆಂದು ಹೇಳಿದರು. ಅದೇ ದಿನ ರಾತ್ರಿ ವ್ಯಾಸರಾಯರು ಮಲಗಿದಾಗ ಕನಸಿನಲ್ಲಿ ದೇವಿಯು ಪ್ರತ್ಯಕ್ಷಳಾಗಿ, ನಿನ್ನಲ್ಲಿದ್ದ ಎರಡು ಸಾಲಗ್ರಾಮಗಳನ್ನು ನಾನು ತೆಗೆದುಕೊಂಡಿರುವೆನೆಂದೂ ಹಾಗೂ ಬೆಳಿಗ್ಗೆ ನೀನು ನನ್ನ ಗರ್ಭಗುಡಿಯೊಳಗೆ ಬಂದು ಅಲ್ಲಿಯೇ ಪೂಜೆ ಕೈಗೊಳ್ಳಬೇಕೆಂದು ನುಡಿದಂತೆ ಅವರಿಗೆ ಭಾಸವಾಯಿತು.

ಮರುದಿನ ವ್ಯಾಸರಾಯರು ತಮ್ಮ ಕನಸಿನಲ್ಲಿ ಕಂಡ ದೇವಿಯ ಸ್ವರೂಪದ ಬಗ್ಗೆ ಹಾಗೂ ಆಕೆ ಹೇಳಿದ ಮಾತುಗಳ ಬಗ್ಗೆ ತಮ್ಮ ಶಿಷ್ಯರಿಗೆ ವಿವರಿಸಿದರು. ಅದರಂತೆ ದೇವಿಯ ಗುಡಿಗೆ ಬಂದು ಗರ್ಭಗುಡಿಯಲ್ಲಿ ಶ್ರೀಕೃಷ್ಣನ ಪೂಜೆ ಹಾಗೂ ದೇವಿಯ ಪೂಜೆಯನ್ನು ಮಾಡಿದರು. ನಂತರ ತಪಸ್ಸಿಗೆ ಕುಳಿತಾಗ, ಈ ಎರಡೂ ಸಾಲಗ್ರಾಮಗಳು

ಸದಾ ನನ್ನಲ್ಲಿಯೇ ಇರಲೆಂದು ವ್ಯಾಸರಾಯರಿಗೆ ದೇವಿಯು ಹೇಳಿದಂತೆ ಭಾಸವಾಯಿತು. ಅಂದಿನಿಂದ ಆ ಸಾಲಗ್ರಾಮಗಳು ದೇವಿಯ ಕಣ್ಣಲ್ಲಿ ಉಳಿದುಕೊಂಡಿವೆ ಎಂದು ಹಾಗೂ ಹಾವೆಂದು ನಂಬಲಾಗಿದೆಂದು ಅಲ್ಲಿನ ಪೂಜಾರಿಯೊಬ್ಬರು ಹೇಳುತ್ತಾರೆ.

3.2 ಇದುವರೆಗೂ ಹೊರನಾಡಮ್ಮ ದೇವಿಯ ಕುರಿತಾಗಿ ಬೆಳಕಿಗೆ ಬಂದ ಕೃತಿಗಳು :

1) ಸ್ಥಳ ಪುರಾಣ :

ಡಾ. ಪಿ. ಗುರುರಾಜಭಟ್ ಕಲ್ಯಾಣಪುರ (ದ.ಕ.) ಇವರು 1976ರಲ್ಲಿ ಈ ಪುಸ್ತಕವನ್ನು ಪ್ರಕಟಿಸಿದ್ದಾರೆ ಈ ಪುಸ್ತಕವು ಪೌರಾಣಿಕಹಿನ್ನೆಲೆ, ಧರ್ಮ ಹಾಗೂ ಐತಿಹಾಸಿಕ ಘಟನೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನೊದಗಿಸುತ್ತದೆ. ಅಲ್ಲದೇ ಶ್ರೀ ದೇವಿಯ ಲಾಲಿಪದ್ಯ , ತೊಟ್ಟಿಲು ಗೀತೆಗಳನ್ನು ಇದರಲ್ಲಿ ಕಾಣಬಹುದು . ಹಾಗೂ ದೇವಾಲಯದಲ್ಲಿ ನಡೆಯುವ ಕಾರ್ಯಕ್ರಮಗಳ ಪಟ್ಟಿ ಹಾಗೂ ಉಪದೇವತೆಗಳ ಭಾವಚಿತ್ರಗಳಿವೆ.

2) ಶ್ರೀ ಹೊರನಾಡಮ್ಮನ ದ್ವಾದಶ ಪ್ರಾರ್ಥನಾ ಸ್ತೋತ್ರಗಳು :

ಈ ಸ್ತೋತ್ರಗಳನ್ನು ಚಿತ್ರಪಾಡಿಯ ಹೆಚ್. ಪಿ. ಕಲಂಭಟ್‌ರವರು 1993ರಲ್ಲಿ ಪ್ರಕಟಿಸಿದ್ದಾರೆ. 24 ಸಾಲುಗಳಲ್ಲಿರುವ ಈ ಪ್ರಾರ್ಥನಾ ಸ್ತೋತ್ರಗಳನ್ನು ದೇವಿಗೆ ಅಭಿಷೇಕ ಮಾಡುವಾಗ ಹಾಗೂ ಸಂಕಲ್ಪಪೂರ್ವಕವಾಗಿ ಭಕ್ತಿಯಿಂದ ಪಠನೆ ಮಾಡಿದರೆ ಮನೋಬಯಕೆಗಳು ಈಡೇರುತ್ತವೆ ಎಂದು ಇದರಲ್ಲಿ ಕೊನೆಗೆ ತಿಳಿಸಲಾಗಿದೆ. ದೇವಿಯ ಕುರಿತಂತೆ ಈ ಸ್ತೋತ್ರಗಳು ಇದರಲ್ಲಿವೆ.

3) ಶ್ರೀ ಹೊರನಾಡಾಂಬಾ ಸುಪ್ರಭಾತಂ :

ಶ್ರೀ ರಂಗೋಪಂತ ನಾಗರಾಜರಾಯರು 1976ರಲ್ಲಿ ಈ ಚಿಕ್ಕ ಪುಸ್ತಕವನ್ನು ಪ್ರಕಟಿಸಿದ್ದಾರೆ. ನಾಲ್ಕು ಸಾಲಿನೊಳಗೊಂಡ ಒಟ್ಟು ಮುವತ್ತು ಸುಪ್ರಭಾತದ ಪದ್ಯಗಳಿವೆ. ದೇವಿಯ ಮಹಿಮೆ ಹಾಗೂ ಪವಾಡಗಳನ್ನು ವರ್ಣನೆಮಾಡಿದ ನಾನಾ ರೀತಿಯಲ್ಲಿ ಸುಪ್ರಭಾತಗಳು ಇದರಲ್ಲಿ ಕಾಣಬರುತ್ತವೆ. ದಿನ ನಿತ್ಯ ಪೂಜಾಸಮಯದಲ್ಲಿ ಇವುಗಳನ್ನು ಹೇಳಲಾಗುತ್ತದೆಂದು ಅಲ್ಲಿನ ಪೂಜಾರಿಯೊಬ್ಬರು ಹೇಳುತ್ತಾರೆ.

4) ಶ್ರೀ ಹೊಸೂರಮ್ಮ ದೇವಿಯ ಅಷ್ಟೋತ್ತರ ಶತನಾಮಾವಳಿ :

ಹೆಚ್.ಪಿ.ಕಲಂಭಟ್ ಅವರು 1991ರಲ್ಲಿ ಈ ಕಿರು ಹೊತ್ತಿಗೆಯನ್ನು ಪ್ರಕಟಪಡಿಸಿದ್ದಾರೆ. 'ಒಟ್ಟು ನೂರೆಂಟು ಸಾಲನ್ನೊಳಗೊಂಡ ದೇವಿಯ ನಾಮಾವಳಿಗಳು ಇದರಲ್ಲಿವೆ. ವಿಶೇಷ ಪೂಜೆ ಹಾಗೂ ದೇವಿಗೆ ಕುಂಕುಮಾರ್ಚನೆ ಮಾಡುವ ಸಮಯದಲ್ಲಿ ಹಾಗೂ ಕ್ಷೀರಾಭಿಷೇಕ ಮಾಡುವ ಸಮಯದಲ್ಲಿ ಈ ಶತನಾಮಾವಳಿಗಳನ್ನು ಹೇಳುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಕಂಡುಬರುತ್ತವೆ.

5) ಶ್ರೀ ಕ್ಷೇತ್ರ – ಹೊಸೂರು :

ಹೆಚ್.ಪಿ.ಕಲಂಭಟ್ಅವರು ಇದೇ ವರ್ಷದಲ್ಲಿ ಈ ಪುಸ್ತಕವನ್ನು ಪ್ರಕಟಿಸಿದ್ದಾರೆ. ಶ್ರೀ ಕ್ಷೇತ್ರ ಹೊಸೂರಮ್ಮನಿಗೆ ಸಂಬಂಧಿಸಿದ 12 ವಾಕ್ಯದಲ್ಲಿ ಸಂಕ್ಷಿಪ್ತ ಮಾಹಿತಿಯನ್ನು ಹಾಗೂ ದೇವಿಯ ವರ್ಣನೆ ಕುರಿತಾದ 24 ಭಕ್ತಿಗೀತೆಗಳು ಈ ಪುಸ್ತಕದಲ್ಲಿ ಕಂಡುಬರುತ್ತವೆ.

ಅಧ್ಯಾಯ – ನಾಲ್ಕು :-

4.1 ಹೊಸೂರಮ್ಮನ ಐತಿಹಾಸಿಕ ಹಿನ್ನೆಲೆ

4.2 ಹೊಸೂರಮ್ಮನ ಪೌರಾಣಿಕ ಹಿನ್ನೆಲೆ

4·1: ಐತಿಹಾಸಿಕ ಹಿನ್ನೆಲೆ:—

ಸುಮಾರು 15 ಅಥವಾ 16ನೇ ಶತಮಾನದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಹೊಸೂರಮ್ಮ ದೇವಸ್ಥಾನವು ಅವರ ಅಧೀನಕೊಳ್ಳಪಟ್ಟಿತ್ತು. ಆ ಕಾಲದಲ್ಲಿ ಈ ದೇವತೆಗೆ ಅಷ್ಟೊಂದು ಪ್ರಾಮುಖ್ಯತೆ ನೀಡಲಾಗಿರಲಿಲ್ಲ. ಆಗ ಗರ್ಭ ಗುಡಿಯಷ್ಟೇ ನಿರ್ಮಾಣಗೊಂಡಿತ್ತು. ಅಲ್ಲದೆ ಹೊಸೂರಮ್ಮ ದೇವಿಯ ದೇವಸ್ಥಾನಕ್ಕೆ ಸಂಬಂಧಿಸಿದ ಯಾವ ಆಸ್ತಿಯೂ ಸಹ ಇರಲಿಲ್ಲ. ಇದರಿಂದ ಪೂಜಾದಿಗಳು ಸಕಾಲದಲ್ಲಿ ನಡೆಯುತ್ತಿರಲಿಲ್ಲ.

ವಿಜಯನಗರ ಸಾಮ್ರಾಜ್ಯವು ತಾಳಿಕೋಟೆಯ ರಕ್ಕಸತಂಗಡಿಯಲ್ಲಿ ಮುಸ್ಲೀಮರ ವಿರುದ್ಧ ನಡೆದ ಯುದ್ಧದ ಸಂದರ್ಭದಲ್ಲಿ ಸೋಲನ್ನಪ್ಪಿತು. ಇತ್ತ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಬರುವ ಅನೇಕ ದೇವಸ್ಥಾನಗಳನ್ನು ಮುಸ್ಲೀಮ್ ಸೈನಿಕರು ಆಕ್ರಮಣ ಮಾಡಿ ನಾಶ ಮಾಡಿದರು. ಅನೇಕ ದೇವತೆಗಳ ವಿಗ್ರಹಗಳನ್ನು ತುಂಡರಿಸಿ ವಿವಿಧ ರೀತಿಯಲ್ಲಿ ಭಗ್ನಗೊಳಿಸಿದರು. ಇದಕ್ಕೆ ಹೊಸೂರಿನ ನದಿಯ ಹತ್ತಿರವಿರುವ ಕೆಲವು ದೇವಾಲಯಗಳು ಸಹ ಹೊರತಾಗಿಲ್ಲ. ಹೊಸೂರಿನಲ್ಲಿರುವ ಕೆಲವು ದೇವಾಲಯಗಳಲ್ಲಿ ಇಂದಿಗೂ ಭಗ್ನಗೊಂಡ ಮೂರ್ತಿಗಳು ಹಾಗೂ ಅಳಿದುಳಿದ ಅವಶೇಷಗಳನ್ನು ಕಾಣಬಹುದಾಗಿದೆ.

ಈ ರೀತಿ ಸಾಮ್ರಾಜ್ಯವು ಪತನದ ನಂತರ ಇದಕ್ಕೆ ಅಧೀನರಾದ ಅನೇಕ ಪಾಳೆಯಗಾರರು ಸ್ವತಂತ್ರವೆಂದು ತಾವೇ ಘೋಷಿಸಿಕೊಂಡರು. ಹೀಗೆ ಸ್ವತಂತ್ರರಾದವರಲ್ಲಿ ಹರಪನಹಳ್ಳಿಯ ಪಾಳೆಯಗಾರನಾದ ಸೋಮಶೇಖರ ನಾಯಕನೂ ಒಬ್ಬನು. ಆಗ ಹೊಸೂರು ಕ್ಷೇತ್ರವು ಭದ್ರವಾದ ಕೋಟೆಯಿಂದ ಸುತ್ತುವರಿಯಲ್ಪಟ್ಟಿತ್ತು. ಈಗಲೂ ಅಲ್ಲಲ್ಲಿ ಉಳಿದಿರುವ ಕೋಟೆ ಗೋಡೆಯನ್ನು ಕಾಣಬಹುದಾಗಿದೆ. ಈ ಕೋಟೆಯನ್ನು ಮತ್ತೊಬ್ಬ ಪಾಳೆಯಗಾರನು ? ತನ್ನ ವಶದಲ್ಲಿಟ್ಟುಕೊಂಡನು. ಇದನ್ನು ಕಂಡುಕೊಂಡ ಸೋಮಶೇಖರ ನಾಯಕನು ಬಹಳ ಕೋಪಗೊಂಡು ಆ ಹೊಸೂರಿನ ಪಾಳೆಯಗಾರನ ಮೇಲೆ ಯುದ್ಧ ಮಾಡಲು ದಂಡೆತ್ತಿ ಬಂದನು. ಅನೇಕ ದಿನಗಳ ಕಾಲ ಘನ ಘೋರವಾದ ಸಮರ ಸಂಭವಿಸಿತು. ಇದರಿಂದ ಹೊಸೂರಿನ ಭದ್ರವಾದ ಕೋಟೆ ಅಲ್ಲಲ್ಲಿ ನಾಶವಾಗಲ್ಪಟ್ಟಿತು. ಈ ಕ್ಲಿಷ್ಟವಾದ ಸಂದರ್ಭದಲ್ಲಿ ಅನೇಕ ಸಂಖ್ಯೆಯ ಸರದಾರರು, ಸೈನಿಕರು ಹಾಗೂ ಇತರೆ ಜನರು ಸಾವನ್ನಪ್ಪಿದರು. ಆದರೂ ಸೋಮ—ಶೇಖರ ನಾಯಕನು ಹೊಸೂರು ಕೋಟೆಯನ್ನು ಗೆಲ್ಲುವಲ್ಲಿ ಸಫಲನಾಗಲಿಲ್ಲ. ಈ ನಾಯಕನ ಸೈನಿಕರು ಜೋಗಮ್ಮನ ವೇಷಧರಿಸಿ '' ಯಾಕಲದೇ ಜಗಾಕಲದೇ ಜಗ—

ಉಧೋ ಉಧೋ ಉಧೋ'' ಎಂಬ ದೇವಿಯನ್ನು ಕುರಿತಾದ ಹಾಡನ್ನು ಹಾಡುತ್ತಾ ಇದಾಂಗ ಇದೇ ಸಂದರ್ಭದಲ್ಲಿ ಹಿಂದೂ ಸಾಮ್ರಾಜ್ಯದ ಸಂಸ್ಥಾಪಕನಾದ ಛತ್ರಪತಿ ಶಿವಾಜಿಯ ಸೈನಿಕರು '' ಹರ ಹರ ಮಹಾದೇವ '' ಎಂಬ ಘೋಷಣೆಯಿಂದ ಸ್ಫೂರ್ತಿ ಉತ್ಸಾಹಗಳನ್ನು ಪಡೆದು ಹೊಸೂರಿನ ಕೋಟೆಯ ಮೇಲೆ ಈ ಸೈನಿಕರು ಧೈರ್ಯೋತ್ಸಾಹಗಳಿಂದ ಯುದ್ಧದಲ್ಲಿ ಪಾಲ್ಗೊಂಡರು.

ಮುಂದೊಮ್ಮೆ ಸೋಮಶೇಖರ ನಾಯಕನಿಗೆ ಸ್ವಪ್ನದಲ್ಲಿ ಗ್ರಾಮ ದೇವತೆ ಶ್ರೀ ಹೊಸೂರಮ್ಮ ದೇವಿಯು ಬಂದು ಹೊಸೂರು ಕೋಟೆಯನ್ನು ರಕ್ಷಿಸುತ್ತಿದ್ದಂತೆ ಕಂಡುಬಂದಿತು. ಇದರಿಂದ ಪಶ್ಚಾತಾಪಕ್ಕೊಳಪಟ್ಟ ನಾಯಕನು ಶ್ರೀ ಹೊಸೂರಮ್ಮನಿಗೆ ಭಕ್ತಿಯಿಂದ ನಮಸ್ಕರಿಸಿದನು. ಅಲ್ಲದೇ ಕ್ಷಮಿಸುವಂತೆ ಬೇಡಿಕೊಂಡು ದೇವಿಯ ಪೂಜೆಯನ್ನು ಮರುದಿನ ಬೆಳಿಗ್ಗೆ ವಿಜೃಂಭಣೆಯಿಂದ ಮಾಡಿಸಿದನು. ಸುಪ್ರಸನ್ನಳಾದ ದೇವಿಯು ಅವನಿಗೆ ಪ್ರತ್ಯಕ್ಷಳಾಗಿ ಸಮಾಧಾನ ಮಾಡಿದಳು. ಈ ಸಂದರ್ಭದಲ್ಲಿ ಸೋಮಶೇಖರ ನಾಯಕನು ದೇವಿಯ ನಿತ್ಯಪೂಜೆಗೆಂದು ಹಾಗೂ ಜಾತ್ರೆಯ ಇನ್ನಿತರ ಸಂಪ್ರದಾಯಗಳನ್ನು ಸಾಂಗವಾಗಿ ಜರುಗುವುದಕ್ಕಾಗಿ ಎಪ್ಪತ್ತು ಎಕರೆ ಸುಜಲ ಹಾಗೂ ಸುಫಲ ಭೂಮಿಯನ್ನು ಭಕ್ತಿಯಿಂದ ಕಾಣಿಕೆಯಾಗಿ ನೀಡಿದನು. (ಸ್ಥಳಪುರಾಣ:ಪು:9,10.-1976)

<u>ಶಾಸನಗಳ ಹಿನ್ನೆಲೆ:-</u>

ಕ್ರಿ.ಶ. 1435ರ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಈ ಹೊನೂರು ಒಳಪಟ್ಟಿತ್ತೆಂಬುದು ಹಾಗೂ ಹೊಸೂರು ಎಂಬ ಉಲ್ಲೇಖವನ್ನು ಅಲ್ಲಿನ ಕೆಲವು ಶಾಸನಗಳಾಧಾರದ ಮೂಲಕ ಗುರುತಿಸಬಹುದಾಗಿದೆ. ಆ ಕಾಲದಲ್ಲಿದ್ದ ''ಮಾದಿ ನಾಯಕನೆಂಬಾತನು ಹೊಸೂರಿನ ಮಹಾಮಾಯಿಗೆ ಚಿತ್ರವಾಡಿಗೆಯ ಕೆಲವು ಗ್ರಾಮಗಳನ್ನು ದತ್ತಿ ಬಿಟ್ಟಿದ್ದನು.'' ಎಂಬ ವಿಷಯ ಹೊಸೂರಮ್ಮ ಗುಡಿಯ ಬಲದ್ವಾರ ಪಾಲಕ ವಿಗ್ರಹದ ಬಳಿ ಇರುವ ಶಾಸನದಿಂದ ತಿಳಿದುಬರುತ್ತದೆ. ಹಾಗೆಯೇ ಇದೇ ಕಾಲದಲ್ಲಿ ಗಾಡದಣಾಯಕ ಮಗ ಬಸವಪ್ಪ ಹಾಗೂ ಉಪಪ್ರಧಾನ ಸೋಮರಸರು ಹೊಸೂರು ಏಕನಾಥೇಶ್ವರಿಗೆ ದಾನಕೊಟ್ಟ ಮಾಹಿತಿಯೂ ಹೊಸೂರಮ್ಮನ ಮುಖಮಂಟಪದಲ್ಲಿರುವ ಒಂದು ಕಂಬದ ಮೇಲೆ ಬರೆಯಲಾಗಿದೆ. ಅದೇ ರೀತಿಯಾಗಿ ಅದೇ ಕಂಬದ ಇನ್ನೊಂದು

ಮಗ್ಗುಲಲ್ಲಿ ಕಂಡುಬರುವ ವಿಷಯವೇನೆಂದರೆ, ಹೊಸೂರು ಮಹಾಮಯಿಗೆ ದೇವಸ್ಥಾನದ ಸ್ಥಾನಿಕನು ವಿಜಯನಗರ ಕೋಟೆಯ ಮಲ್ಲಯ್ಯನಿಗೆ ದೇವರ ವಾಹನ ಸಿಂಹಕ್ಕೆ ಅಲಂಕಾರ ಆಭರಣ ಚಲವಾನಯ ಮಾಡಲು ಭೂಮಿದಾನ ಮಾಡಿದನೆಂಬುದು ಸಹ ತಿಳಿದು–ಬರುತ್ತದೆ.

<u>ದಾನಪತ್ರ:–</u>

ಶಾಲವಾಹನ ಶಕ 1637 ಮನ್ಮಥನಾಮ ಸಂವತ್ಸರ ಆಶ್ವೀಜ ಶುದ್ಧ ಬಹುಳ ಬಾಗುಳಿ ಬಸಪ್ಪ ನಾಯಕ ಎಂಬಾತನು ಪುರೋಹಿತರಾದ ವಿಶ್ವನಾಥಭಟ ಹಿರೇಪೋಬಳಭಟ್ಟ ಚಿಕ್ಕ ಪೋಬಳಭಟ್ಟ ಹಾಗೂ ಸಿಂಹಾದ್ರಿಭಟ್ಟರ ಪುತ್ರರಿಗೆ ಹೊಸುರಿನ ಹತ್ತಿರವಿರುವ ಚಿತ್ರವಾಡಿಗೆಯ ಗ್ರಾಮದಲ್ಲಿ ಗದ್ದೆಗಳನ್ನು ಭೂದಾನವಾಗಿ ಕೊಟ್ಟ ವಿಷಯವು ದಾನಪತ್ರವೊಂದರಲ್ಲಿ ಉಲ್ಲೇಖವಾಗಿದೆ.

ಈ ದಾನಪತ್ರವನ್ನು ಜಿಲ್ಲಾ ಮುನ್ಸೀಫ್ ಅವರು 31.01.1883ರಲ್ಲಿ ಸಂಗ್ರಹಿದ್ದು ಎಂದು ತಿಳಿದುಬರುತ್ತದೆ. ಈ ಮೇಲೆ ದೊರೆತಿರುವ ಐತಿಹಾಸಿಕ ಅಂಶಗಳ ಮತ್ತು ಶಾಸನ ಹಾಗೂ ದಾನಪತ್ರದ ಹಿನ್ನೆಲೆಯನ್ನು ಗಮನಿಸಿದಾಗ ಹೊಸೂರು ಮತ್ತು ಹೊಸೂರಿನ ದೇವಿ ಮಹಾಮಾಯಿ ಎಂಬ ಹೆಸರಿನ ಉಲ್ಲೇಖಗಳು ಸ್ಪಷ್ಟವಾಗಿ ನಮಗೆ ಗೋಚರಿಸುತ್ತವೆ. ಆದ್ದರಿಂದ ನಿರ್ಜನ ಪ್ರದೇಶವಾಗಿಯೋ ಹಿಂದೆ ಇದ್ದಿರಬಹುದೆಂಬ ಊಹೆ ಮಾಡಲಾಗಿದೆ.

ಒಟ್ಟಾರೆ ಹೊಸೂರು ಗ್ರಾಮವಾಗಿ ಮತ್ತೆ ಪುನರ್ಜೀತರಿಸಿಕೊಂಡು ಬೆಳೆದು ಬಂದಿದ್ದು ಮಾತ್ರ ಸುಮಾರು 25 ಅಥವಾ 30 ವರುಷಗಳಿಂದ ಈಚೆಗೆ ಎಂದು ಅಲ್ಲಿಯ ಜನರು ಹೇಳುತ್ತಾರೆ.

4.3 <u>ಹೊಸೂರಮ್ಮನ ಪೌರಾಣಿಕ ಹಿನ್ನೆಲೆ</u> :

ಹೊಸೂರಿನಲ್ಲಿ ಹೊಸೂರಮ್ಮ ದೇವತೆಗೂ ಮತ್ತು ಸವದತ್ತಿ ಎಲ್ಲಮ್ಮ, ಹುಲಿಗೆಮ್ಮ, ಬಳ್ಳಾರಿ ದುರ್ಗಮ್ಮ ಮುಂತಾದ ಅಂತೂ ಊರಿನ ಅಥವಾ ಗ್ರಾಮದ ದೇವತೆಗಳಿಗೂ ಒಂದೇ ಅನ್ವಯವಾಗುವಂತೆ ಪೌರಾಣಿಕ ಹಿನ್ನೆಲೆಯನ್ನು ಗಮನಿಸಬಹುದು. ಎಲ್ಲಾ ಹೆಣ್ಣು ದೇವತೆಗಳು ಪಾರ್ವತಿಯ ಸ್ವರೂಪವೆಂದೂ ಹೆಚ್ಚು ಕಡಿಮೆ ಒಂದೇ ರೀತಿಯ ಕಥೆಗಳು ಹುಟ್ಟಿಕೊಂಡಿವೆ. ಅಂತೂ ಗ್ರಾಮಗಳ ಜನರು ತಮ್ಮ ಪರಿಸರಕ್ಕೆ

ಅನುಗುಣವಾಗಿ ಕಥೆಗಳನ್ನು ಕಟ್ಟಿ ಅದನ್ನು ಗ್ರಾಮಗಳಲ್ಲಿ ನಂಬುವುದರ ಮೂಲಕ ದೇವತೆಯನ್ನು ಭಕ್ತಿಯಿಂದ ಪೂಜಿಸುತ್ತಾ ಬಂದಿರುವುದುಂಟು. ಹೊಸೂರು ಗ್ರಾಮದ ಜನರನ್ನು ಕಂಡು ಈ ದೇವತೆಯ ಪೌರಾಣಿಕ ಹಿನ್ನಲೆ , ಏನೆಂದು ಕೇಳಿದಾಗ — "ಜಮದಗ್ನಿಯ ಹೆಂಡತಿ ರೇಣುಕೆ ಈಕೆಯ ಮಗ ಪರಶುರಾಮ. ಈ ಪರಶುರಾಮ ತನ್ನ ತಂದೆಯ ಆಜ್ಞೆಯಂತೆ ತಾಯಿಯ ತಲೆಯನ್ನು ಕಡಿಯುತ್ತಾನೆ. ಆ ಶಿರವೇ ಇಲ್ಲಿರುವ ಹೊಸೂರವ್ವ ಎಂದು ಬಹಳ ಸಹಜವಾಗಿ ಹೇಳುತ್ತಾರೆ.

ಈ ಕಥೆಯ ಹಿನ್ನಲೆಯನ್ನು ನೋಡಿದಾಗ, ಹರಿವಂಶ ಪುರಾಣ, ವಾಯು—ಪುರಾಣ, ಮಹಾಭಾರತ, ಬ್ರಹ್ಮಪುರಾಣಗಳಲ್ಲಿ ಕಂಡುಬರುತ್ತದೆ. ಈ ಪುರಾಣ ಕಥೆಗಳಲ್ಲಿ ಬರುವ ರೇಣುಕೆಯೇ ಈ ಗ್ರಾಮದ ಹೊಸೂರವ್ವ ಆಗಿದ್ದಿರಬಹುದೆಂದು ಹೇಳಲಾಗಿದೆ. ಈ ರೇಣುಕೆಯು ಇಕ್ಷ್ವಾಕು ವಂಶಕ್ಕೆ ಸೇರಿದ ರೇಣುಕರಾಜನ ಮಗಳು ಎಂದು ಬ್ರಹ್ಮ—ಪುರಾಣದಲ್ಲಿ ಹೇಳಲಾಗಿದೆ. ರೇಣುಕೆಯು ಕಮಲ ಹೂವಿನಲ್ಲಿ ಜನಿಸಿದವಳೆಂದು ಹೇಳಲಾಗಿದೆ. ರೇಣುಕರಾಜನು ತನಗೆ ಮಕ್ಕಳಿಲ್ಲದ್ದರಿಂದ ಈಕೆಯನ್ನು ಸಾಕಿ ಬೆಳೆಸಿದನೆಂಬ ಕಥೆ ಹರಿವಂಶ ಪುರಾಣದಲ್ಲಿ ಬರುತ್ತದೆ. ರೇಣುಕೆಯ ಮೊದಲಿನ ಹೆಸರು ಕಮಲ ಎಂಬುದಾಗಿ ಸವಣಮಹರ್ಷಿಯ ಮಗಳೆಂದು ವಾಯುಪುರಾಣದಿಂದ ತಿಳಿಯುತ್ತದೆ. ಇನ್ನು ಮಹಾಭಾರತದ ಪ್ರಕಾರ ರೇಣುಕಾ ಭೃಗುವಂಶಕ್ಕೆ ಸೇರಿದ ಜಮದಗ್ನಿಯನ್ನು ಮದುವೆಯಾಗುತ್ತಾಳೆ. ಸ್ಕಂದಪುರಾಣದ ಪ್ರಕಾರ ರೇಣುಕಾ ಅದಿತಿ ದೇವಿಯ ಅವತಾರವೆನ್ನಲಾಗಿದೆ. ಕಾಶ್ಮೀರ ರಾಜ ಯಜ್ಞ ಮಾಡುವಾಗ ಆ ಯಜ್ಞ ಕುಂಡದಿಂದ ಹುಟ್ಟಿ ಬಂದವಳೇ ಈ ರೇಣುಕಾ ಈಕೆ ಪ್ರೌಢ ವಯಸ್ಸಿಗೆ ಬಂದಾಗ, ಶಿವನ ಅವತಾರ ಹಾಗೂ ಕಶ್ಯಪ ಗೋತ್ರಕ್ಕೆ ಸೇರಿದ ಚ್ಯವನ ಭಾರ್ಗವ ಮಹರ್ಷಿಯ ಮಗನಾದ ಜಮದಗ್ನಿಯನ್ನು ಈಕೆ ವಿವಾಹವಾಗುತ್ತಾಳೆ.

ಈ ಮೇಲಿನ ಪುರಾಣಗಳ ಹಿನ್ನಲೆಯನ್ನು ಇನ್ನಷ್ಟು ವಿವರವಾಗಿ ಈ ಕೆಳಗೆ ವಿವರಿಸಲಾಗಿದೆ.

ಭೃಗುವಂಶಕ್ಕೆ ಸೇರಿದ ಜಮದಗ್ನಿ ಮಹಾಮುನಿಯು ಒಮ್ಮೆ ಹಿಮಾಲಯದಿಂದ ದಕ್ಷಿಣದ ಸೌಗಂಧವತಿ (ಸವದತ್ತಿ)ನಾಡಿಗೆ ಬಂದು ದೀರ್ಘಕಾಲದ ತಪಸ್ಸನ್ನು ಕೈಗೊಳ್ಳುತ್ತಾನೆ. ಇವನ ಮಾತಾಪಿತೃಗಳು ವಂಶಾಭಿವೃದ್ಧಿಗಾಗಿ ನೀನು ವಿವಾಹ ಮಾಡಿಕೊಳ್ಳಬೇಕೆಂದು ಆತನಿಗೆ ತಿಳಿಸುತ್ತಾರೆ. ತನ್ನ ಆಶ್ರಮದ ಹತ್ತಿರದಲ್ಲಿದ್ದ ಇಕ್ಷ್ವಾಕು ವಂಶಕ್ಕೆ ಸೇರಿದ ರೇಣುಕಾ ರಾಜನ ಲ್ಲಿಗೆ ಹೋಗಿ, ಅವನ ಮಗಳು ರೇಣುಕೆಯನ್ನು ತನಗೆ ವಿವಾಹ ಮಾಡಿಕೊಡಲು ಕೇಳುವನು.

ಈ ಕೋರಿಕೆಯನ್ನು ಮನ್ನಿಸಿದ ರಾಜನು ತನ್ನ ಕುವರಿಯನ್ನು ಅವನಿಗೆ ವಿವಾಹ ಮಾಡಿಕೊಡುವನು. ವಿವಾಹದ ನಂತರ ಜಮದಗ್ನಿ ರೇಣುಕೆ ಇವರು ಸಿದ್ಧಾಚಲಕ್ಕೆ ಬಂದು ನೆಲೆಸಿದರು ಎಂಬುದಾಗಿ ಕಂಡುಬಂದರೆ ಈ ಹೊಸೂರಿನ ಜನರು ಹುಲಿಗಿ ಮತ್ತು ಹೊಸೂರಿನ ನಡುವಿನ ನದಿ ತೀರದಲ್ಲಿ ವಾಸವಾಗಿದ್ದರೆಂದು ಹೇಳುತ್ತಾರೆ. ಜಮದಗ್ನಿ ತಪಸ್ಸಿನಲ್ಲಿ ಮಗ್ನನಾದರೆ ರೇಣುಕಾ ತನ್ನ ಪತಿಯ ಪೂಜಾ ವಿಧಿಗಳಿಗೆ ಬೇಕಾದ ಪವಿತ್ರ ವಸ್ತುಗಳನ್ನು ತಂದೊಪ್ಪಿ-ಸುತ್ತಾ, ಅವನ ಸೇವೆ ಮಾಡುತ್ತಿದ್ದಳು. ಕಾಲಕ್ರಮೇಣ ಐವರು (ಯಮರ್ಶ್ವಾಸ, ಸುಷೇಣ, ವಸು ವಿಶ್ವಾವಸು ಹಾಗೂ ಪರಶುರಾಮ) ಪುತ್ರರು ಜನಿಸಿದರು.

ರೇಣುಕಾ ತನ್ನ ದೈನಂದಿನ ಕರ್ತವ್ಯಗಳಲ್ಲಿ ಮಗ್ನಳಾಗಿ ಆಶ್ರಮಕ್ಕೆ ಹತ್ತಿರದಲ್ಲಿದ್ದ ಮಲಪ್ರಹಾರಿ ನದಿಯಿಂದ ತನ್ನ ಗಂಡನ ಪೂಜಾವಿಧಿಗಳಿಗೆ ಪವಿತ್ರ ಜಲವನ್ನು ತರುತ್ತಿದ್ದಳು. ಈ ಪವಿತ್ರ ಜಲ ತರಲು ಆಕೆ ಪ್ರತಿದಿನ ನದಿಯ ದಡದಲ್ಲಿದ್ದ ಮರಳಿನಿಂದ ಗಡಿಗೆಯನ್ನು ಮಾಡಿಕೊಂಡು ಒಂದು ಜೀವಂತವಾದ ಹಾವನ್ನೇ ಸಿಂಬಿಯಾಗಿ ಮಾಡಿಕೊಂಡು ಪವಿತ್ರ ಜಲವನ್ನು ತರುತ್ತಿದ್ದಳು. ಹೀಗೆ ಒಂದು ದಿನ ನೀರು ತರಲು ರೇಣುಕೆ ಬಂದಾಗ ನದಿಯ ನೀರಿನಲ್ಲಿ ಚಿತ್ರಾರ್ಥನೆಂಬ ಗಂಧರ್ವನೊಬ್ಬ ತನ್ನ ಸತಿಯೊಂದಿಗೆ (ಸ್ಥಳಪುರಾಣದಲ್ಲಿ ವನಿತೆಯರೊಂದಿಗೆ ಎಂಬುದಿದೆ) ಜಲಕ್ರೀಡೆಯಲ್ಲಿ ಇರುವುದನ್ನು ನೋಡಿ ಕ್ಷಣಕಾಲ ಮನೋ-ವಿಕಾರಕ್ಕೆ ಒಳಗಾದಳು. ತನ್ನ ಮನೋನಿಷ್ಠೆಯನ್ನು ಕಳೆದುಕೊಂಡಿದ್ದರಿಂದ ಆಕೆಗೆ ಅಂದು ಮರಳಿನಿಂದ ಗಡಿಗೆ ಮಾಡಲಾಗಲಿಲ್ಲ. ಕೊನೆಗೂ ವಿಫಲತೆಯಿಂದ ಬರಿಗೈಯಲ್ಲಿ ಆಶ್ರಮಕ್ಕೆ (ತಡವಾಗಿ) ವಾಪಾಸು ಬಂದಳು. ಪವಿತ್ರ ಜಲವಿಲ್ಲದೇ ಬಂದ ತನ್ನ ಸತಿಯನ್ನು ಕಂಡ ಋಷಿಯು ತನ್ನ ದಿವ್ಯದೃಷ್ಟಿಯಿಂದ ನಡೆದ ಪ್ರಸಂಗವನ್ನೆಲ್ಲಾ ಅರಿತನು. ತನ್ನ ನಿಷ್ಠೆಯನ್ನೇ ಕಳೆದುಕೊಂಡಂತಹ ಸತಿ ನನಗೆ ಬೇಡವೆಂದು ಕೋಪಿಸಿಕೊಂಡು, ಅವಳು ತನ್ನ ರೂಪ, ಯೌವ್ವನ ಕಳೆದುಕೊಳ್ಳುವಂತೆ ಶಾಪ ನೀಡಿ ಆಶ್ರಮದಿಂದ ಹೊರಕ್ಕೆ ಹಾಕಿದನು.

ಹೀಗೆ ತನ್ನ ರೂಪ, ಯೌವ್ವನ ಹಾಗೂ ಪತಿಯ ಆಶ್ರಯ ಕಳೆದುಕೊಂಡ ರೇಣುಕ ಹತ್ತಿರದ ಹಳ್ಳಿಗಳಲ್ಲಿ ಅನ್ನ, ಆಶ್ರಯ ಬೇಡುತ್ತಾ ಅಲೆಯುವಾಗ, ಒಂದು ದಿನ ದೇವತೆಗಳ ವೈದ್ಯರಾದ ಅಶ್ವಿನಿಕುಮಾರರು ಈ ಮಾರ್ಗವಾಗಿ ದೇವಲೋಕಕ್ಕೆ ಹಿಂದಿರು-ಗುವಾಗ ರೋಗಗ್ರಸ್ಥಳಾದ ಹಾಗೂ ಕುರೂಪಳಾದ ರೇಣುಕೆಯನ್ನು ಕಂಡು ತಮ್ಮ ಅಂತರಾತ್ಮದಲ್ಲಿರುವ ವಿದ್ಯೆಯನ್ನು ಉಪಯೋಗಿಸಿ ಆಕೆಗೆ ಮತ್ತೆ ರೂಪ, ಯೌವ್ವನ

ಕರುಣಿಸಿದರು. ಹೀಗೆ ಶಾಪ ವಿಮೋಚನೆಯಿಂದ ಬಂದ ತನ್ನ ಸತಿಯನ್ನು ಜಮದಗ್ನಿ ಸ್ವಾಗತಿಸಿ ಮತ್ತೆ ಆಶ್ರಯ ನೀಡಿದನು.

ಈ ಮೇಲಿನ ಕಥೆಗೆ ಭಿನ್ನವಾದ ಕೆಲವು ಕಥೆಗಳು ಹೀಗಿವೆ :

1) ತಾನಿತ್ತ ಶಾಪದ ಪರಿಹಾರಕ್ಕೆ ತನ್ನ ಸತಿ ಇತರರ ನೆರವು ಪಡೆದದ್ದು ಸಹಿಸದೆ ಆಕೆ ತನಗೆ ಎಸಗಿದ ಅಪಮಾನವೆಂದು ತಿಳಿದು ಜಮದಗ್ನಿಯು ಆಕೆಯ ಶಿರಚ್ಛೇದ ಮಾಡಲು ತನ್ನ ಮಕ್ಕಳನ್ನು ಕರೆದಾಗ ಮೊದಲ ನಾಲ್ವರು (ನಪುಂಸಕರಾಗಿದ್ದರೆಂದು ಅಥವಾ ಪಾಪ ಕೃತ್ಯಕ್ಕೆ ಅಂಜಿದರೆಂದು ಸ್ಥಳಪುರಾಣದಲ್ಲಿದೆ) ಈ ಆಜ್ಞೆಯನ್ನು ನಿರಾಕರಿಸುತ್ತಾರೆ. ಇದರಿಂದ ಕುಪಿತನಾದ ಜಮದಗ್ನಿ ಇವರನ್ನು ಶಪಿಸುತ್ತಾನೆ. ನಂತರ ಕೊನೆಯ ಮಗ ಪರಶುರಾಮ ದೂರದ ಕಾಡಿನಲ್ಲಿ ತಪಸ್ಸಿನಲ್ಲಿರಲು ಇವನನ್ನು ಕರೆಯುತ್ತಾನೆ. ಬಂದವನೆ ಮರು ಮಾತಿಲ್ಲದೆ ತನ್ನ ತಂದೆಯ ಆಜ್ಞೆಯನ್ನು (ಪಿತೃವಾಕ್ಯ ಪರಿಪಾಲನೆಯಿಂದು) ಒಪ್ಪಿಕೊಂಡು ತನ್ನ ತಾಯಿಯ ಶಿರವನ್ನು (ಪರಶು–ಕೊಡಲಿ) ಕೊಡಲಿಯಿಂದ ರಭಸವಾಗಿ ಕಡಿದನು. ಇದರಿಂದ ಜಮದಗ್ನಿ ಅತ್ಯಂತ ಸಂತೋಷವಾಗಿ ಪರಶುರಾಮನಿಗೆ ವರವೊಂದನ್ನು ಬೇಡುವಂತೆ ಹೇಳುತ್ತಾನೆ. ಪರಶುರಾಮ ತನ್ನ ತಾಯಿಯ ಪುನರ್ಜನ್ಮ ತಳೆಯುವಂತೆ ಬೇಡಿಕೊಂಡಾಗ ರೇಣುಕೆಯನ್ನು ಜೀವಂತಗೊಳಿಸುತ್ತಾನೆ.

2) ಇನ್ನೊಂದು ಕಥೆ ಹೀಗಿದೆ.:

ತನ್ನ ಮಗನ ಕೋರಿಕೆಯಂತೆ ಜಮದಗ್ನಿ ತನ್ನ ಸತಿಯನ್ನು ಜೀವಂತಗೊಳಿಸಿದ. ಆದರೆ ಪತಿವ್ರತೆಯನ್ನು ಕಳೆದುಕೊಂಡ ಇಂತಹ ಸತಿಯೊಡನೆ ತಾನು ಬಾಳುವುದಿಲ್ಲವೆಂದು ಹೇಳಿ ಹಿಮಾಲಯಕ್ಕೆ ಹೊರಡುತ್ತಾನೆ. ರೇಣುಕಾ ತನ್ನಿಂದಾಗಿ ತನ್ನ ಮಕ್ಕಳು ಅನುಭವಿಸಿದ ತೊಂದರೆಗೆ ಮರುಗಿ ಆಶ್ರಮದಲ್ಲೇ ನೆಲೆಸಿ ಅವರನ್ನು ರಕ್ಷಿಸುತ್ತಾಳೆ. ಆಕೆ ನಿಂತ ನೆಲ ದೇವತಾ ಕ್ಷೇತ್ರ ವಾಯಿತು. ನಪುಂಸಕರಾಗಿದ್ದ ಮಕ್ಕಳು ಜೋಗಪ್ಪ–ಜೋಗಮ್ಮಗಳಾಗಿ ತಮ್ಮ ತಾಯಿಯ ಸೇವೆಯನ್ನು ಮಾಡುತ್ತಾ ಉಳಿದರು. ಇದನ್ನು ತಿಳಿದ ಭಕ್ತರು ಹರಕೆ ಮತ್ತು ಕಾಣಿಕೆ ಕಟ್ಟಿ ತಾವೂ ಸೇವೆ ಸಲ್ಲಿಸುತ್ತಾ ಬಂದಿರುವರು. ೪

ಅಧ್ಯಾಯ — ಐದು

ಹೊಸೂರಮ್ಮನ ಸಾಂಸ್ಕೃತಿಕ ಆಚರಣೆಗಳು :

5.1 ದೇವಸ್ಥಾನದ ಪರಿಚಯ

5.2 ಮೂರ್ತಿ ಪರಿಚಯ

5.3 ಪೂಜಾ ವಿಧಾನ

5.4 ಉಪದೇವತೆಗಳು

5.5 ಗ್ರಾಮದ ಇತರ ದೇವಸ್ಥಾನಗಳು

5.6 ಭಕ್ತರು

5.7 ನಂಬಿಕೆಗಳು

5.8 ಹರಕೆಗಳು

5.9 ಮಡಿ–ಮೈಲಿಗೆ

5.10 ವಾರ್ಷಿಕ ಆಚರಣೆಗಳು

——o o o——

5.1 ದೇವಸ್ಥಾನದ ಪರಿಚಯ :

ಶ್ರೀ ಕ್ಷೇತ್ರವಾದ ಹೊಸೂರಮ್ಮ ದೇವಸ್ಥಾನವು ಬಹಳ ಪ್ರಾಚೀನವೆನ್ನಲಾಗದಿದ್ದರೂ ಸುಮಾರು 16ನೇ ಶತಮಾನದೆಂದು ಶಾಸನದಿಂದ ತಿಳಿದುಬರುತ್ತದೆ. ದೇವಾಲಯದ ಒಳಗೆ ಮತ್ತು ಹೊರಗೆ ಅದ್ಭುತವಾದ ಹಾಗೂ ಹೆಚ್ಚಿನದಾದ ಕುಸುರಿ ಕಲೆಯನ್ನು ಮತ್ತು ಅಂತಹ ಕೆತ್ತನೆಯ ಮಹತ್ವವೇನೂ ಕಂಡುಬರುವುದಿಲ್ಲ.

ದೇವಾಲಯವು ಉತ್ತರಾಭಿಮುಖವಾಗಿದೆ. ದೇವಸ್ಥಾನದ ಮುಖ್ಯ ದ್ವಾರದ ಮೇಲೆ ಕಂಡುಬರುವ ಕಮಾನು ರೀತಿಯಲ್ಲಿರುವ ಚಿಕ್ಕ ಗೂಡಿನಲ್ಲಿ ಗಣೇಶ ಮೂರ್ತಿಗಳಿವೆ. ಈ ಕಮಾನುಗಳೆಲ್ಲ ಬಿದ್ದು ಹೋಗಿರುವ ಸಂದರ್ಭದಲ್ಲಿ ಮತ್ತೆ 1931ರಲ್ಲಿ ಗಾರೆ-ಸಿಮೆಂಟುಗಳಿಂದ ಕಟ್ಟಿದ್ದಾರೆ. ಈ ಮುಖ್ಯದ್ವಾರದ ಅಕ್ಕಪಕ್ಕದಲ್ಲಿ ನಾಲ್ಕು ಅಡಿ ಉದ್ದ ಅಗಲವಾಗಿರುವ ಕಟ್ಟೆಗಳಿವೆ. ಕಟ್ಟೆಯ ಮೇಲೆ ಆಧಾರಸ್ತಂಭವಾಗಿರುವ ಎರಡು ಕಂಬಗಳಿವೆ. ಕಂಬಗಳ ಮೇಲೆ ಉಬ್ಬು ಚಿತ್ರಗಳ ಕೆತ್ತನೆ ಇದೆ. ದೇವಸ್ಥಾನವು ನಾಲ್ಕು ಅಂಗಣಗಳಿಂದ ಒಳಗೊಂಡಿದೆ. ಏಳಡಿ ಚತುರಸ್ರವಾದ ಗರ್ಭಗುಡಿ, ಅದರ ಮೇಲೆ ಶಿಲೆಯ ಚಾಕಟ್ಟಿದೆ. ಸುಮಾರು 5-6 ಅಡಿ ಉದ್ದ ಅಗಲವಿರುವ ಗರ್ಭಗುಡಿಯೊಳಗೆ ಮಧ್ಯಭಾಗದಲ್ಲಿ ದೇವಿಯ ಮೂಲ ಬಿಂಬವಿದೆ. ಈ ಮೂರ್ತಿಯ ಕೆಳಗೆ ಬಾವಿ ಇದೆಯೆಂದು ಹಾಗೂ ಬಾವಿಯ ಕಟ್ಟೆಯ ಮೇಲೆ ದೇವಿಯು ಕೂತಿದ್ದಾಳೆಂದು ಅಲ್ಲಿನ ಪೂಜಾರಿಯೊಬ್ಬರಿಂದ ತಿಳಿದುಬರುತ್ತದೆ. ಗರ್ಭಗೃಹದ ಮುಂದೆ ಬಂದರೆ ಅಗಲ- ವಾದ ಸುಖನಾಸಿ ಇದೆ. ಸುಖನಾಸಿಯಲ್ಲಿ ಎರಡೂ ಕಡೆ ದಿಕ್ಕ ಚಿಕ್ಕ ಕಟ್ಟೆ ಕಟ್ಟಲಾಗಿದೆ. ಇದನ್ನು ಪೂಜಾ ಸಾಮಾಗ್ರಿಗಳನ್ನು ಇಟ್ಟುಕೊಳ್ಳಲು ಹಾಗೂ ಕಂಚಿನ ಲೋಹದಿಂದ ತಯಾರು ಮಾಡಲಾಗಿರುವ ನಾಗರ ಹಾವಿನ ಪ್ರತಿಮೆಗಳನ್ನು ಇಡಲು ಉಪಯೋಗಿಸಿಕೊಳ್ಳಲಾಗುತ್ತಿದೆ.

ಈ ಸುಖನಾಸಿಯ ಮುಂದಿರುವುದೇ ನವರಂಗ. ಇದು ಸುಮಾರು 10 ಅಡಿ ಉದ್ದ-ಅಗಲವಾಗಿದೆ. ಇಲ್ಲಿ ನಾಲ್ಕು ದೊಡ್ಡ ಕಲ್ಲಿನ ಕಂಬಗಳಿವೆ. ಇವು 16ನೇ ಶತಮಾನದ ಕಂಬಗಳಾಗಿವೆ. ಸುಮಾರು 8 ಅಡಿ ಎತ್ತರವಾದ ಈ ಕಂಬಗಳ ಮೇಲಿನಿಂದ ಕೆಳಕ್ಕೆ ಸುತ್ತಲೂ

ಕೆಲವು ಉಬ್ಬು ಚಿತ್ರಗಳ ಕೆತ್ತನೆ ಕಂಡುಬರುತ್ತದೆ. ಇತ್ತೀಚೆಗೆ ಸುಣ್ಣ ಬಣ್ಣವನ್ನು ಬಳಿಯಲಾಗಿದೆ. ಈ ನವರಂಗದಲ್ಲಿ ಎಡ ಮತ್ತು ಬಲ ಪಕ್ಕದಲ್ಲಿ ಅಂದರೆ ಪೂರ್ವ-ಪಶ್ಚಿಮ ದಿಕ್ಕಿನಲ್ಲಿ ಪ್ರವೇಶ ದ್ವಾರಗಳುಂಟು. ಈ ನವರಂಗದ ಬಲ ಮೂಲೆಯಲ್ಲಿ ಇತ್ತೀಚೆಗೆ ಕಟ್ಟಿಗೆಯಿಂದ ಮಾಡಲಾದ ಚಿಕ್ಕ ಕೊಠಡಿ ಕಂಡುಬರುತ್ತದೆ. ಅದರಲ್ಲಿ ಒಂದು ಗಣೇಶ ಮೂರ್ತಿ ಮತ್ತು ಎರಡು ಪಂಚಲೋಹದ ಉತ್ಸವ ಮೂರ್ತಿಗಳನ್ನು ಇಡಲಾಗಿದೆ. ಈ ಲೋಹದ ಮೂರ್ತಿಗಳಲ್ಲಿ ಒಂದು ಪರಶುರಾಮನ ವಿಗ್ರಹವಿದೆ. ಇದು 15" ಎತ್ತರವಾಗಿದೆ. ತಲೆಯ ಮೇಲೆ ಕಿರೀಟವಿದೆ, ಎಡಗೈಯಲ್ಲಿ ಬಿಲ್ಲು ಹಾಗೂ ಬಲ-ಗೈಯಲ್ಲಿ ಕುಠಾರವನ್ನು ಹಿಡಿದಿರುವ ಸ್ವಲ್ಪ ಅಭಂಗಗೊಂಡು ನಿಂತಿರುವ ಮೂರ್ತಿಯಾಗಿದೆ. ಆದರೂ ಇದು ನಿರ್ದೋಶವನ್ನೊಳಗೊಂಡಿದೆ. ಇನ್ನೊಂದು ದುರ್ಗಾದೇವಿಯ ಕಂಚಿನ ವಿಗ್ರಹವಿದೆ. ಇದು 8"ಎತ್ತರವಾಗಿದೆ. ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ಡಮರು ಇದೆ. ಹಾಗೂ ಕೆಳಗಿನ ಕೈಗಳಲ್ಲಿ ಖಡ್ಗ ಮತ್ತು ಪಾನಪಾತ್ರೆ ಆಯುಧಗಳಿವೆ. ಇದು ದುರ್ಗಾದೇವಿಯ ಅನೇಕ ರೂಪಗಳಲ್ಲಿರುವ ತಾಮಸ ರೂಪವಾಗಿ ಕಂಡುಬರುತ್ತದೆ. ಆದರೂ ಇದನ್ನು ಪರಿಶೀಲಿಸಿ ನೋಡಿದಾಗ ಒಂದು ರೀತಿಯಲ್ಲಿ ಚಾಮುಂಡಿಯ ಸ್ವರೂಪವೆಂತಲೂ ಕರೆಯಬಹುದು.

ಇದೇ ನವರಂಗದಲ್ಲಿ ಬಲ ಪಕ್ಕದ ಮೂಲೆಯಲ್ಲಿ ಅಂದರೆ ಕಟ್ಟಿಗೆಯ ಕೊಠಡಿಯ ಎದುರಿನಲ್ಲಿ ನವಗ್ರಹಗಳಿವೆ. ಇದನ್ನು ದಿನಾಂಕ 10-05-1978ರಲ್ಲಿ ಪ್ರತಿಷ್ಠಾಪಿಸಲಾಗಿದೆ. ಸೂರ್ಯ (ರವಿ), ಚಂದ್ರ (ಶಶಿ), ಕುಜ (ಮಂಗಳ), ಬುಧ (ಸೌಮ್ಯ), ಗುರು (ಬೃಹಸ್ಪತಿ), ಶುಕ್ರ (ಭಾರ್ಗವ), ಶನಿ (ಮಂದ), ರಾಹು ಕೇತು , ಎಂದು ಒಂಭತ್ತು ಗ್ರಹಗಳನ್ನು ಎತ್ತರದಲ್ಲಿ ಜಗಲಿಯಾಕಾರವಾಗಿರುವ ಕಟ್ಟೆಯ ಮೇಲೆ ಕಂಡುಬರುತ್ತವೆ. ಇತ್ತೀಚೆಗೆ ಪುನಾದ ಭಕ್ತರೊಬ್ಬರು ಸುಮಾರು ನಲವತ್ತೈದು ಸಾವಿರ ರೂಪಾಯಿಗಳ ವೆಚ್ಚದಲ್ಲಿ ನವರಂಗದ ಮುಂದಿನ ದ್ವಾರಕ್ಕೆ ಕಟ್ಟಿಗೆಯ ಬಾಗಿಲು, ಅಕ್ಕಪಕ್ಕದಲ್ಲಿರುವ ದ್ವಾರಗಳಿಗೆ ಮತ್ತು ಗರ್ಭಗುಡಿಯ ದ್ವಾರಕ್ಕೆ ಕಬ್ಬಿಣದ ಬಾಗಿಲುಗಳನ್ನು ಮಾಡಿಸಿ ಕೊಟ್ಟಿರುವುದಾಗಿ ಅಲ್ಲಿನ ಪೂಜಾರಿಯಿಂದ ತಿಳಿದುಬಂದಿದೆ.

ನವರಂಗದಿಂದ ಹೊರಬಂದಾಗ ಒಂದು ಮುಖ ಮಂಟಪ ಕಾಣುತ್ತದೆ. ಈ ಮಂಟಪದಲ್ಲಿ ಬಾಗಿಲಿನ ಇಕ್ಕೆಡೆಗಳಲ್ಲಿ ಅತೆತ್ತರವಾದ ಸುಮಾರು 8 ಅಥವಾ 9 ಅಡಿ ಎತ್ತರವಾದ ಹಾಗೂ ಮನುಷ್ಯನಾಕಾರವಾದ ಈ ಕಲ್ಲಿನ ಮೂರ್ತಿಗಳು ಒಂಟಿ ಕಾಲಿನ ಮೇಲೆ ನಿಂತುಕೊಂಡಿವೆ. ಇವುಗಳನ್ನು ದ್ವಾರಪಾಲಕರೆಂದು ಕರೆಯಲಾಗುತ್ತದೆ. ತಲೆಯ ಮೇಲೆ ಕಿರೀಟವಿದೆ, ನಾಲ್ಕು ಕೈಗಳಿವೆ, ಹಿಂದಿನ ಬಲಗೈಯಲ್ಲಿ ತ್ರಿಶೂಲ, ಹಿಂದಿನ ಎಡಗೈಯಲ್ಲಿ ಡಮರುಗ ಮತ್ತು ಮುಂದಿನ ಬಲಗೈಯಲ್ಲಿ ತೋರುಹಸ್ತ, ಮುಂದಿನ ಎಡಗೈಯಲ್ಲಿ ಗದೆ ಕಂಡುಬರುತ್ತದೆ. ಅಲ್ಲದೆ ಕೊರಳಲ್ಲಿ ರತ್ನಹಾರದ ಕೆತ್ತನೆ ಇದೆ. ಒಟ್ಟಾರೆ ವಿಶಾಲವಾದ ಈ ದೊಡ್ಡ ಮೂರ್ತಿಗಳು ಕ್ರಿ.ಶ 16ನೆಯ ಶತಮಾನ—ದ್ದೆಂದು ಕೆಲ ಮೂಲಗಳಿಂದ ತಿಳಿದುಬರುತ್ತದೆ. ಈ ನವರಂಗದ ಸ್ಥಳದಲ್ಲಿ ನಾಲ್ಕು ಬೃಹತ್ತಾದ ಕಲ್ಲಿನ ಕಂಬಗಳಿವೆ. ಈ ಕಂಬಗಳ ಮೇಲೆ ಕೆಲವು ಉಬ್ಬು ಚಿತ್ರಗಳ ಕೆತ್ತನೆ ಬಹಳ ಸುಂದರವಾಗಿ ಕಾಣುತ್ತಿದೆ. ಇಲ್ಲಿಯೇ ಎಡಗಡೆ ಮೂಲೆಯಲ್ಲಿ ಒಂದು ಶಾಸನವಿದೆ. ಈ ಮುಖ ಮಂಟಪಕ್ಕೆ ಹೊಂದಿಕೊಂಡಂತೆ ವಿಶಾಲವಾದ ಹಾಗೂ ಒಟ್ಟು ಇಪ್ಪತ್ತು ಕಂಬಗಳಿಂದೊಡಗೂಡಿದ ಮಂಟಪವಿದೆ. ಇಲ್ಲಿನ ಒಂದು ಕಂಬದಲ್ಲಿ ಹಾಗೂ ಸುತ್ತಲೂ ಶಾಸನವನ್ನು ಕೆತ್ತಲಾಗಿದೆ. ಈ ಲಿಪಿಯನ್ನು ವಿಜಯನಗರದ ಕಾಲದ್ದೆಂದು ತಿಳಿದು—ಬರುತ್ತದೆ. ಇಲ್ಲಿನ ಇಪ್ಪತ್ತು ಕಂಬಗಳ ಮೇಲೂ ಉಬ್ಬು ಚಿತ್ರಗಳ ಕೆತ್ತನೆ ಕಂಡು—ಬರುತ್ತದೆ.

ಇನ್ನು ಗರ್ಭಗುಡಿಯ ಮೇಲೆ ಒಂದು ಚಿಕ್ಕ ಗೋಪುರವಿದೆ. ಇದು ಚಾಲುಕ್ಯ ಶೈಲಿಯಲ್ಲಿದೆ. ಇದನ್ನು ಕಡುಶರ್ಕರ ಪಾಕದಿಂದ ಹಾಗೂ ಗಾರೆಯಿಂದ ನಿರ್ಮಿಸಲಾಗಿದೆ. ನವರಂಗ ಹಾಗೂ ಮುಖ ಮಂಟಪದ ಮೇಲೆ ಸುತ್ತಲೂ ತುದಿಯ ಭಾಗದಲ್ಲಿ ಗಾರೆಯಿಂದ ಮಾಡಲಾದ ಅಳಿದುಳಿದ ಮೂರ್ತಿಗಳು ಕಂಡುಬರುತ್ತವೆ. ಅಲ್ಲದೆ ಇಲ್ಲಿ ಸಿಂಹ ಹಾಗೂ ಕನ್ನಿಕಾ ಶಿಲ್ಪಗಳಿವೆ. ಕೆಲವಾರು ವರುಷಗಳ ಹಿಂದೆ ಎಲ್ಲವೂ ಛಿದ್ರವಾಗಿರುವುದಾಗಿ ಅಲ್ಲಿನ ಜನರು ಹೇಳುತ್ತಾರೆ. ಮುಖ ಮಂಟಪದ ಮುಂದಿನ ಮೇಲ್ಭಾಗದಲ್ಲಿ ಇತ್ತೀಚೆಗೆ ನಿರ್ಮಾಣವಾದ ನಾನಾ ಬಣ್ಣಗಳಿಂದ ರಚಿಸಲಾದ ಬಹಳ ಸೊಗಸಾಗಿರುವ ದೇವಿಯ ಮೂರ್ತಿ—ಗಳಿವೆ. ಅಲ್ಲದೆ ಬಹಳ ಎತ್ತರವಾದ ಬಲಿಪೀಠವು ಮುಖ ಮಂಟಪದ ಮುಂದೆ ಇದೆ. ಜಾತ್ರೆ ಯಲ್ಲಿ ಪಾಯಸ ಮಾಡಲು ಉಪಯೋಗಿಸುವ ಚಿಕ್ಕದಾದಕಪ್ಪು ಕಲ್ಲಿನ ಮೂರು ಗುಂಡುಗಳಿವೆ. ಇವುಗಳ ಮುಂದೆ ಅಂದರೆ ಬಲಿ ಪೀಠದ ಮುಂದೆ ಎತ್ತರವಾದ ಕಟ್ಟೆಯ ಮೇಲೆ ಚಿಕ್ಕದಾದ ಗರುಡಗಂಬವಿದೆ. ಇದರ ಪಕ್ಕದಲ್ಲಿ ಹಾಗೂ ದೇವಸ್ಥಾನದ ವಿಶಾಲವಾದ ಅಂಗಳದ ಬಲಮೂಲೆಯಲ್ಲಿ ಕೋಟೆಯ ಅವಶೇಷದ ಗೋಡೆಗಳು ಕಂಡುಬರುತ್ತವೆ.

ಇನ್ನು ದೇವಾಲಯದ ಸುತ್ತಲೂ ಕಲ್ಲಿನ ಪಾಳಿ (ಕಾಂಪಾಂಡು) ಕಟ್ಟಲಾಗಿದೆ. ಹಾಗೂ ಪಾಳಿಯ ಒಳ ಆವರಣದಲ್ಲಿ ಅಂದರೆ ಗುಡಿಯ ಸುತ್ತಲೂ ಹಾಸು ಬಂಡೆಗಳಿಂದೊಡಗೂಡಿದ ದೊಡ್ಡದಾದ ಅಂಗಳವಿದೆ. ಈ ದೇವಾಲಯದ ಮುಖ ಮಂಟಪವನ್ನು ಪ್ರವೇಶಿಸಲು ಈ ಹಿಂದೆ 3–4 ಮೆಟ್ಟಲುಗಳು ಹಾಗೂ ಎಡ ಮತ್ತು ಬಲ ಭಾಗದ ತುದಿಯಲ್ಲಿ ಆನೆಗಳ ವಿಗ್ರಹಗಳು ಇದ್ದುವೆಂದು ತಿಳಿದುಬರುತ್ತದೆ. ಒಟ್ಟಾರೆ ಈ ದೇವಾಲಯದ ಹಿಂದೆ ಪ್ರದಕ್ಷಿಣ ಪಥವು ಸುಮಾರು ಇಪ್ಪತ್ತು ವರುಷಗಳ ಹಿಂದೆ ಮೂರ್ನಾಲ್ಕು ಅಡಿ ತಗ್ಗಿನಲ್ಲಿ ಇತ್ತೆಂದೂ ಅನಂತರ ಇತ್ತೀಚೆಗೆ 8–10 ವರುಷಗಳ ಹಿಂದೆ ಮಣ್ಣಿನಿಂದ ಅದರ ತಳವನ್ನು ಮೇಲಕ್ಕೆತ್ತರಿಸಿ ಚಿಕ್ಕಚಿಕ್ಕ ಕಲ್ಲಿನ ಹಾಸು ಬಂಡೆಗಳನ್ನು ಹಾಕಲಾಗಿದೆ. ಆದ್ದರಿಂದ ಆ ಮೆಟ್ಟಲುಗಳೂ ಹಾಗೂ ಆನೆಗಳು ನೆಲದಲ್ಲಿ ಹೂತು ಹೋಗಿರುವುದು ಈಗಲೂ ಕಂಡುಬರುತ್ತವೆ. ಇಲ್ಲಿ ಈಗ ಕಾಣುತ್ತಿರುವ ವ್ಯತ್ಯಾಸವನ್ನು ಎರಡೂ ಮಹಾದ್ವಾರಗಳ ಮುಂದಿರುವ ತಗ್ಗನ್ನು ನೋಡಿ ಗುರುತಿಸಬಹುದಾಗಿದೆ.

ಈ ದೇವಸ್ಥಾನವನ್ನು ಪ್ರವೇಶಿಸಲು ಉತ್ತರದಲ್ಲಿ ಹಾಗೂ ಪಶ್ಚಿಮದಲ್ಲಿ ಎರಡು ಮಹಾದ್ವಾರಗಳಿವೆ. ಉತ್ತರದ ದ್ವಾರ ಬಾಗಿಲಿನ ಪ್ರವೇಶದ್ವಾರದ ಅಕ್ಕಪಕ್ಕದಲ್ಲಿ ಅಗಲವಾದ ಕಟ್ಟೆಗಳಿವೆ. ಮೇಲ್ಭಾಗದಲ್ಲಿ ಮೂರ್ನಾಲ್ಕು ಚಿಕ್ಕ ಕಮಾನುಗಳಿಂದ ಕೂಡಿದ ಗೂಡುಗಳಿವೆ. ಆದರೆ ಯಾವುದೇ ದೇವರ ಮೂರ್ತಿಗಳಿಲ್ಲ. ಇನ್ನು ಪಶ್ಚಿಮದ ಮಹಾದ್ವಾರದ ಮೇಲ್ಭಾಗದಲ್ಲಿ ಎಡ ಮತ್ತು ಬಲ ಪಕ್ಕದಲ್ಲಿ ಚಿಕ್ಕ ಗೋಪುರಗಳಿವೆ. ನಡುವೆ ತುಸು ಎತ್ತರವಾದ ಗೋಪುರವಿದೆ. ಈ ಮೂರು ಗೋಪುರಗಳ ಮೇಲೆ ಕುಸುರಿ ಕೆತ್ತನೆ ಕಂಡುಬಂದರೂ ಸರಿಯಾಗಿ ಕಾಣುವುದಿಲ್ಲ ಎಲ್ಲವೂ ಭಗ್ನವಾಗಿದೆ. ಅಲ್ಲದೆ ಜಾತ್ರೆಯ ಸಂದರ್ಭದಲ್ಲಿ ಸುಣ್ಣ ಹಚ್ಚುತ್ತಾ ಬಂದಿರುವುದರಿಂದ ಏನನ್ನೂ ಗುರುತಿಸಲು ಸಾಧ್ಯವಾಗಲಾರದಾಗಿದೆ.

ಒಟ್ಟಾರೆ ಈ ದೇವಸ್ಥಾನವು ಬಹಳ ಸುಂದರವಾಗಿ ಕಾಣುತ್ತಿದೆ. ಇದರ ಸುತ್ತಲೂ ಕಬ್ಬಿನ ಹಾಗೂ ಭತ್ತದ ಗದ್ದೆಗಳು ಸದಾ ಹಚ್ಚ ಹಸಿರಿನಿಂದ ಕಂಗೊಳಿಸುತ್ತವೆ. ಸದಾ ತಂಪಾಗಿರುವ ಈ ಪ್ರದೇಶವು ಅನೇಕ ಭಕ್ತರಿಗೆ ಆಕರ್ಷಣೆಯನ್ನುಂಟು ಮಾಡುತ್ತಿದೆ.

5.2 ಮೂರ್ತಿಯ ಪರಿಚಯ :

ಹೊಸೂರಮ್ಮ ದೇವಿಯನ್ನು 'ಏಕನಾಥೇಶ್ವರಿ' ಎಂಬ ಹೆಸರಿನಿಂದ 1435ರಲ್ಲಿ ಕರೆಯಲಾಗುತ್ತಿತ್ತೆಂಬ ವಿಷಯ ಅಲ್ಲಿನ ಶಾಸನವೊಂದರಿಂದ ತಿಳಿದುಬರುತ್ತದೆ. ಗರ್ಭಗೃಹದಲ್ಲಿರುವ ಈ ದೇವಿಯ ವಿಗ್ರಹವು ಒಂದು ವಿಚಿತ್ರವಾದ ಸ್ವರೂಪದ್ದಾಗಿದೆ. ಸುಮಾರು ಎರಡು ಅಡಿ ಎತ್ತರವಿರುವ ಈ ಕಲ್ಲಿನ ಶಿಲೆಯನ್ನು ಎರಡು ಭಾಗಗಳಾಗಿ ನೋಡಬಹುದು. ಒಂದು ಮೇಲ್ಭಾಗದಲ್ಲಿ ಕಾಣುವುದೇ ಶಿರಸ್ಸೆಂದು ಗುರುತಿಸಿ ಅದು ರುಂಡವೆಂತಲೂ ಮತ್ತು ದುಂಡಾಕಾರವಾಗಿ ಇದು ಕಾಣುತ್ತಿದೆ. ಇದು ದೊಡ್ಡದಾದ ಕೊಡಪಾನದ ಅಗಲವಾದ ಬಾಯಿಯಂತೆ ಗೋಚರಿಸುತ್ತದೆ. ಇನ್ನೊಂದು ಕೆಳಭಾಗವು ಕೊಡಪಾನದ ಬಾಯಿಯಂತಿದೆ. ಇದನ್ನು ಕೆಳಗೆ ಮಾಡಿ ಬಾಯಿಯಾಕಾರವನ್ನು ಮುಚ್ಚಿಟ್ಟ ಹಾಗೆ ಕಾಣಿಸುತ್ತಿದೆ. ಶಿರಸ್ಸಿನ ಮೇಲ್ಭಾಗದಲ್ಲಿ ಸ್ವಲ್ಪ ಹಿಂಭಾಗದಲ್ಲಿ ಎರಡೂ ಕಡೆಗಳಲ್ಲಿ ಸ್ವಲ್ಪ ತಗ್ಗಾಗಿದೆ. ಇದನ್ನು ದೇವಿಯ ಕಂಗಳೆಂದು ಅಲ್ಲಿನ ಪೂಜಾರಿಯೊಬ್ಬರು ಹೇಳುತ್ತಾರೆ. ಸಾಮಾನ್ಯವಾಗಿ ಇತರೇ ಶಿಷ್ಟ ದೇವತೆಗಳಿಗಿರುವಂತೆ ಕಣ್ಣು, ಮೂಗು, ಕೈ-ಕಾಲುಗಳು ಯಾವುದೇ ಪೂರ್ಣ ದೇಹಾಕೃತಿಯ ರಚನೆ ಈ ಮೂರ್ತಿಗೆ ಇಲ್ಲ. ಏನೂ ಕೆತ್ತನೆ ಯಿಲ್ಲದೆ ನಿರಾಡಂಬರವಾಗಿ ಹಾಗೂ ಬಹಳ ನುಣುಪಾದ ಶಿಲೆ ಇದಾಗಿದೆ. ಒಟ್ಟನಲ್ಲಿ ಹೇಳುವುದಾದರೆ ಈ ಬಿಂಬವನ್ನು ದುರ್ಗಾದೇವಿಯ ಲಿಂಗಾಕೃತಿಯೆಂಬುದಾಗಿಯೂ ಅಥವಾ ದುರ್ಗಾದೇವಿಯ ವಾಹನವಾದ ಸಿಂಹದ ಶಿರಸ್ಸೆಂದೂ ಹೇಳಬಹುದು. ಈ ರೀತಿಯಾಗಿ ವಿವರಿಸಿ ಹಾಗೂ ಅದೊಂದು ಊಹೆ ಮಾತ್ರವೆನ್ನಬಹುದಷ್ಟೆ. ಈಕೆ ಲಕ್ಷ್ಮೀದೇವಿಯ ರೂಪದಿಂದ ಅತೀ ಸೌಮ್ಯ ಹಾಗೂ ಮಂದಸ್ಮಿತಳಾಗಿ ಶಾಂತಿಯುಂಬ ಕಂಗೊಳಿಸುತ್ತಾಳೆ. ಇದೇ ರೀತಿ ತುಂಗಭದ್ರ ನದಿಯ ಆಚೆ ದಡದಲ್ಲಿರುವ ಹುಲಿಗೆಮ್ಮ ದೇವತೆಯೂ ತೀಕ್ಷ್ಣ ವಾದ ಉಗ್ರಸ್ವರೂಪವಾಗಿ ಕಾಣುತ್ತಾಳೆಂದು ಜನರು ಹೇಳುತ್ತಾರೆ.

ಹೀಗೆ ದುರ್ಗೆಯನ್ನು ಲಿಂಗದ ರೂಪದಲ್ಲಿ ಆರಾಧನೆ ಮಾಡುವ ಸಂಪ್ರದಾಯ ಬಹಳ ಪ್ರಾಚೀನವಾಗಿದ್ದಿರಬಹುದು. ಈ ತೆರನಾದ ನಿರ್ದೇಶನವು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಸರ್ವೇಸಾಧಾರಣವೆಂದೂ ಹಾಗೂ ಪ್ರಾಚೀನವಾದ ಎಲ್ಲಾ ಪ್ರಧಾನ ದುರ್ಗಾ

ಕ್ಷೇತ್ರಗಳಲ್ಲಿಯೂ ಸಹ ಕಾಣಬರುತ್ತದೆಂದು 'ಸ್ಥಳಪುರಾಣ'ದಿಂದ ತಿಳಿದುಬರುತ್ತದೆ. ಇಲ್ಲಿರುವ ಲಿಂಗ ಸ್ವರೂಪದ ಮೂರ್ತಿಯನ್ನು ಚಾಮುಂಡಾ ರೂಪಭೇದವೆಂದು ಕರೆಯುತ್ತಾರೆ. ಇಲ್ಲಿ ಮತ್ತೊಂದು ವಿಶೇಷವೆಂದರೆ, ಈ ಚಾಮುಂಡಾ ಎಂಬುವವಳು ಸಪ್ತ ಮಾತೃಕೆಯರಲ್ಲಿ ಒಬ್ಬಳೆನ್ನಲಾಗಿದೆ. ಆದರೆ ಇವಳು ದುರ್ಗೆಯ ತಾಮಸ ರೂಪವನ್ನು ಹೊಸೂರಮ್ಮನಲ್ಲಿ ತಾಳಿದಾಳೆಂದು ಜನಪದರು ಹೇಳುತ್ತಾರೆ.

ಇನ್ನು ಹೊಸೂರಮ್ಮ ದೇವಿಯ ತಲೆಯಭಾಗದಲ್ಲಿ ಎರಡು ಸಾಲಿಗ್ರಾಮಗಳಿವೆ. ಶ್ರೀ ಲಕ್ಷ್ಮೀನರಸಿಂಹ ಸಾಲಿಗ್ರಾಮ ಇನ್ನೊಂದು ವಾಸುದೇವ ಸಾಲಿಗ್ರಾಮ. ಇದಲ್ಲದೆ ಕಪ್ಪು ಕಲ್ಲಿನ ಚೇರು ಚಕ್ರವೂ ಸಹ ದೇವಿಯ ಮುಂದೆ ಕಂಡುಬರುತ್ತದೆ. ಈ ಸಾಲಿಗ್ರಾಮಗಳು ಹೇಗೆ ಈ ದೇವತೆ ಪಡೆದಳೆಂಬುದನ್ನು ಐತಿಹ್ಯದಲ್ಲಿ ತಿಳಿಸಲಾಗಿದೆ.

5.3 ಪೂಜಾವಿಧಾನ :

ಸುಮಾರು 15–20 ವರುಷಗಳ ಹಿಂದೆ ನಿತ್ಯವೂ ಪ್ರಾತಃಕಾಲ ಹಾಗೂ ಸಾಯಂಕಾಲದ ಸಮಯದಲ್ಲಿ ಸಮಾಳ, ಸನಾದಿ, ತಾಳ, ಶೃತಿ ಮುಂತಾದ ವಾದ್ಯ ಪರಿಕರಗಳ ಸಮೇತವಾಗಿ ಪೂಜಾರಿಯು ಬೆಳಿಗ್ಗೆ ನದಿಗೆ ಹೋಗಿ ಸ್ನಾನಾದಿಗಳನ್ನು ಮುಗಿಸಿಕೊಂಡು ವಾಪಾಸು ಬರುತ್ತಿದ್ದನಂತೆ. ನಂತರ ಅದೇ ವಾದ್ಯಗಳೊಂದಿಗೆ ಬಹಳ ವಿಜೃಂಭಣೆಯಿಂದ ಪೂಜೆ, ಮಂಗಳಾರತಿಯನ್ನು ಹೊಸೂರಮ್ಮ ದೇವಿಗೆ ಅರ್ಪಿಸಲಾಗುತ್ತಿತ್ತೆಂದು ಹಾಗೂ ಸುತ್ತ ಇರುವ ಉಪ ದೇವತೆಗಳಿಗೂ ಸಹ ಇದೇ ರೀತಿಯಲ್ಲಿ ಪೂಜೆ ಸಲ್ಲಿಸಲಾಗುತ್ತಿತ್ತೆಂದೂ ಅಲ್ಲಿಯೇ ವಾಸವಾಗಿರುವ ಶ್ರೀ ಕಣಿವೆಪ್ಪನವರು ಹೇಳುತ್ತಾರೆ. ಅಲ್ಲದೆ ಮಂಗಳವಾರ, ಶುಕ್ರವಾರದ ದಿನಗಳಲ್ಲಿ ಮತ್ತು ಅಮಾವಾಸ್ಯೆ ಹಾಗೂ ಹುಣ್ಣಿಮೆ ದಿನಗಳಲ್ಲಿ ವಿಶೇಷ ಪೂಜೆ ನಡೆಯುತ್ತಿತ್ತೆಂದು ಈ ಸಂದರ್ಭದಲ್ಲಿ ತೊಟ್ಟಿಲೋತ್ಸವ, ಪಲ್ಲಕ್ಕಿ ಉತ್ಸವದ ಕಾರ್ಯಕ್ರಮಗಳು ಬಹಳ ವೈಭವದಿಂದ ನಡೆಯುತ್ತಿತ್ತೆಂದೂ ಹೇಳುತ್ತಾರೆ. ಅದೇ ರೀತಿ ದೇವಸ್ಥಾನದ ಸುತ್ತ ಇರುವ ಉಪದೇವತೆಗಳಿಗೂ ವಿಶೇಷ ಪೂಜೆ ಅರ್ಪಿಸಲಾಗುತ್ತಿದ್ದಿತ್ತೆಂದೂ ಸಹ ಅವರು ಹೇಳುತ್ತಾರೆ.

ಇತ್ತೀಚೆಗೆ ಬ್ರಾಹ್ಮಣ ಪೂಜಾರಿಗಳಿಬ್ಬರು ಈ ದೇವಿಯ ಪೂಜೆಯನ್ನು ಮಾಡುತ್ತಾ ಬರುತ್ತಿದ್ದಾರೆ. ಈಗ ನಡೆಯುವ ಪೂಜೆ ಈ ರೀತಿಯಾಗಿದೆ.

ಹೊಸೂರಮ್ಮ ದೇವಿಯ ಅಂದರೆ ಶಿಲೆಯ ಮೇಲಿರುವ ಹೂ, ಪತ್ರಗಳನ್ನೆಲ್ಲಾ ಮೊದಲು ತೆಗೆಯುತ್ತಾರೆ. ಅದನ್ನೆಲ್ಲಾ ಹೊರಗೆ ಹಾಕದೇ ಸುಖನಾಸಿಯ ಮೂಲೆಯೊಂದರಲ್ಲಿ ಇಟ್ಟಿರುತ್ತಾರೆ. ದೇವಸ್ಥಾನಕ್ಕೆ ಬಂದ ಭಕ್ತರಿಗೆಲ್ಲಾ ಹಂಚುತ್ತಾರೆ. ಇನ್ನು ಶಿಲೆಯ ಮೇಲಿರುವ ಬೆಳ್ಳಿಯ ಕಣ್ಣು, ಬೆಳ್ಳಿಯ ಮೂರ್ತಿ ಹಾಗೂ ಸಾಲಿಗ್ರಾಮಗಳನ್ನು ಬೇರ್ಪಡಿಸಿ ಶುದ್ಧವಾದ ನೀರಿನಿಂದ ತೊಳೆದು ಹಾಗೆಯೇ (ಮೂರ್ತಿಯ ಮೇಲಿರುವ ಬೆಳ್ಳಿಯ ಮೂಗು ಹಾಗೂ ಮೀಸೆ, ಬಾಯಿಯನ್ನು ನಿತ್ಯ ತೆಗೆಯುವುದಿಲ್ಲ) ಮೂರ್ತಿಯನ್ನು ತೊಳೆದು ಬಟ್ಟೆಯಿಂದ ಒರೆಸುತ್ತಾರೆ. ಮೂರ್ತಿಯ ಕೆಳ ಭಾಗದಲ್ಲಿ ನಿಂತಿರುವ ನೀರನ್ನು ಬಟ್ಟೆಯ ಸಹಾಯದಿಂದೆತ್ತಿ ಆ ನೀರನ್ನು ಹೊರಗಿನ ತೆಂಗಿನ ಗಿಡಗಳಿಗೆ ಹಾಕುತ್ತಾರೆ. ನಂತರ ಗಂಧ,ಕುಂಕುಮ, ಅರಿಷಿಣವನ್ನು ಹಚ್ಚಿ ಯಕ್ಕಿಪತ್ರ, ಬಿಲ್ಪತ್ರ, ಹಾಗೂ ನಾನಾ ವಿಧವಾದ ಹೂಗಳಿಂದ ಸುಂದರವಾಗಿ ಅಲಂಕಾರ ಮಾಡುತ್ತಾರೆ. (ಬೆಳ್ಳಿಯ ತಗಡಿನಿಂದ ಮಾಡಿರುವ ಕಣ್ಣುಗಳಿಗೆ ಕಾಡಿಗೆಯನ್ನು ಕಣ್ಣುಗುಡ್ಡೆಗಳಾಕಾರವಾಗಿ ಮತ್ತು ದುಂಡಾಗಿ ಹಚ್ಚಿ ಮೂರ್ತಿಯ ಮೇಲೆ ಹೂಗಳ ಮಧ್ಯ ನೆತ್ತಿಯ ಎರಡೂ ಕಡೆಗಳಲ್ಲಿ ಸಾಲಿ ಗ್ರಾಮಗಳ ಜೊತೆಗೆ ಇಡುತ್ತಾರೆ.) ನಿತ್ಯವೂ ಪೂಜಾ ಸಮಯದಲ್ಲಿ ಕುಂಕುಮಾರ್ಚನೆ ನಡೆಯುತ್ತದೆ. ವಿಶೇಷವೇನೆಂದರೆ ನಿತ್ಯ ಪ್ರಾತ: ಕಾಲದ ಪೂಜಾ ಸಮಯದಲ್ಲಿ ಗರ್ಭಗುಡಿಯ ಬಾಗಿಲನ್ನು ಮುಚ್ಚಿರುತ್ತಾರೆ. ಬಂದಿರುವ ಭಕ್ತಾದಿಗಳನ್ನು ಒಳಗಡೆ ಬಿಟ್ಟುಕೊಡುವುದಿಲ್ಲ. ಎಲ್ಲಾ ಪೂಜೆ ಮುಗಿದ ನಂತರ ಬಾಗಿಲು ತೆರೆಯುತ್ತಾರೆ. ಅಲ್ಲದೆ ಹಿಂದಿನಂತೆ ವಾದ್ಯಗಳ ಬದಲಾಗಿ ಈಗ ಕೇವಲ ಗಂಟೆ ಮತ್ತು ಜಾಗಟೆಗಳನ್ನು ಬಲವಾಗಿ ಬಾರಿಸುತ್ತಾ ಪೂಜೆ ಸಲ್ಲಿಸುತ್ತಾರೆ. ಇದೇ ಸಮಯದಲ್ಲಿ ಮೂರ್ತಿಯ ಮುಂದಿರುವ ಶ್ರೀ ಚಕ್ರಕ್ಕೂ ಸಹ ಪೂಜೆ ಅರ್ಪಿಸಲಾಗುತ್ತದೆ. ಒಟ್ಟಾರೆ ನಿತ್ಯವೂ ಪೂಜೆಯು ಸುಮಾರು ಒಂದು ಅಥವಾ ಒಂದೂವರೆ ಗಂಟೆಗಳ ಕಾಲ ನಡೆಯುತ್ತದೆ.

ಇನ್ನು ದೇವಸ್ಥಾನದ ಹೊರ ಆವರಣದ ಸುತ್ತಲೂ ಇರುವ ಉಪದೇವತೆಗಳಿಗೆ ಇನ್ನೊಬ್ಬ ಬ್ರಾಹ್ಮಣ ಪೂಜಾರಿಯೊಬ್ಬರು ಪೂಜೆ ಸಲ್ಲಿಸುತ್ತಾರೆ. ಹೊಸೂರಮ್ಮನ ಪೂಜೆಯ ನಂತರ ಮುಖ ಮಂಟಪದ ಮುಂದೆ ಇರುವ ಹಾಗೂ ಜಾತ್ರೆಯಲ್ಲಿ ಉಪಯೋಗಿಸಬಹುದಾದ ಮೂರು ಕಲ್ಲಿನ ಗುಂಡುಗಳಿಗೂ ಹಾಗೂ ಬಲಿ ಪೀಠಕ್ಕೂ ಪೂಜೆ ಸಲ್ಲಿಸುತ್ತಾರೆ.

ವಿಶೇಷ ದಿನಗಳಾದ ಮಂಗಳವಾರ, ಶುಕ್ರವಾರ ದಿನಗಳಂದು ಭಕ್ತರ ಅಪೇಕ್ಷೆ ಮೇರೆಗೆ ಪಂಚಾಮೃತ ಅಭಿಷೇಕ ಅಥವಾ ಎಲೆ ಪೂಜೆ ಕಟ್ಟಿಸುವುದು, ಸಹಸ್ರನಾಮ ಅರ್ಚನೆ, ವಿವಿಧ ಹೂಗಳಿಂದ ಅಲಂಕಾರಗೊಳಿಸುವ ವಿಶೇಷ ಪೂಜೆಗಳೂ ಸಹ ಜರುಗುತ್ತವೆ. ಅಲ್ಲದೆ ತೊಟ್ಟಿಲೋತ್ಸವ ಕೂಡ ಆಚರಿಸಲಾಗುತ್ತದೆ. ಬಹಳ ಹಿಂದೆ ಪಲ್ಲಕ್ಕಿ ಸೇವೆ ನಡೆಯುತ್ತಿತ್ತೆಂದು ತಿಳಿದು ಬಂದರೂ ಈಗ ಕೇವಲ ಜಾತ್ರಾ ಸಮಯದಲ್ಲಿ ಮಾತ್ರ ಪಲ್ಲಕ್ಕಿ ಸೇವೆ ನಡೆಯುತ್ತದೆ.

5.4 ಉಪದೇವತೆಗಳ ಪರಿಚಯ :

ಒಳ ಆವರಣದಲ್ಲಿ ಅಂದರೆ ಮುಖ್ಯ ದೇವಸ್ಥಾನದ ಸುತ್ತಲೂ ಚಿಕ್ಕ ಚಿಕ್ಕ ಗುಡಿಗಳಿವೆ. ಅವುಗಳ ವಿವರಣೆ ಈ ಕೆಳಗೆ ವಿವರಿಸಲಾಗಿದೆ.

ಮೈಲಾರಲಿಂಗ ಮತ್ತು ಆನೆಕಲ್ಲ ಬಿಸಕಪ್ಪ :

ಹೊಸೂರಮ್ಮ ದೇವಸ್ಥಾನದ ಮುಂದೆ ಈಶಾನ್ಯ ಭಾಗದಲ್ಲಿ ಅತೀ ಚಿಕ್ಕದಾದ ಈ ದೇವಸ್ಥಾನದೊಳಗೆ ದುರ್ಗೆಯ ಶಿಲಾಮೂರ್ತಿ ಹಾಗೂ ಗಣೇಶನ ವಿಗ್ರಹವೂ ಕಂಡುಬರುತ್ತದೆ; ಇದಕ್ಕೆ 'ಆನೆಕಲ್ಲು ಬಿನಕಪ್ಪ' ಎಂದು ಜನರು ಕರೆಯುತ್ತಾರೆ. ಇಲ್ಲಿರುವ ದುರ್ಗಾ ಬಿಂಬವು ಮೈಲಾರಲಿಂಗ ಎಂದು ಕರೆಯುತ್ತಾರೆ. ಇದು ಸುಮಾರು ಕ್ರಿ.ಶ. 14–15ನೇ ಶತಮಾನದಷ್ಟು ಪ್ರಾಚೀನವಾಗಿದ್ದಿರಬಹುದು. ಇದು ದೇವಿಯ ಮುಖ್ಯ ದೇವಾಲಯದ ಶ್ರೀದೇವಿಯ ಗರ್ಭಗುಡಿಯ ಪಕ್ಕದಲ್ಲಿರುವ ಪಂಚಲೋಹದ ದುರ್ಗಾರೂಪವನ್ನೇ ಹೋಲುತ್ತದೆ. ಆದರೆ ಇದು ಕುಳಿತ ಭಂಗಿಯಲ್ಲಿದೆ. ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಪಾನಪಾತ್ರೆಗಳಿವೆ. ಇವಕ್ಕೆ ನಿತ್ಯವೂ ಬೆಳಿಗ್ಗೆ ಹಾಗೂ ಸಂಜೆ ಪೂಜೆ ನಡೆಯುತ್ತದೆ. ಈ ಗುಡಿಯು ಚಿಕ್ಕದಾದ ಕೊಠಡಿಯುಂದೊಡಗೂಡಿದೆ. ಸುಮಾರು 5–6 ಅಡಿ ಉದ್ದ–ಅಗಲವನ್ನು ಹೊಂದಿದೆ. ಮೇಲೆ ಗೋಪುರವಿಲ್ಲ. ಈ ಗುಡಿಯು ಮುಖ್ಯ ದ್ವಾರದ ಬಾಗಿಲಿಗೆ ಹೊಂದಿಕೊಂಡಿದೆ.

ಮಾತಂಗೇಶ್ವರ :

ಮುಖ್ಯ ದೇವಾಲಯದ ಹಿಂದೆ ಆಗ್ನೇಯ ದಿಕ್ಕಿನಲ್ಲಿರುವುದೇ ಮಾತಂಗೇಶ್ವರ ದೇವಾಲಯ. ಈ ಗರ್ಭಗುಡಿಯೊಳಗೆ ಕಪ್ಪು ಶಿಲೆಯ ಲಿಂಗವಿದೆ. ಹಂಪೆಯಲ್ಲಿಯೂ ಸಹ ಮಾತಂಗೇಶ್ವರ ಬೆಟ್ಟ ಕಂಡುಬರುತ್ತದೆ. ಈ ಗುಡಿಯ ಮೇಲ್ಭಾಗದಲ್ಲಿ ಅರ್ಧ ಹಾಳಾಗಿರುವ

ಗೋಪುರ ಕಂಡುಬರುತ್ತದೆ.

ಗರ್ಭಗುಡಿಯ ಮುಂದಿರುವ ಮಂಟಪದಲ್ಲಿ ನಾಲ್ಕು ಕಂಬಗಳಿವೆ. ಇದರಲ್ಲಿ ಒಂದು ಕಂಬದ ಮೇಲೆ ಶಾಸನವಿದೆ. ಹಾಗೂ ನಾಗರಹಾವು, ಲಜ್ಜಾಗೌರಿ ಮುಂತಾದ ಉಬ್ಬು ಚಿತ್ರಗಳ ಕೆತ್ತನೆ ಕಂಡುಬರುತ್ತದೆ. ಇಲ್ಲಿರುವ ಮೂರ್ತಿಗೆ ನಿತ್ಯವೂ ಪೂಜೆ ಮಾಡಲಾಗುತ್ತದೆ. ಈ ದೇವಸ್ಥಾನಕ್ಕೆ ಪ್ರದಕ್ಷಿಣಾ ಪಥವಿದ್ದು ಬಲಪಕ್ಕದಲ್ಲಿ ಕಲ್ಲಿನಲ್ಲಿ ಕೆತ್ತಿದ ನಾಗರಹಾವಿನ ಮೂರ್ತಿಗಳಿವೆ. ಈ ದೇವಸ್ಥಾನದ ಮುಂದೆ ಅಶ್ವತ್ಥನಾರಾಯಣ ವೃಕ್ಷ ಇದೆ. ಇದರ ಹತ್ತಿರ ಒಂದು ವೀರಗಲ್ಲು ಇದೆ.

<u>ಜಮದಗ್ನೀಶ್ವರ :</u>

ಮುಖ್ಯ ದೇವಾಲಯದ ದಕ್ಷಿಣ ಭಾಗದಲ್ಲಿ ಹಾಗೂ ದೇವಾಲಯದ ಹಿಂಬದಿಯಲ್ಲಿ 'ಜಮದಗ್ನೀಶ್ವರ' ಗುಡಿಯುಇದೆ. ಈ ಗುಡಿ ಚಿಕ್ಕದಾಗಿದ್ದು ಎಂಟು ಅಡಿ ಉದ್ದಗಲವಾಗಿದೆ. ಸುತ್ತ ಕಲ್ಲಿನ ಗೋಡೆ ಹೊಂದಿದ್ದು ಚಿಕ್ಕ ಬಾಗಿಲೂ ಇದೆ. ಈ ಮೂರ್ತಿಯ ಪಕ್ಕದಲ್ಲಿ ರೇಣುಕೆಯ ಮೂರ್ತಿ ಇದೆ. ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಈ ಗುಡಿಯ ಹೊರಭಾಗದಲ್ಲಿ ಎದುರಿಗೆ ಬಸವಣ್ಣ ಮೂರ್ತಿಯನ್ನು ಇತ್ತೀಚೆಗೆ ತಂದಿರಿಸಲಾಗಿದೆ. ಈ ದೇವಾಲಯಕ್ಕೆ ಮೇಲೆ ಗೋಪುರವಿಲ್ಲ. ಪ್ರದಕ್ಷಿಣಪಥ ಹೊಂದಿದ್ದು, ಬಾಗಿಲ ಬಳಿ ಕ್ಷೇತ್ರಪಾಲ ಎಂದು ಕರೆಯಲ್ಪಡುವ ಮನುಷ್ಯನ ಮೂರ್ತಿ ಇದೆ. ಕೈಯಲ್ಲಿ ಚಿಕ್ಕದಾದ ಕತ್ತಿಯನ್ನು ಹಿಡಿದು ನಿಂತಿರುವ ಈ ಮೂರ್ತಿಯನ್ನು ಬೇರೆಡೆಯಿಂದ ತಂದಿರಿಸಬಹುದು. ಇಲ್ಲಿನ ಮೂರ್ತಿಗಳು ಸುಮಾರು ಕ್ರಿ.ಶ 15ನೇ ಶತಮಾನದೆಂದು ತಿಳಿದುಬರುತ್ತದೆ.

<u>ದತ್ತಾತ್ರೇಯ ಮತ್ತು ಪರಶುರಾಮನ ಪಾದ :</u>

ಜಮದಗ್ನೀಶ್ವರ ಗುಡಿಯ ಎಡಗಡೆ ಹಾಗೂ ಮುಖ್ಯ ದೇವಸ್ಥಾನದ ನೈರುತ್ಯ ಭಾಗದಲ್ಲಿ ಈ ಚಿಕ್ಕ ದೇವಾಲಯ ಇದೆ. ಇದರಲ್ಲಿ ಚಿಕ್ಕದಾದ ಗರ್ಭಗುಡಿ ಮತ್ತು ಸುಖನಾಸಿ ಗಳಿವೆ. ಮೇಲ್ಭಾಗದಲ್ಲಿ ಗೋಪುರವಿಲ್ಲ. ಗರ್ಭಗುಡಿಯು 6 ಅಡಿ ಉದ್ದಗಲ ಮತ್ತು ಮುಂದಿನ ಜಾಗವು ಸಹ 5 ಅಡಿ ಉದ್ದಗಲದ ಮಿತಿ ಹೊಂದಿದೆ. ಈ ಗುಡಿಯೊಳಗೆ ದತ್ತಾತ್ರೇಯ ಮತ್ತು ಪರಶುರಾಮನ ಪಾದಗಳು ಕಂಡುಬರುತ್ತವೆ. ದೇವಸ್ಥಾನದ ಮುಂಭಾಗದಲ್ಲಿ ಮೇಲ್ಛಾವಣಿ ಹೊಂದಿದ್ದು ಇದನ್ನು 1931ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಒಳಗಡೆ ಅಷ್ಟದಿಕ್ಪಾಲರಲ್ಲಿ ಒಂದಾದ 'ಸೋಮ' ನ ಮೂರ್ತಿಇದೆ. ನಿತ್ಯವೂ ಈ ಮೂರ್ತಿಗಳಿಗೆ ಪೂಜೆ ಮಾಡಲಾಗುತ್ತಿದೆ.

ಮುದ್ದಮ್ಮ :

ಹೊಸೂರಮ್ಮ ದೇವಾಲಯದ ಪಶ್ಚಿಮ ಭಾಗದಲ್ಲಿ ಕಂಡುಬರುವುದೇ 'ಮುದ್ದಮ್ಮ' ನ ದೇವಸ್ಥಾನ. ಒಂದೇ ಚಿಕ್ಕದಾದ ಕೊಠಡಿಯದ್ದು ಸುಮಾರು 10 ಅಡಿ ಉದ್ದಗಲ ಹೊಂದಿದೆ. ಒಂದೇ ಚಿಕ್ಕದಾದ ಕೊಠಡಿಯದ್ದು ಸುಮಾರು 3 ಅಡಿ ಉದ್ದಗಲದ ಪೀಠವನ್ನೊಳ-ಗೊಂಡಿದೆ. ಮಧ್ಯಭಾಗದಲ್ಲಿ ಪೀಠದ ಮೇಲೆ 10 ಅಡಿ ಎತ್ತರವಾದ 'ಏಳು ಹೆಡೆಯನ್ನೊಳಗೊಂಡಿರುವ ದೊಡ್ಡ ಸರ್ಪದ ಮೂರ್ತಿಯು ಒಬ್ಬ ಸ್ತ್ರೀಯನ್ನು ದೇಹದ ತುಂಬ ಸುತ್ತಿಕೊಂಡು ಹಾಗೂ ತನ್ನ ಹೆಡೆಗಳನ್ನು ಬಿಚ್ಚಿಕೊಂಡು ನಿಂತುಕೊಂಡಿದೆ. ತಕ್ಷಣ ನೋಡಿದವರಿಗೆ ಸ್ವಲ್ಪ ಭಯ ತರಿಸುವಂತೆ ಬಹಳ ಉಗ್ರಸ್ವರೂಪದ ಈ ಕಲ್ಲಿನ ನಾಗರಹಾವಿನ ಕೆತ್ತನೆ ಇದೆ. ಇದು ಒಂದೇ ಕಲ್ಲಿನಲ್ಲಿ ಕೆತ್ತಲಾಗಿದೆ. ದೇವಸ್ಥಾನದ ಮುಂದೆ ಎರಡು ಕಂಬಗಳಿವೆ. ಒಂದರಲ್ಲಿ ಹಾವಿನ ಚಿತ್ರ ಹಾಗೂ ಬೇಡರ ಕಣ್ಣಪ್ಪನ ಉಬ್ಬು ಚಿತ್ರ ಕಂಡುಬರುತ್ತದೆ. ಗರ್ಭಗುಡಿಯೊಳಗೆ ಗೋಡೆಯ ಮೇಲೆ ಹೆಡೆ ಬಿಚ್ಚಿದ ಉದ್ದನೆಯ ಹಾವಿನ ಕೆತ್ತನೆಇದೆ. ಈ ಹಾವಿನ ಕೆಳಗೆ ಒಬ್ಬ ಸ್ತ್ರೀ ನಿಂತಿದ್ದಾಳೆ. ಈ ದೇವತೆಗೆ ಮುದ್ದಮ್ಮ ಎಂಬ ಹೆಸರು ಹೇಗೆ ಬಂತೆಂಬುದು ತಿಳಿದುಬರುವುದಿಲ್ಲ. ಕೆಲವರು ಈ ಹಾವಿನ ಮಧ್ಯ ಗಂಡಸಿನ ಮೂರ್ತಿಯೆಂದೂ ಹೇಳುತ್ತಾರೆ. ಸುಮಾರು ಎರಡು ಶತಮಾನಗಳ ಹಿಂದಿನದೆಂದು ಸ್ಥಳಪುರಾಣದಲ್ಲಿ ಉಲ್ಲೇಖವಾಗಿದೆ. ಈ ಸರ್ಪದ ಮಧ್ಯ ಕಾಣುವ ಶಿಲ್ಪವು ಶಿವನದೋ, ಸ್ಕಂದನದೋ ಅಥವಾ ಪಾರ್ವತಿಯಾಗಿರಬಹುದು. ಈ ದೇವತೆಗೆ ಸಂಬಂಧಿಸಿದ ಕಥೆಯೊಂದನ್ನು ಅಲ್ಲಿನ ಜನರು ಈ ರೀತಿ ಹೇಳುತ್ತಾರೆ. ಬಹಳ ವರ್ಷಗಳ ಹಿಂದೆ ಒಬ್ಬ ಸುಂದರವಾದ ಸ್ತ್ರೀಯು ನಿತ್ಯ ಹೊಸೂರಮ್ಮನ ದರ್ಶನಕ್ಕೆ ಬರುವಾಗ ಇವಳ ಚೆಲುವಿಕೆಗೆ ಮಾರು ಹೋದ ಒಬ್ಬ ಗೌಡ ಅವಳನ್ನು ಮೋಹಿಸಲು ಮುಂದಾದನಂತೆ. ಅವಳು ತನ್ನ ಶೀಲ ರಕ್ಷಣೆಗಾಗಿ ಆ ದೇವಿಯ ಮೊರೆ ಹೋದಾಗ ತಕ್ಷಣ ಒಂದು ದೊಡ್ಡ ಸರ್ಪವು ಬಂದು ಅವಳನ್ನು ಕಾಪಾಡಿತೆಂದು ಹೇಳು-ತ್ತಾರೆ.

ಇನ್ನೊಂದು ಕಥೆ ಹೀಗಿದೆ. ಜಮದಗ್ನಿಯ ಮಗ ಪರಶುರಾಮ ತನ್ನ ತಂದೆಯ ಅಪ್ಪಣೆಯಂತೆ ರೇಣುಕೆಯ ರುಂಡವನ್ನು ಕಡಿದನು. ಅವನ ಬಲವಾದ ಹೊಡೆತಕ್ಕೆ ಆ ಶಿರವು ಹಾರಿ ಹೋಗಿ ಇನ್ನೇನು ನೆಲಕ್ಕೆ ಬೀಳುವಷ್ಟರಲ್ಲಿ ಹಾಗೂ ಒಂದು ವೇಳೆ ಬಿದ್ದುದಾದರೆ ಪ್ರಳಯವಾಗಬಹುದೆಂದು ಪರಶುರಾಮನೇ ತನ್ನೆರಡು ಕೈಗಳಿಂದ ಮುದ್ದೆಯಂತೆ ಬಿಗಿಯಾಗಿ ಹಿಡಿದನಂತೆ. ಅಲ್ಲಿಯೇ ಇದ್ದ ಸರ್ಪದಿಂದ ಸುತ್ತಿದನಂತೆ. ಹೀಗೆ ಈ ದೇವತೆಗೆ ಮುದ್ದಮ್ಮ ಎಂಬ ಹೆಸರು ಬಂದಿರಬಹುದೆಂದು ಕೆಲವರು ಹೇಳುತ್ತಾರೆ.

ಆಂಜನೇಯ ಸ್ವಾಮಿ :

ಶ್ರೀ ದೇವಿಯ ದೇವಸ್ಥಾನದ ಪಶ್ಚಿಮ ಭಾಗದಲ್ಲಿರುವ ಇನ್ನೊಂದು ದೇವಸ್ಥಾನವೇ ಈ ಆಂಜನೇಯ ದೇವಸ್ಥಾನ. ಗರ್ಭಗುಡಿಯು ಸುಮಾರು ಹನ್ನೆರಡು ಅಡಿ ಉದ್ದ ಹಾಗೂ ಏಳು ಅಡಿ ಅಗಲವಿದೆ. ಮುದ್ದಮ್ಮ ಮತ್ತು ಈ ಆಂಜನೇಯ ಗುಡಿಗಳು ಸ್ವಲ್ಪ ಎತ್ತರದ ಕಟ್ಟೆಯ ಮೇಲಿವೆ. ಇದಕ್ಕೆ ಒಳಗೆ ಮತ್ತು ಹೊರಗೆ ಪ್ರದಕ್ಷಿಣ ಪಥವಿಲ್ಲ. ಗುಡಿಯ ಮೇಲೆ ಗೋಪುರವಿಲ್ಲ. ಗರ್ಭಗುಡಿಯ ಮುಂಬಾಗದಲ್ಲಿ ಎರಡು ಕಂಬಗಳಿವೆ. ಈ ಮೂರ್ತಿಗೂ ಸಹ ನಿತ್ಯ ಎರಡೂ ಹೊತ್ತು ಪೂಜೆ ಮಾಡಲಾಗುತ್ತಿದೆ.

5.5 ಗ್ರಾಮದ ಇತರ ದೇವಸ್ಥಾನಗಳು:

ಪಶ್ಚಿಮ ದಿಕ್ಕಿನಿಂದ ಮುಖ್ಯ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ ಒಂದು ಕೊಳವೇ ಬಾವಿ ಕಂಡುಬರುತ್ತದೆ. ಇದರ ಹತ್ತಿರ ಎತ್ತರವಾದ ಕಟ್ಟೆಯ ಮೇಲೆ ದಕ್ಷಿಣಕ್ಕೆ ಮುಖ ಮಾಡಿರುವ ಒಂದು ಚಿಕ್ಕ ಗುಡಿಯು ಕಾಣುತ್ತದೆ. ಇದರಲ್ಲಿ ಈಶ್ವರ ಮೂರ್ತಿಯು ಇದೆ. ಇದಕ್ಕೆ ನಿತ್ಯ ಪೂಜೆಯನ್ನು ಕೆಲವರು ಮಾತ್ರ ಮಾಡುತ್ತಾ ಬಂದಿದ್ದಾರೆ. ಜಾತ್ರೆಯ ಸಂದರ್ಭದಲ್ಲಿ ದೇವಿಗೆ ಹೊಸ ಬಟ್ಟೆಗಳನ್ನು ಉಡಿಸುವುದಕ್ಕೆ ಮೊದಲು ಆ ಬಟ್ಟೆಗಳನ್ನು ಇಲ್ಲಿ ಇಟ್ಟು ಅವುಗಳಿಗೆ ಪೂಜೆ ಮಾಡುತ್ತಾರೆ. ಇದರ ಸಮೀಪದಲ್ಲಿಯೇ ಪೂರ್ವಕ್ಕೆ ಮುಖ ಮಾಡಿರುವ ವೀರಭದ್ರೇಶ್ವರ ದೇವಸ್ಥಾನ ಕಂಡುಬರುತ್ತದೆ. ಸುಮಾರು 3–4 ಅಡಿ ಎತ್ತರವಾಗಿರುವ ಈ ಮೂರ್ತಿಗೆ ಕೆಲವರು ಮಾತ್ರ ಪೂಜೆ ಸಲ್ಲಿಸುತ್ತಿದ್ದಾರೆ. ಈ ದೇವ-ಸ್ಥಾನಕ್ಕೆ ಮುಂದೆ ಕಾಂಪೌಂಡು ಕಟ್ಟಲಾಗಿದೆ. ಇಲ್ಲಿಂದ ಸ್ವಲ್ಪ ಮುಂದೆ ಬಂದರೆ ಎತ್ತರದ ಕಟ್ಟೆಯ ಮೇಲೆ ಗಣೇಶ ಹಾಗೂ ಈಶ್ವರ ಮೂರ್ತಿಗಳನ್ನೊಳಗೊಂಡ ಚಿಕ್ಕ ಗುಡಿ ಇದೆ. ಇನ್ನು ಮುಂದೆ ಬಂದರೆ ವಿಜಯನಗರ ಕಾಲದೆನ್ನಲಾದ ಒಂದು ಸುಂದರವಾದ ದೇವಾಲಯ ಇದೆ. 3–4 ಮೆಟ್ಟಿಲುಗಳ ಮೇಲಿರುವ ಈ ದೇವಾಲಯ ಬಹಳ ಸುಂದರವಾಗಿ ಕಾಣುತ್ತಿದೆ. ಇದರ ಗರ್ಭಗೃಹದಲ್ಲಿ ಮೂಲ ವಿಗ್ರಹ ಏನಿರಬಹುದೆಂಬುದು ತಿಳಿದಿಲ್ಲ. ಈಗ ಮಾತ್ರ ಬಸವಣ್ಣ ಮೂರ್ತಿಯನ್ನು ಇತ್ತೀಚೆಗೆ ಜನರು ತಂದಿರಿಸಿದ್ದಾರೆ. ಗರ್ಭಗೃಹದ ಮುಂದೆ ನಾಲ್ಕು ಸಾಲು ಕಂಬ-ಗಳನ್ನೊಳಗೊಂಡ ನವರಂಗವಿದೆ. ಈ ಕಂಬಗಳ ಮೇಲೆ ಉಬ್ಬು ಚಿತ್ರಗಳಿವೆ. ಇದೇ ದೇವಸ್ಥಾನದ ಪಕ್ಕದಲ್ಲಿ ಉತ್ತರಾಭಿಮುಖವಾಗಿರುವ ಪವಾಡದ ಆಂಜನೇಯ ದೇವಸ್ಥಾನವಿದೆ. ಈ ಪವಾಡದ ಆಂಜನೇಯನಿಗೆ ಸಂಬಂಧಪಟ್ಟ ಕಥೆಯೊಂದು ಹೀಗಿದೆ. ಪ್ರತಿ ಜಾತ್ರಾ ಸಮಯದಲ್ಲಿ ಈ ಆಂಜನೇಯನು ದೇವಿಯ ಮುಂದೆ ನಾನಾ ರೀತಿಯ ಪವಾಡಗಳನ್ನು ಮಾಡುತ್ತಿದ್ದನಂತೆ. ಒಮ್ಮೆ ಇದ್ದಕ್ಕಿದ್ದ ಹಾಗೆ ಈ ಪವಾಡಗಳಿಂದ ಬೇಸತ್ತು ದೇವಸ್ಥಾನವನ್ನು

ತೊರೆಮ ನದಿಗೆ ಹೋಗುವ ದಾರಿಯಲ್ಲಿ ತಪಸ್ಸಿಗೆ ಕುಳಿತುಕೊಂಡನಂತೆ. ಆದ್ದರಿಂದ ಈತನಿಗೆ ಪವಾಡದ ಆಂಜನೆಯ ಎಂಬ ಹೆಸರು ಬಂದಿರಬಹುದೆಂದು ಅಲ್ಲಿನ ಜನರು ಹೇಳುತ್ತಾರೆ. ಜಾತ್ರಾ ಸಮಯದಲ್ಲಿ ಹೊಸೂರಮ್ಮನ ಉತ್ಸವ ಮುಗಿದ ನಂತರ ಕೊನೇ ದಿನವಾದ ಹುಣ್ಣಿಮೆಯ ದಿನ ಈ ಅಂಜನೆಯ ಸ್ವಾಮಿಯ ರಥೋತ್ಸವ ನಡೆಯುತ್ತವೆ. ಈ ದೇವಸ್ಥಾನವು ಈಗಲೂ ಬಹಳ ಚೆನ್ನಾಗಿದೆ. ನವರಂಗದಲ್ಲಿ ಅನೇಕ ಕಂಬಗಳ ಮೇಲೆ ಕೆಲವು ಚಿತ್ರಗಳ ಕೆತ್ತನೆ ಕಂಡುಬರುತ್ತದೆ. ರಸ್ತೆಯ ಮಟ್ಟಕ್ಕಿಂತ ಸ್ವಲ್ಪ ಎತ್ತರವಾಗಿದೆ. ಹಾಗೆಯೇ ನದಿಯ ದಾರಿಯಲ್ಲೇ ಮುಂದೆ ಬಂದರೆ ರಸ್ತೆಯ ಪಕ್ಕದಲ್ಲಿ ಬಹಳ ಚಿಕ್ಕದಾದ ಒಂದು ಗುಡಿ ಇದೆ. ಇದರಲ್ಲಿ ಈಶ್ವರನ ಮೂರ್ತಿಯಿದೆ. ಹೊರಮೈ ಸುತ್ತು ಗೋಡೆಯಲ್ಲಿ ಯಾವುದೇ ಕೆತ್ತನೆ ಕಂಡುಬರುವುದಿಲ್ಲ. ಇನ್ನು ನದಿಯ ದಡದಲ್ಲಿಯೇ ನಾಲ್ಕು ಸುಂದರವಾದ ದೇವಸ್ಥಾನಗಳಿವೆ. ಈ ದೇವಸ್ಥಾನಗಳಲ್ಲಿ ಮೂಲ ವಿಗ್ರಹಗಳೇ ಇಲ್ಲ. ಎಲ್ಲಾ ಗುಡಿಗಳಲ್ಲಿ ಗರ್ಭಗೃಹ, ನವರಂಗ ಇವೆ. ಕಂಬಗಳ ಮೇಲೆಲ್ಲಾ ಸುಂದರವಾದ ಕೆತ್ತನೆ ಕಂಡುಬರುತ್ತದೆ. ಈ ದೇವಸ್ಥಾನಗಳು ವಿಜಯನಗರದ ಕಾಲದವುಗಳೆಂದು ಹಾಗೂ ಚಾಲುಕ್ಯ ಶೈಲಿಯಲ್ಲಿರುವುದನ್ನೂ ಗುರುತಿಸಬಹುದು. ಈಗ ಆ ದೇವಸ್ಥಾನಗಳಲ್ಲಿ ಯಾವುದೇ ಪೂಜೆ ನಡೆಯುವುದಿಲ್ಲ. ಇತ್ತೀಚೆಗೆ ಅಲ್ಲಿನ ಜನರು ಗುಡಿಯೊಳಗಿರುವ ಹಾಸು ಬಂಡೆಗಳನ್ನು ಕಿತ್ತು ತೆಗೆದು ಹಾಕಿದ್ದಾರೆ.

5.6 ಭಕ್ತರು:

ಈ ದೇವತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಕಂಡುಬಾರದಿದ್ದರೂ ಕೆಲವರು ಮಾತ್ರ ನಂಬಿಕೆಯಿಂದ ಪೂಜಿಸುತ್ತಾ ಬಂದಿದ್ದಾರೆ. ಅಂದರೆ ಪಕ್ಕದ ಹುಲಿಗೆಮ್ಮನಲ್ಲಿ ಕಂಡು ಬರುವ ಭಕ್ತರ ಸಂಖ್ಯೆಗಿಂತ ಇಲ್ಲಿ ಕಡಿಮೆ ಎಂದು ಹೇಳಬಹುದು. ನಾಯಕ ಜನಾಂಗದವರು ಹೆಚ್ಚಾಗಿ ಈ ದೇವತೆಯನ್ನು ಪೂಜಿಸುತ್ತಾ ಇಂದಿಗೂ ಆರಾಧಿಸುತ್ತಿದ್ದಾರೆ. ಈ ಹೊಸೂರಮ್ಮನ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಭಕ್ತರನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಲಾಗಿದೆ. 1) ಆಡಳಿತ ವರ್ಗ, 2) ಅರ್ಚಕ ವರ್ಗ, ಮತ್ತು 3) ಸೇವಕವರ್ಗ. ಇವರು ತಮ್ಮ ಪಾಲಿಗೆ ಬಂದ ಸೇವೆಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಭಕ್ತಿಯಿಂದ ನೆರವೇರಿಸುತ್ತಾ ಬರುತ್ತಿದ್ದಾರೆ.

ಆಡಳಿತ ವರ್ಗ:— ಈ ವರ್ಗವು ಅರ್ಚಕರನ್ನು ಹಾಗೂ ಸೇವೆ ಮಾಡುವವರನ್ನು ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಾರೆ. ಇವರು ಇಡೀ ಕ್ಷೇತ್ರದ ಮೇಲ್ವಿಚಾರಕರಾಗಿ, ಗುಡಿಯ ಜೀರ್ಣೋದ್ಧಾರ, ಅರ್ಚನೆಯ ವ್ಯವಸ್ಥೆ ಬಂದ ಭಕ್ತರಿಗೆ ಅನುಕೂಲತೆಗಳನ್ನು ಒದಗಿಸುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ಅಲ್ಲದೆ, ಜಾತ್ರಾ ಸಮಯದಲ್ಲಿ ಹಾಗೂ ಇತರ ವಿಶೇಷ ದಿನಗಳಲ್ಲಿ ಊರಿನ ಪ್ರಮುಖರೊಡಗೂಡಿ ಸಭೆಯಲ್ಲಿ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ.

ಅರ್ಚಕವರ್ಗ: — ಪ್ರತಿನಿತ್ಯ ಹೊಸೂರಮ್ಮ ದೇವಿಯ ಹಾಗೂ ದೇವಸ್ಥಾನದ ಸುತ್ತಲೂ ಇರುವ ಉಪದೇವತೆಗಳ ಪೂಜಾ ಕಾರ್ಯಕ್ರಮಗಳನ್ನು ಈ ಅರ್ಚಕರು ಮಾಡುತ್ತಾರೆ. ಈ ದೇವಸ್ಥಾನಕ್ಕೆ ವರ್ಷಪೂರ್ತಿ ಬ್ರಾಹ್ಮಣ ಜಾತಿಯವರು ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಂಜೆ ಪೂಜೆಯನ್ನು ಸಲ್ಲಿಸುತ್ತಾರೆ. ಅಲ್ಲದೆ ದೇವಿಯ ವಿಶೇಷ ದಿನಗಳಾದ ಮಂಗಳವಾರ ಶುಕ್ರವಾರಗಳಂದು ಮತ್ತು ಹುಣ್ಣಿಮೆ, ಅಮಾವಾಸೆಗಳಂದು ಭಕ್ತರ ಅಪೇಕ್ಷೆಯ ಮೇರೆಗೆ ಅಭಿಷೇಕ, ಕುಂಕುಮಾರ್ಚನೆ, ಎಲೆ ಪೂಜೆ ಕಟ್ಟುವುದು ಮುಂತಾದ ಕಾರ್ಯಗಳನ್ನು ನೆರವೇರಿಸುತ್ತಾರೆ. ನಿತ್ಯ ಪೂಜಾ ಸಮಯದಲ್ಲಿ ಗಂಧ,ಕುಂಕುಮ, ಹೂ, ಪತ್ರಿ ಮುಡಿಸುತ್ತಾರೆ. ಇಲ್ಲಿ ಪೂಜೆ ಸಲ್ಲಿಸುವ ಅರ್ಚಕರಿಗೆ ಆಡಳಿತವರ್ಗದವರು ಜೀವನೋಪಾಯಕ್ಕೆ ಸುಮಾರು 3 ಅಥವಾ ನಾಲ್ಕು ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಇಲ್ಲಿ ಲಿಂಗಾಯತ ಪೂಜಾರಿಗಳು ಜಾತ್ರಾ ಸಮಯದಲ್ಲಿ ಮೂರು ದಿನ ಪವಾಡ ಮಾಡುತ್ತಾರೆ. ಆದ್ದರಿಂದ ಇಲ್ಲಿ ಎರಡು ಜಾತಿಗಳ ಸಂಗಮ ಕಂಡುಬರುತ್ತದೆ.

ಸೇವಕವರ್ಗ :–

ಈ ಸೇವಕ ವರ್ಗದಲ್ಲಿ ಬೇರೆ ಬೇರೆ ಜಾತಿಯ ಜನರು ವರ್ಷಪೂರ್ತಿ ಈ ದೇವಸ್ಥಾನಕ್ಕೆ ತಮ್ಮ ಕೈಲಾದಷ್ಟು ಸೇವೆಯನ್ನು ಸಲ್ಲಿಸುತ್ತಾ ಬರುತ್ತಿದ್ದಾರೆ. ಇವರು ನಿತ್ಯ ಹೂ ತರುವುದು, ದೇವಸ್ಥಾನದ ಒಳಗೆ ಮತ್ತು ಹೊರಗೆ ಕಸವನ್ನು ಗುಡಿಸುವುದು, ನೀರು ಹಾಕುವುದು, ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಇನ್ನು ಜಾತ್ರಾ ಸಮಯದಲ್ಲಿ ಸುಣ್ಣ–ಬಣ್ಣ ಹಚ್ಚುವುದು, ಬಾಳೆದಿಂಡಿಗೆ ತಯಾರು ಮಾಡುವುದು, ಪಲ್ಲಕ್ಕಿ ಸಿದ್ಧಗೊಳಿಸುವುದು, ಚಾಮರ ಬೀಸುವುದು, ಗಡಿಗೆಯನ್ನು ತಯಾರು ಮಾಡುವುದು ಮುಂತಾದ ವಿಶೇಷ ಕೆಲಸ ಕಾರ್ಯಗಳನ್ನು ವಂಶಪಾರಂಪರ್ಯ– ಕೆಲ ನಾಯಕ ಜನಾಂಗದವರು ಇಂದಿಗೂ ನಿರ್ವಹಿಸುತ್ತಾ ಬರುತ್ತಿದ್ದಾರೆ.

ಇಲ್ಲಿನ ಭಕ್ತರು ಈ ದೇವಿಯ ಕುರಿತು ಇರುವ ಕಥೆಯನ್ನು ಕೇಳಿದಾಗ, ರೇಣುಕಾ–ಎಲ್ಲಮ್ಮನಿಗಿರುವ ಕಥೆಯನ್ನೇ ಹೇಳುತ್ತಾರೆ. ಈ ಗ್ರಾಮದ ಸುತ್ತ ಮುತ್ತಲಿರುವ ಭಕ್ತರು ಈ ದೇವಿಯನ್ನೇ ಪೂಜಿಗೈಯುತ್ತಾ ಹಾಗೂ ಹರಕೆ ಸಲ್ಲಿಸುತ್ತಾ ಬಂದಿದ್ದಾರೆ. ದೂರದಲ್ಲಿರುವ ಸವದತ್ತಿ ಎಲ್ಲಮ್ಮ ಹಾಗೂ ಇತರೇ ದೇವತೆಗಳ ಊರು–ಗಳಿಗೆ ಹೋಗಲಾರದವರು ಮತ್ತು ಪ್ರತಿ ಮಂಗಳವಾರ, ಶುಕ್ರವಾರ ಹಾಗೂ ಅಮಾವಸ್ಯೆ, ಹುಣ್ಣಿಮೆಗಳಂದು ತಪ್ಪದೇ ಈ ದೇವಿಗೆ ಪೂಜೆ ಸಲ್ಲಿಸುತ್ತಾರೆ. ಭಕ್ತರು ದೇವಿಯ ನೈವೇದ್ಯಕ್ಕೆಂದು ಹೂ, ಬಾಳೆಹಣ್ಣು, ತೆಂಗಿನಕಾಯಿ ತರುತ್ತಾರೆ. ಹಬ್ಬದ ದಿನಗಳಲ್ಲಿ ಗ್ರಾಮದಲ್ಲಿ ಕೆಲವರು ಸಿಹಿ ಪದಾರ್ಥಗಳನ್ನು ತಂದು ದೇವಿಗೆ ನೈವೇದ್ಯ ಅರ್ಪಿಸುತ್ತಾರೆ. ಇನ್ನು ಕೆಲವರು ಬೆಳಿಗ್ಗೆ ಸ್ನಾನ ಮಾಡಿ ದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಅಥವಾ ಹೆಜ್ಜೆ ಸೇವೆ ಅಥವಾ ಉರುಳು ಸೇವೆಯನ್ನು ಭಕ್ತಿಯಿಂದ ಮಾಡುತ್ತಾರೆ.

ಸಾಮಾನ್ಯವಾಗಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರದ ಕೆಲವು ಊರುಗಳಲ್ಲಿರುವ ಕೆಲ ಭಕ್ತರು ವಿಶೇಷ ದಿನಗಳಲ್ಲಿ ಹಾಗೂ ಜಾತ್ರಾ ಸಮಯದಲ್ಲಿ ಈ ದೇವಸ್ಥಾನಕ್ಕೆ ಹೆಚ್ಚಾಗಿ ಬರುತ್ತಾರೆ. ಕೆಲವು ಸಾರಿ ವರ್ಷದಲ್ಲಿ ಒಂದೆರಡು ಬಾರಿ ಇಲ್ಲಿಗೆ ಬಂದು ಒಂದೆರಡು ದಿನ ಇಲ್ಲಿಯೇ ಇದ್ದು ದೇವಿಯ ದರ್ಶನ ಪಡೆದು ತಮ್ಮ ಊರುಗಳಿಗೆ ಮರಳುತ್ತಾರೆ. ಈ ದೇವತೆಯನ್ನು ಕುರಿತು ಕೇಳಿದಾಗ, ಅವರು ಆಕೆ ಬಹಳ ಶಾಂತಿ ಸ್ವಭಾವದವಳು ಹಾಗೂ ಭಕ್ತಿಯಿಂದ ಬೇಡಿಕೊಂಡರೆ ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಳೆಂದು ಹೇಳುತ್ತಾರೆ. ಈ ಭಕ್ತರು ಹೊಸೂರಮ್ಮನನ್ನು 'ಅಮ್ಮ' ಎಂದು ಸಂಬೋಧಿಸುತ್ತಾರೆ. ''ನಮ್ಮಮ್ಮ ನಮ್ಮ ತಾಯಿ ನಂಬಿದೋರಿಗೆ ಎಂದೂ ಕೈ ಬಿಡಾಕಿಲ್ಲ'' ಎಂದು ಬಹಳ ನಿರ್ಮಲವಾದ ಮನಸ್ಸಿನಿಂದ ಹೇಳಿಕೊಳ್ಳುತ್ತಾರೆ.

5.7: ನಂಬಿಕೆಗಳು:

ಹೊಸೂರಮ್ಮನ ಭಕ್ತರು ಈ ದೇವತೆಯನ್ನು ಬಹಳ ನಿಷ್ಠೆಯಿಂದ ನಂಬುತ್ತಾರೆ. ಮತ್ತು ನಿತ್ಯವೂ ಪೂಜಿಸುತ್ತಾರೆ. ಈ ದೇವತೆಯನ್ನು ನಂಬಿದರೆ ನಮ್ಮ ಕಷ್ಟ ಪರಂಪರೆಗಳನ್ನು ಪರಿಹಾರ ಮಾಡುತ್ತಾಳೆ ಎಂದು ಜನಪದರು ನಂಬುತ್ತಾರೆ.

ಈ ಜನಪದರಲ್ಲಿರುವ ನಂಬಿಕೆಗಳು ಈ ಕೆಳಗಿನಂತಿವೆ:

1: ತಮ್ಮ ಕಷ್ಟ ನಷ್ಟಗಳನ್ನು ಪರಿಹರಿಸುತ್ತಾಳೆ.

2: ಹೊಲದ ಫಸಲು ಚೆನ್ನಾಗಿ ಬಾರದಿದ್ದಾಗ ಈ ದೇವತೆ ರಕ್ಷಿಸುತ್ತಾಳೆ.

3: ಮಕ್ಕಳಾಗದವರಿಗೆ ಮಕ್ಕಳ ಫಲ ಕರುಣಿಸುತ್ತಾಳೆ.

4: ಮನದಲ್ಲಿ ಅಂದುಕೊಂಡಂತಹ ಇಷ್ಟಾರ್ಥಗಳನ್ನು ನೆರವೇರಿಸುತ್ತಾಳೆ.

5: ಕುಟುಂಬದಲ್ಲಿ ಹೆಣ್ಣು ಸಂತಾನ ಬೇಕೆಂದು ಬೇಡಿಕೊಂಡರೆ ಅನುಗ್ರಹಿಸುತ್ತಾಳೆ.

6: ವಿದ್ಯಾರ್ಥಿಗಳಿಗೆ ಪಾಸು ಮಾಡುತ್ತಾಳೆ ಮತ್ತು ಉದ್ಯೋಗ ಕಲ್ಪಿಸಿಕೊಡುತ್ತಾಳೆ.

ಹೀಗೆ ನಾನಾ ರೀತಿಯಲ್ಲಿ ಅನೇಕ ಜನಾಂಗದ ಹೆಣ್ಣುಮಕ್ಕಳು, ಗಂಡು ಮಕ್ಕಳು, ಹುಡುಗರು ಹಾಗೂ ಮುದುಕರು ಈ ದೇವಿಯನ್ನು ಪೂಜಿಸಿ ನಂಬಿಕೆಗೆ ಪಾತ್ರರಾಗುತ್ತಾರೆ. ಆ ಮೂಲಕ ತಮ್ಮ ಅನೇಕ ಇಷ್ಟಾರ್ಥಗಳನ್ನು ಭಕ್ತಿಯಿಂದ ಕೇಳಿಕೊಂಡು ಅದರಂತೆ ಹರಕೆಗಳನ್ನು ಪ್ರತಿಯಾಗಿ ದೇವಿಗೆ ಅರ್ಪಿಸುತ್ತಾರೆ.

5.8: ಹರಕೆಗಳು:—

ಜನಪದರು ತಮ್ಮನ್ನು ಕಾಪಾಡುವ ದೇವತೆಗಾಗಿ ಜನರು ಏನನ್ನಾದರೂ ತ್ಯಾಗ ಮಾಡಲೂ ಸಿದ್ಧರಿರುತ್ತಾರೆ. ಯಾವ ಕಷ್ಟ ಅನುಭವಿಸುವುದರಲ್ಲೂ ಇವರು ಹಿಂಜರಿಯುವುದಿಲ್ಲ. ಅದಕ್ಕಾಗಿ ನಾನಾ ರೀತಿಯ ಹರಕೆಗಳನ್ನು ಕಟ್ಟಿಕೊಂಡು, ನಿಯತ್ತಿನಿಂದ ಹರಕೆಯನ್ನು ತೀರಿಸುತ್ತಾರೆ. ಒಂದು ವೇಳೆ ಹರಕೆಗಳನ್ನು ತೀರಿಸದಿದ್ದರೆ ಏನೆಲ್ಲಾ ಕಷ್ಟ ನಷ್ಟಗಳು ಪ್ರಾಪ್ತವಾಗಬಹುದೆಂಬ ಭಯ ಜನರನ್ನು ಕಾಡುತ್ತಿರುತ್ತದೆ. ಮುಡಿಕೊಡುವುದು, ಬಾಯಿಬೀಗ ಚುಚ್ಚಿಸಿಕೊಳ್ಳುವುದು, ಕೊಂಡಕ್ಕೆ ಹರಳು ಹಾಕುವುದು, ಹೆಜ್ಜೆ ನಮಸ್ಕಾರ, ಉರುಳು ಸೇವೆ ಮುಂತಾದ ದೈಹಿಕವಾಗಿ ಮಾನಸಿಕವಾಗಿ ಹಾಗೂ ಆರ್ಥಿಕವಾಗಿ ಕಷ್ಟವಾದರೂ ಸಹಿಸಿಕೊಂಡು ಹರಕೆಯನ್ನು ತೀರಿಸುತ್ತಾರೆ. ತಾವು ಹಸಿದಿದ್ದರೂ ಸಾಲ ಮಾಡಿಯಾದರೂ ದೇವರ ಸೇವೆಯನ್ನು ಈ ಜನಪದರು ಮಾಡುತ್ತಾರೆ. ಅವರು ಅರ್ಪಿಸುವ ಹರಕೆಗಳು ನಾನಾ ವಿಧದಲ್ಲಿ ತಮ್ಮ ಯೋಗ್ಯತೆಗನುಸಾರವಾಗಿ ಕೂಡಿರುತ್ತವೆ. ಅವುಗಳು ಈ ಕೆಳಗಿನಂತೆ ತಿಳಿಸಲಾಗಿದೆ.

1: ಬೆಳ್ಳಿಯ ಕಣ್ಣು, ಮೂಗು, ಮೀಸೆ ಮುಂತಾದವುಗಳನ್ನು ಮಾಡಿಸುವುದು.

2: ಸೀರೆ, ಕುಪ್ಪಸ, ಮುಂತಾದ ಬಟ್ಟೆಗಳನ್ನು ಅರ್ಪಿಸುವುದು.

3: ತೆಂಗಿನಕಾಯಿ,ಬಾಳೆಹಣ್ಣು, ಕೊಡುವುದು.

4: ದೇವಸ್ಥಾನದಲ್ಲಿರುವ ಹುಂಡಿ ಡಬ್ಬಿಯಲ್ಲಿ ತಮಗೆ ತಿಳಿದಷ್ಟು ಹಣವನ್ನು ಹಾಕುವುದು.

5: ದೇವಸ್ಥಾನಕ್ಕೆ ಬೇಕಾದ ವಿವಿಧ ಸೌಕರ್ಯಗಳನ್ನು ಪೂರೈಸುವುದು..

6: ದೇವಸ್ಥಾನದ ಒಳಾವರಣದಲ್ಲಿ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಕೊಠಡಿಗಳನ್ನು ಕಟ್ಟಿಸಿಕೊಡುವುದು.

7: ಜಾತ್ರೆಯಲ್ಲಿ ಹಣದ ಜೊತೆಗೆ ವಿವಿಧ ಸಹಾಯ ಒದಗಿಸುವುದು.

8: ಉಪವಾಸ ವ್ರತವನ್ನು ಕೈಗೊಳ್ಳುವುದು.

9: ಮಂಗಳವಾರ–ಶುಕ್ರವಾರ ಅಥವಾ ಹುಣ್ಣಿಮೆ–ಅಮಾವಾಸ್ಯೆಯ ದಿನಗಳಂದು ದೇವತೆಯ ದರ್ಶನಕ್ಕೆ ಬರುವುದು.

10: ಹಣದ ಮುಡುಪು ಸಂಗ್ರಹಿಸಿ ದೇವಿಗೆ ಅರ್ಪಿಸುವುದು.

11: ಕಾರ್ತಿಕ ಮಾಸದಲ್ಲಿ ದೇವತೆಗೆ ದೀಪವನ್ನು ಬೆಳಗಿಸುವುದು.

12: ಕುರಿ, ಕೋಳಿಯನ್ನು ಬಲಿ ಕೊಡುವುದು (ನದಿ ಹತ್ತಿರ).

13: ಎಲೆ ಪಟ್ಟಿಯಿಂದ ಅಲಂಕರಿಸಿ ವಿಶೇಷ ಪೂಜೆ ಮಾಡುವುದು .

೨.9 ಮಡಿ — ಮೈಲಿಗೆ :

ಹೊಸೂರಮ್ಮ ದೇವಸ್ಥಾನದಲ್ಲಿ ಕಟ್ಟುನಿಟ್ಟಾದ ಮಡಿಯನ್ನು ಅನುಸರಿಸಲಾಗುತ್ತಿದೆ. ಯಾವುದೇ ಸಂದರ್ಭದಲ್ಲಿ ಮಡಿಯನ್ನು ನಿರಾಕರಿಸುವಂತಿಲ್ಲ. ಹಾಗೇನಾದರೂ ಮೈಲಿಗೆಯಿಂದ ದೇವಸ್ಥಾನವನ್ನು ಪ್ರವೇಶ ಮಾಡಿದರೆ ದೇವಿಯ ಶಾಪಕ್ಕೆ ಗುರಿಯಾಗಬಹುದು ಅಥವಾ ಯಾವುದೇ ಕಾಯಿಲೆಗಳು ಬರಬಹುದೆಂಬ ಹಾಗೂ ಏನಾದರೂ ತೊಂದರೆಗಳು ಸಂಭವಿಸಬಹುದೆಂಬ ಮೂಢ ನಂಬಿಕೆಯು ಈಗಲೂ ನಮ್ಮ ಜನಪದರಲ್ಲಿ ಕಾಣುತ್ತೆವೆ.

ದೇವಸ್ಥಾನಕ್ಕೆ ಸಂಬಂಧಿಸಿದ ಬ್ರಾಹ್ಮಣ ಪೂಜಾರಿಗಳು ಸಾಮಾನ್ಯವಾಗಿ ಸಸ್ಯಹಾರಿಗಳಾಗಿದ್ದಾರೆ. ಅವರು ಬೆಳಿಗ್ಗೆ ಸ್ನಾನಾದಿಗಳನ್ನು ಮುಗಿಸಿದ ನಂತರವೇ ಗರ್ಭಗುಡಿಯನ್ನು ಪ್ರವೇಶಿಸಿ ಪೂಜೆಯನ್ನು ಕೈಗೊಳ್ಳುತ್ತಾರೆ. ಇಲ್ಲದಿದ್ದರೆ ಮೈಲಿಗೆಯಾಗುತ್ತದೆಂಬ ಭಾವನೆ ಅವರಲ್ಲಿದೆ. ಅವರು ದಿನಕ್ಕೆ ಎರಡು ಬಾರಿ ಸ್ನಾನ ಮಾಡಿ ಮಡಿಯಿಂದ ದೇವಿಯ ಪೂಜೆ ಮಾಡುತ್ತಾರೆ. ಪೂಜೆಯ ಸಂದರ್ಭದಲ್ಲಿ ಹಾಗೂ ಇತರೇ ಸಂದರ್ಭದಲ್ಲಿ ಮಡಿ ಇಲ್ಲದವರನ್ನು ಗರ್ಭಗುಡಿಯೊಳಗೆ ಬಿಟ್ಟುಕೊಡುವುದಿಲ್ಲ. ಪೂಜೆಯ ಸಂದರ್ಭದಲ್ಲಿ ಗರ್ಭಗುಡಿಯ ಬಾಗಿಲನ್ನು ಮುಚ್ಚಲಾಗಿರುತ್ತದೆ. ಸಂಪೂರ್ಣ ಪೂಜೆಯ ವಿಧಿ-ವಿಧಾನಗಳು ಸಾಂಗವಾಗಿ ಮುಗಿದ ನಂತರ ಬಾಗಿಲನ್ನು ತೆರೆಯಲಾಗುತ್ತದೆ. ಕಾರಣವೇನೆಂದರೆ, ಅಕಸ್ಮಾತ ಮೈಲಿಗೆಯುಳ್ಳವರ ದೃಷ್ಟಿಯು ದೇವಿಯ ಮೇಲೆ ಬೀಳಬಹುದೆಂಬ ಅಥವಾ ಅದರಿಂದ ದೇವಿಯು ಮೈಲಿಗೆಯಾಗಬಹುದೆಂಬ ನಂಬಿಕೆ ಪೂಜಾರಿಯಿಂದ ತಿಳಿದುಬರುತ್ತದೆ.

ಜಾತ್ರಾ ಸಮಯದಲ್ಲಿ ಕಂಕಣ ಧರಿಸಿಕೊಂಡವರು ಹಾಗೂ ಬ್ರಾಹ್ಮಣ ಪೂಜಾರಿಗಳು ಸುಮಾರು 8–10 ದಿನಗಳ ಕಾಲ ಅಂದರೆ ದೇವಿಯ ಜಾತ್ರೆ ಮುಗಿಯುವವರೆಗೂ ಮಡಿಯನ್ನು ಕಾಪಾಡಿಕೊಳ್ಳುತ್ತಾರೆ. ಅದೇ ರೀತಿ ಜಾತ್ರೆಯಲ್ಲಿ ಪವಾಡ ಮುಗಿಯುವವರೆಗೂ ಲಿಂಗಾಯತ ಪೂಜಾರಿಯು ಸಹ ಬಹಳ ಮಡಿಯಿಂದ ಉಪವಾನ ವ್ರತ ಕೈಗೊಂಡಿರುತ್ತಾರೆ. ಇದಲ್ಲದೆ ಬೇರೆ ಬೇರೆ ಕಡೆಗಳಿಂದ ಜಾತ್ರೆಗೆ ಬಂದ ಭಕ್ತರೂ ಕೂಡ ಮಡಿಯಿಂದ ದೇವಿಯ ದರ್ಶನ ಪಡೆಯುತ್ತಾರೆ. ಮತ್ತು ತಮ್ಮ ಹರಕೆಯಂತೆ

ಪ್ರಾಣಿ ಬಲಿಯೇನಾದರು ಕೊಡುವುದಿದ್ದರೆ ನದಿಯ ದಡದಲ್ಲಿ ಆ ಪ್ರಾಣಿಯನ್ನು ಪೂಜಿಸಿ ಅಲ್ಲಿಯೇ ದೇವಿಗೆ ಬಲಿಯನ್ನು ಅರ್ಪಿಸುತ್ತಾರೆ.

ಕೆಲವೊಂದು ನಿಷೇಧಗಳು ಹೀಗಿವೆ :

1) ಋತುಮತಿಯಾದವರು
2) ಮುಟ್ಟಾದವರು
3) ಮನೆಯಲ್ಲಿ ಯಾರಾದರೂ ಸತ್ತರೆ
4) ಬೇರೆ ಕಡೆಯಲ್ಲಿ ಸಾವು ಸಂಭವಿಸಿ ಅದರಿಂದ ಯಾರಿಗಾದರೂ ಸಂಬಂಧಿಸಿದವರಿಗೆ ಮೈಲಿಗೆ ಬಂದಿದ್ದರೆ

ಈ ರೀತಿಯಾಗಿ ದೇವಸ್ಥಾನದಲ್ಲಿ ನಾನಾ ನಿಷೇಧಗಳನ್ನು ಮಡಿ-ಮೈಲಿಗೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಆಚರಣೆಗಳನ್ನು ಅಲ್ಲಿನ ಪೂಜಾರಿಗಳವರು ಜಾರಿಗೊಳಿಸಿರುತ್ತಾರೆ.

5.10 ದೇವಾಲಯದಲ್ಲಿ ನಡೆಯುವ ವಾರ್ಷಿಕ ಆಚರಣೆಗಳು :

1) ಚೈತ್ರ ಮಾಸದಲ್ಲಿ ಯುಗಾದಿ ಪಾಡ್ಯದ ದಿನದಂದು ದೇವಿಗೆ ವಿಶೇಷ ಅಭಿಷೇಕದಿಂದ ಪೂಜೆ ಮಾಡಲಾಗುತ್ತದೆ. ಅದೇ ದಿನ ಸಾಯಂಕಾಲ ಹೊಸ ಪಂಚಾಂಗ ಶ್ರವಣ ನಡೆಯುತ್ತದೆ. ಸಕಲ ಗ್ರಾಮಸ್ಥರು ಈ ಪಂಚಾಂಗ ಶ್ರವಣ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಭವಿಷ್ಯದ ಬಗ್ಗೆ ತಿಳಿದುಕೊಳ್ಳುತ್ತಾರೆ.
2) ವೈಶಾಖ ಮಾಸದಲ್ಲಿ ವಸಂತೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ದೇವಿಗೆ ವಿಶೇಷ ಪೂಜೆ ಅರ್ಚಿಸಲಾಗುತ್ತದೆ. ಹಾಗೂ ಭಕ್ತರಿಗೆ ಪ್ರಸಾದ ಸಂತರ್ಪಣೆ ನಡೆಯುತ್ತದೆ.
3) ವಾರ್ಷಿಕ ಜಾತ್ರೆ : ಜೇಷ್ಠ ಶುದ್ಧ ಪ್ರತಿಪದೆಯಿಂದ ಆರಂಭವಾಗಿ ಪೌರ್ಣಿಮೆಯವರೆಗೆ. ಇದು ದೇವಿಯ ಅತ್ಯಂತ ಮಹತ್ವದ ಉತ್ಸವವೂ ಹಾಗೂ ಹತ್ತು ದಿನಗಳ ಕಾಲ ಸಂಭ್ರಮದ ಕಾರ್ಯಕ್ರಮಗಳು ಜರುಗುತ್ತವೆ. ಪ್ರತಿಪದೆಯಿಂದ ಕಂಕಣಧಾರಣ ಕಾರ್ಯ ಆರಂಭವಾಗಿ ಸಪ್ತಮಿಯವರೆಗೆ ಅನುಕ್ರಮವಾಗಿ ದಿನನಿತ್ಯ ಈ ಕೆಳಗಿನಂತೆ ಉತ್ಸವಗಳು ನಡೆಯುತ್ತವೆ.
1) ಗೋಪುರೋತ್ಸವ 2) ಮಯೂರ ವಾಹನೋತ್ಸವ 3) ಅಶ್ವವಾಹನೋತ್ಸವ
4) ಸಿಂಹವಾಹನೋತ್ಸವ 5) ಶೇಷವಾಹನೋತ್ಸವ 6) ಶ್ವೇತವಾಹನೋತ್ಸವ
ಹಾಗೂ 7) ಗಜವಾಹನೋತ್ಸವಗಳು ಅತ್ಯಂತ ವಿಜೃಂಭಣೆಯಿಂದ

ಜರುಗುತ್ತವೆ. ನಂತರ ನವಮಿ, ದಶಮಿಗಳಂದು ಬಾಳೆದಂಡಿಗೆ, ಪಾಯಸ ಮತ್ತು ಅಗ್ನಿಕುಂಡ ಬಿಂಬ ಮೂರು ಪವಾಡಗಳು ಲಿಂಗಾಯತ ಪೂಜಾರಿಯಿಂದ ಸಾಂಗವಾಗಿ ನಡೆಯುತ್ತವೆ. ಇದು ಅತ್ಯಂತ ಅವರ್ಣನೀಯ ಹಾಗೂ ಅದ್ವಿತೀಯವಾಗಿರುತ್ತದೆ. ಈ ಮೇಲಿನ ಉತ್ಸವಗಳು ನಡೆದ ನಂತರ ಕೊನೆಯ ಹುಣ್ಣಿಮೆಯ ದಿನ ಕಂಕಣ ವಿಸರ್ಜನೆ ಮತ್ತು ದೇವಸ್ಥಾನ ಹಾಗೂ ಉಪದೇವಸ್ಥಾನಗಳ ಸಂಪೂರ್ಣ ಸ್ವಚ್ಛತೆ, ಸಂಪ್ರೋಕ್ಷಣೆ, ಹೋಮ-ಹವನಗಳು ನಡೆಯುತ್ತವೆ. ಇದೇ ಸಂದರ್ಭದಲ್ಲಿ ಗ್ರಾಮದಲ್ಲಿರುವ ಪವಾಡದ ಆಂಜನೇಯ ಸ್ವಾಮಿಯ ರಥೋತ್ಸವವ ನಡೆಯುತ್ತದೆ.

4) ಆಷಾಢ ಮಾಸದಲ್ಲಿ ಕರ್ಕಾಟಕ ಸಂಕ್ರಮಣ ದಿನದಂದು ದೇವಿಗೆ ವಿಶೇಷ ಪೂಜೆ ಹಾಗೂ ನೈವೇದ್ಯವನ್ನು ಅರ್ಪಿಸಲಾಗುತ್ತದೆ.

5) ಶ್ರಾವಣಮಾಸದಲ್ಲಿ ನಾಗರಪಂಚಮಿಯ ದಿನ ದೇವಾಲಯದ ಆವರಣದಲ್ಲಿರುವ ನಾಗಮೂರ್ತಿಗಳಿಗೆ ಹಾಲಿನ ಅಭಿಷೇಕ ಮತ್ತು ತಾಯಿ ಮುದ್ದಮ್ಮನಲ್ಲಿರುವ ನಾಗ ಮೂರ್ತಿಗೂ ಸಹ ಹಾಲಿನ ಅಭಿಷೇಕ ನಡೆಯುತ್ತದೆ.

6) ಭಾದ್ರಪದಮಾಸದಲ್ಲಿ ದೇವಸ್ಥಾನದೊಳಗೆ ಗಣೇಷ ಮೂರ್ತಿಯನ್ನು ಮೂರು ಅಥವಾ ಐದು ದಿನಗಳ ಕಾಲ ಪ್ರತಿಷ್ಠಾಪಿಸಲಾಗುತ್ತದೆ. ನಿತ್ಯವೂ ಪೂಜೆ ನಡೆಯುತ್ತದೆ. ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಕೊನೆಯ ದಿನ ವಾದ್ಯಗಳ ಸಮೇತ ಗಣೇಷ ಮೂರ್ತಿಯನ್ನು ನದಿಗೆ ತೆಗೆದುಕೊಂಡು ಹೋಗಿ ಪೂಜಿಸಿ ವಿಸರ್ಜಿಸಲಾಗುತ್ತದೆ.

7) ಆಶ್ವೀಜ ಮಾಸದಲ್ಲಿ ಶುದ್ಧ ಪಾಡ್ಯ ದಿನದಿಂದಾರಂಭವಾಗಿ ವಿಜಯದಶಮಿಯವರೆಗೆ ನವರಾತ್ರಿ ಉತ್ಸವ ನಡೆಯುತ್ತದೆ. ಆಗ ಘಟ ಸ್ಥಾಪನೆ ಮಾಡಿ ಒಂಭತ್ತು ದಿನಗಳವರೆಗೆ ಪೂಜೆ, ಪಾರಾಯಣಗಳು ನಡೆಯುವವು. ವಿಜಯದಶಮಿಯ ದಿನದಂದು ಗೋಪುರ ಪಲ್ಲಕ್ಕಿಯಲ್ಲಿ ಶ್ರೀ ದೇವಿಯ ಉತ್ಸವದ ಕಂಚಿನ ಮೂರ್ತಿಗಳನ್ನು ಇಟ್ಟು ಮೆರವಣಿಗೆಯ ಮೂಲಕ ಸೀಮೋಲಂಘನವನ್ನು ಮಾಡಲಾಗುತ್ತದೆ. ಅಂದರೆ ಗ್ರಾಮದ ಸೀಮೆಯನ್ನು ದಾಟಿ ಬನ್ನಿಮರಕ್ಕೆ ಬಂದು ದೇವಿಯ ಪೂಜೆ ಮತ್ತು ಬನ್ನಿಮರದ ಪೂಜೆ ಮುಗಿದ ನಂತರ ಗ್ರಾಮದ ಜನರು ಬನ್ನಿ ಪತ್ರಿಯನ್ನು ವಿನಿಮಯಿಸಿಕೊಳ್ಳುತ್ತಾರೆ. ನಂತರ ಅದೇ ಮೆರವಣಿಗೆಯ ಮೂಲಕ ದೇವಸ್ಥಾನಕ್ಕೆ ಆಗಮಿಸಿ ತೊಟ್ಟಿಲುಕಾರ್ಯ ಮಾಡು-

ಈ ಸಮಯದಲ್ಲಿ ಜೋಗವ್ವ, ಜೋಗಪ್ಪನವರಿಂದ ಹಾಗೂ ಪವಾಡದ ಪೂಜಾರಿಯಿಂದ ದೇವರ ಹಾಡುಗಳನ್ನು ಹೇಳಿಸಲಾಗುತ್ತದೆ. ಮಂತ್ರಪುಷ್ಪದಿಂದ ಮಹಾಮಂಗಳಾರತಿಯೊಂದಿಗೆ ಪೂಜೆ ಮುಕ್ತಾಯವಾಗುತ್ತದೆ. ಈ ಎಲ್ಲಾ ಕಾರ್ಯಕ್ರಮಕ್ಕೆ ಬಹಳಷ್ಟು ಭಕ್ತಾದಿ ಗಳು ಭಾಗವಹಿಸಿರುತ್ತಾರೆ.

8) ಕಾರ್ತೀಕ ಮಾಸದಲ್ಲಿ ದೀಪೋತ್ಸವ ನಡೆಯುತ್ತದೆ. ಭಕ್ತಾದಿಗಳು ತಮ್ಮ ಇಷ್ಟಾರ್ಥಗಳು ಸಿದ್ಧಿಸಿದಾಗ ಈ ಮಾಸದಲ್ಲಿ ದೇವಾಲಯಕ್ಕೆ ಬಂದು ದೀಪೋತ್ಸವ ಆಚರಣೆ ಕೈಗೊಂಡು ತಮ್ಮ ಹರಕೆಗಳನ್ನು ಅರ್ಪಿಸುತ್ತಾರೆ.

9) ಮಾರ್ಗಶಿರ ಮಾಸದಲ್ಲಿ ಹನುಮ ಜಯಂತಿ ಹಾಗೂ ದತ್ತ ಜಯಂತಿಯ ಉತ್ಸವಗಳು ನಡೆಯುತ್ತವೆ.

10) ಧನುರ್ಮಾಸದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಭಕ್ತಾದಿಗಳಿಗೆ ಬೆಳಗಿನ ಸಮಯ ದಲ್ಲಿ ನಿತ್ಯವೂ ಪ್ರಸಾದ ವಿತರಣೆ ಮಾಡಲಾಗುತ್ತದೆ.

11) ಮಾಘ ಮಾಸದಲ್ಲಿ ಶ್ರೀ ಮಾತಂಗಿ ದೇವಿಗೆ ಪೂಜೆ ಹಾಗೂ ಮಹಾಶಿವರಾತ್ರಿ ಆಚರಿಸಲಾಗುತ್ತದೆ.

12) ಮಾಘ ಮಾಸದಲ್ಲಿ ಅಥವಾ ಫಾಲ್ಗುಣ ಮಾಸದಲ್ಲಿ ಅಂದರೆ ಭಾರತ ಹುಣ್ಣಿಮೆಯಾದ ಮೂರು ದಿನಗಳ ನಂತರ ಗುಗ್ರಿ ಮುಟ್ಟಿಗೆ ಎಂಬ ಪೂಜೆಯನ್ನು ಮಾಡುತ್ತಾರೆ. ಈ ಕಾರ್ಯಕ್ರಮದಲ್ಲಿ ದೇವಸ್ಥಾನಕ್ಕೆ ಸಂಬಂಧಿಸಿದ ಜೋಗತಿಯರನ್ನು ಕರೆತಂದು ಎರಡು ಮಣ್ಣಿನ ಕುಡಿಕೆಯಲ್ಲಿ ಹಾಕಿಟ್ಟ ಹೆಂಡವನ್ನು ಅವರ ತಲೆಯ ಮೇಲೆ ಸುರಿಯಲಾಗುತ್ತದೆ. ನಂತರ ಅವರಿಗೆ ತಲೆ ಸ್ನಾನ ಮಾಡಿಸಿ ಬಟ್ಟೆಯನ್ನು ಕೊಡಲಾಗುತ್ತದೆ. ಗ್ರಾಮದ ಜನರು ಸೇರಿ ತಯಾರು ಮಾಡಿದ ಹುಳಿಯ ಗುಗ್ರಿಯನ್ನು ಬಂದಿರುವ ಜನರೆಲ್ಲರಿಗೂ ಹಂಚಲಾಗುತ್ತದೆ. ಇದೇ ಸಂದರ್ಭದಲ್ಲಿ ದೇವಸ್ಥಾನದವತಿಯಿಂದ ಬ್ರಾಹ್ಮಣ ಪೂಜಾರಿಗಳು ದೇವಿಯನ್ನು ಪೂಜಿಸಿ ನಂತರ ಕಡ್ಲಿ, ಅಲಸಂದಿ, ಹುಳ್ಳಿ, ಮಡಿಕೆಯಿಂದ ತಯಾರಿಸಿದ ಗುಗ್ರಿ ಪ್ರಸಾದವನ್ನು ದೇವಿಗೆ ನೈವೇದ್ಯ ಮಾಡುತ್ತಾರೆ. ನೆರೆದ ಭಕ್ತಾಧಿಗಳಿಗೆ ಹಂಚುತ್ತಾರೆ. ಈ ಕಾರ್ಯಕ್ರಮವನ್ನು ಹುಣ್ಣಿಮೆಯಾದ ಮೂರು ದಿನದ ಬಳಿಕ ರಾತ್ರಿ ಚಂದ್ರನ ದರ್ಶನ ಮಾಡಿದ ನಂತರ ಪ್ರಾರಂಭಿಸುತ್ತಾರೆ.

ಅಧ್ಯಾಯ — ಆರು :

ಜಾತ್ರೆಯ ಆಚರಣೆಗಳು ವಿವರಣೆ :

6.1 ದೇವರ ಕಲ್ಪನೆ

6.2 ಗ್ರಾಮದೇವತೆಯ ಕಲ್ಪನೆ

6.3 ಜಾತ್ರೆ ಎಂದರೇನು?

6.4 ಹೊಸೂರಮ್ಮ ಜಾತ್ರೆಯ ವಿವರಣೆ

6.5 ಪವಾಡಗಳು

6·1 ದೇವರು ಅಥವಾ ದೇವತೆಯ ಕಲ್ಪನೆ :

ಗ್ರಾಮದೇವತೆಯ ಕಲ್ಪನೆ ಬಹಳ ಪುರಾತನವಾದುದಾಗಿದೆ. ಮನುಷ್ಯನಷ್ಟೇ ಹಳೆಯದಾಗಿದೆ. ವೇದೋಪನಿಷತ್ತು ಪುರಾಣಕ್ಕಿಂತಲೂ ಹಳೆಯದು. ಸಿಂಧು, ಹರಪ್ಪ, ಮೊಹೆಂಜೋದಾರೋ ಸಂಸ್ಕೃತಿಯಲ್ಲಿ ಕ್ರಿ.ಪೂ. 4 ರಿಂದ 2 ನೇ ಶತಮಾನದ ನಾಗರಿಕತೆಯಲ್ಲಿ ದೇವತಾ ವಿಗ್ರಹಗಳಿದ್ದುದರ ದಾಖಲೆ ಕಂಡುಬರುತ್ತದೆ.

ಇದಲ್ಲದೆ ಮೊದಲು ಈ ಭೂಮಂಡಲದ ರಚನೆ ಹೇಗೆ ಸೃಷ್ಟಿಯಾಯಿತೆಂಬುದಕ್ಕೆ ಕೆಲವು ಕುತೂಹಲಕರವಾದ ದಂತ ಕಥೆಗಳು ಸಿಗುತ್ತವೆ. ಉದಾಹರಣೆಗೆ: ಒಂದು ಕಥೆಯ ಪ್ರಕಾರ ಶಿವನು ಭೂಮಿಯನ್ನು ಸೃಷ್ಟಿ ಮಾಡಬೇಕೆಂದು ಪ್ರಯತ್ನಿಸುವಾಗ ಜಾಂಬವ ಋಷಿಯು ನೀರಲ್ಲಿ ತನ್ನ ಜಡೆಯನ್ನು ಕೊಡವಿಕೊಂಡು ಮಲಗಿರುತ್ತಾನೆ. ನದಿಯನ್ನು ಕೋಡಿನಿಂದ ತಿವಿದು ಸಾಯಿಸಲು ಅನಂತರ ಪ್ರಪಂಚದ ಮೂರು ಭಾಗ ಭೂಮಿಯಾಯಿತು, ಒಂದು ಭಾಗ ನೀರಾಗಿ ಉಳಿಯಿತು.

ಇನ್ನೊಂದು ಕಥೆ ಹೀಗಿದೆ: '' ಮೂರು ಲೋಕವು ನೀರಿನಿಂದ ಕೂಡಿತ್ತು. ಸೂರ್ಯ, ಚಂದ್ರ, ನಕ್ಷತ್ರಗಳಾವುವೂ ಇರಲಿಲ್ಲ. ಜಾಂಬವ ಮುನಿಯು ಪಾತಾಳದಲ್ಲಿ ಪಾದವಿಟ್ಟು, ಮೃತ್ಯುಲೋಕದಲ್ಲಿ ವಕ್ಕಳವಿಟ್ಟು, ಸ್ವರ್ಗದಲ್ಲಿ ತಲೆಯಿಟ್ಟು ನಿದ್ರಿಸು-ತ್ತಿದ್ದನು. ಜಡೆ ಬಿದ್ದ ಭಾಗವೆಲ್ಲ ಹೆಪ್ಪುಗಟ್ಟಿ ಭೂಮಿಯಾಯಿತು. (ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ: ಪು.62) ಹೀಗೆ ಭೂಮಿ ಸೃಷ್ಟಿಯಾದ ನಂತರ ಇರುವ ಎಂಭತ್ತುನಾಲ್ಕು ಕೋಟಿ ಜೀವರಾಶಿಗಳಲ್ಲಿ ಮಾನವ ಜನ್ಮ ಹುಟ್ಟಿ ಬಂದಿತಂತೆ ಎಂದು ನಂಬಲಾಗಿದೆ.

ಪ್ರಾಚೀನ ಕಾಲದಲ್ಲಿ ಮನುಷ್ಯ ಅಲೆಮಾರಿಯಾಗಿ ಜೀವಿಸುತ್ತಿದ್ದ. ಆಹಾರದ ಅನ್ವೇಷಣೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವಾಗ ಪ್ರಕೃತಿಯಲ್ಲಿ ಕಾಲಕಾಲಕ್ಕೆ ನಡೆಯುವ ವಿಚಿತ್ರ ವೈರುಧ್ಯಗಳನ್ನು ಕಂಡು ಕೆಲವೊಮ್ಮೆ ಭಯಪೀಡಿತನಾದರೆ, ಮತ್ತೊಮ್ಮೆ ವಿನಯದಿಂದ ವರ್ತಿಸಿ ತಲೆ ಬಾಗತೊಡಗಿದ. ಮಣ್ಣು, ಮರ, ಸೂರ್ಯ, ಚಂದ್ರ, ನೀರು, ಪ್ರಾಣಿ ಮುಂತಾದ ಕೆಲವು ವಸ್ತುಗಳನ್ನು

ಕಂಡು ಭಕ್ತಿಯಿಂದ ಪೂಜಿಸತೊಡಗಿದ. ಗುಡುಗು, ಸಿಡಿಲು, ಗಾಳಿಗೆ ಹೆದರಿ ಅವುಗಳಿಂದ ರಕ್ಷಣೆಗಾಗಿ ಅಗೋಚರವಾದ ಶಕ್ತಿಯನ್ನು ಕುರಿತು ಪ್ರಾರ್ಥಿಸ ತೊಡಗಿದ. ಈ ಪರಿಣಾಮ-ವಾಗಿ ಹೆದರಿದ ಮಾನವ ತನ್ನ ಭಯದ ಕಲ್ಪನೆಯ ನಿವಾರಣೆಗಾಗಿ ಪ್ರಾಣದ ರಕ್ಷಣೆಗಾಗಿ ದೇವರನ್ನು ಕಲ್ಪಿಸಿಕೊಳ್ಳತೊಡಗಿದ.

6.2 ಗ್ರಾಮದೇವತೆಯ ಕಲ್ಪನೆ :

ಕಾಲಕ್ರಮೇಣ ಮನುಷ್ಯ ತನ್ನ ಅಲೆಮಾರಿತನವನ್ನು ಬದಲಾಯಿಸಿ ಒಂದೆಡೆ ಇತರ ಜನರೊಡನೆ ಗುಂಪುಗುಂಪಾಗಿ ಒಂದು ಪ್ರದೇಶದಲ್ಲಿ ವಾಸಿಸಲು ಪ್ರಾರಂಭಿಸಿದ. ಜೀವನೋಪಾಯಕ್ಕಾಗಿ ವ್ಯವಸಾಯವನ್ನು ಕಂಡುಕೊಳ್ಳುವುದರ ಮೂಲಕ 'ಕೃಷಿಯುಗ' ಆರಂಭಿಸಿದ. ಫಲವತ್ತಾದ ನೆಲ, ನೀರು ಸಿಕ್ಕಿದ ಕಡೆಯಲ್ಲಿ ವ್ಯವಸಾಯವನ್ನು ಮಾಡಲು ನಿರ್ಧರಿಸಿದ. ಈ ನಿಟ್ಟಿನಲ್ಲಿ ಗ್ರಾಮಗಳು ನಿರ್ಮಾಣವಾಗ ತೊಡಗಿದವು. ಹೀಗೆ ಅಲ್ಲಲ್ಲಿ ನೆಲೆ ನಿಂತ ಜನಸಮೂಹಗಳು ಹಳ್ಳಿಗಳಾಗಿ ಪರಿಣಮಿಸಿದವು. ತನ್ನ ಮತ್ತು ತನ್ನವರ ರಕ್ಷಣೆಗಾಗಿ ದೇವರನ್ನು ಕಲ್ಪಿಸಿಕೊಂಡು ಗುಡಿ-ಗುಂಡಾರಗಳನ್ನು ನಿರ್ಮಾಣ ಮಾಡತೊಡಗಿದ. ಹಳ್ಳಿಗಳಲ್ಲಿ ದೇವರ ಪೂಜೆ, ಪುನಸ್ಕಾರಗಳು ಹೆಚ್ಚುತ್ತಾ ಹೋದಂತೆ ಒಂದು ದೇವರು ಬೇಡಿಕೆಯನ್ನು ಈಡೇರಿಸುವಲ್ಲಿ ವಿಫಲವಾದಾಗ ಮತ್ತೊಂದು ದೇವರನ್ನು ಸೃಷ್ಟಿಸಿ ಅದಕ್ಕೆ ಶರಣು ಹೋಗತೊಡಗಿದ. ಈ ದಿಶೆಯಲ್ಲಿ ಗ್ರಾಮದೇವತೆಗಳ ಸಂಖ್ಯೆ ಅಂತೂ ಹಳ್ಳಿಗಳಲ್ಲಿ ಹೆಚ್ಚುತ್ತಾ ಹೋಯಿತು. ಭಯ-ಬೇಡಿಕೆಯನ್ನು ಪೂರೈಸಿಕೊಳ್ಳುವ ಹಿನ್ನೆಲೆಯಲ್ಲಿ ಬಹು ಪಾಲು ದೇವರುಗಳು ಹುಟ್ಟಿಕೊಂಡವು. ಕೆಲವು ಸಲ ದೆವ್ವವೆಂದು ಭಯ-ಭೀತರಾಗಿ ಹೆದರಿ ಇನ್ನೊಂದು ಸಲ ದೇವರಾಗಿ ಪರಿಣಮಿಸಿದಾಗ ಕೈ ಮುಗಿಯ ತೊಡಗಿದ. ದೆವ್ವ ದೈವವಾಗಿ ಪರಿವರ್ತನೆಯಾಯಿತು. ಗ್ರಾಮಗಳ ಸ್ಥಾಪನೆಗೆ ಮಾನವ ಹೇಗೆ ಐಕ್ಯತೆಯನ್ನು ಕಂಡುಕೊಂಡನೋ ಹಾಗೆಯೇ ದೇವರುಗಳ ಸೃಷ್ಟಿಗೂ ಕಾರಣನಾದನು. ಕ್ರಮೇಣ ಒಬ್ಬರಿಗೆ ಒಂಭತ್ತು ದೇವತೆ ಅಥವಾ ದೇವರುಗಳು ಹುಟ್ಟಿಕೊಂಡವು.

ಗ್ರಾಮದೇವತೆಗಳ ಸೃಷ್ಟಿಯು ಹೇಗೆ ಆಯಿತೆಂಬುದಕ್ಕೆ ಅಧ್ಯಾಯ ಮೂರರಲ್ಲಿ ತಿಳಿಸಿದಂತೆ ಜಮದಗ್ನಿ, ರೇಣುಕೆ ಹಾಗೂ ಪರಶುರಾಮರ ಕಥೆಯೇ ಕಾರಣವಾಗುತ್ತದೆ.

ಜನಪದರು ದೇವತೆಯನ್ನು ಬರಿಯ ಕಲ್ಲಿನ ಮೂರ್ತಿಯೆಂದು ಭಾವಿಸಿ–ಕೊಳ್ಳದೇ ತಮ್ಮಂತೆಯೇ ಜೀವ, ಭಾವದಿಂದ ಕೂಡಿದುದೆಂದು ತಿಳಿಯುತ್ತಾರೆ. ಆದಕಾರಣ ತಮ್ಮಂತೆ ಬೇಕು ಬೇಡಗಳನ್ನು, ಮದುವೆ ಆಚರಣೆಗಳನ್ನು ಮಾಡುತ್ತಾರೆ. ತಮ್ಮ ಕಷ್ಟದ ಸಮಯದಲ್ಲಿ ದೇವತೆಯನ್ನು ಬೇಡಿಕೊಂಡು ಅದು ಈಡೇರಿದಾಗ ತಮಗೆ ತಿಳಿದ ಹರಕೆಯನ್ನು ಅಷ್ಟೇ ಭಕ್ತಿಯಿಂದ ಹಾಗೂ ಮೂಢನಂಬಿಕೆಯಿಂದ ಅರ್ಪಿಸುವುದನ್ನು ಈಗಲೂ ಅವರಲ್ಲಿ ಕಾಣಬಹುದಾಗಿದೆ.

ಒಂದು ಗ್ರಾಮದಲ್ಲಿ ಅನೇಕ ಗ್ರಾಮದೇವತೆಗಳಿರುತ್ತವೆ. ಆದರೆ ಗ್ರಾಮ ದೇವತೆ ಮಾತ್ರ ಒಂದೇ ಆಗಿರುತ್ತದೆ. ಆ ಗ್ರಾಮದೇವತೆಯೇ ಅಂಥಾ ಗ್ರಾಮದ ಅಧಿದೇವತೆಯಾಗಿ ಕೆಲವರಿಗೆ ಕುಲದೇವತೆಯಾಗಿ ಇರುತ್ತಾಳೆ. ಸಾಮಾನ್ಯವಾಗಿ ಹೆಣ್ಣು ದೇವತೆಯೇ ಗ್ರಾಮದೇವತೆಯಾಗಿರುತ್ತಾಳೆ. ಇಲ್ಲಿ ಹೊಸೂರಮ್ಮ ಮತ್ತು ಎಲ್ಲಮ್ಮನನ್ನು ಅಭೇದ್ಯವಾಗಿ ಜನಪದರು ಕಲ್ಪಿಸುತ್ತಾರೆ. ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಇತರ ಮುಖ್ಯ ದೈವಗಳೆಂದರೆ, ಗುಲಬರ್ಗ ಜಿಲ್ಲೆಯ ಚುಂಚೂರು ಎಲ್ಲಮ್ಮ, ಜಗದುರಿ ಎಲ್ಲಮ್ಮ, ಮಡ್ಡಿ ಎಲ್ಲಮ್ಮ, ಗಿಡದ ಎಲ್ಲಮ್ಮ, ಧಾರವಾಡದ ಲಕ್ಷ್ಮೀಕೆರೆ ಎಲ್ಲಮ್ಮ, ಚಂದ್ರಗುತ್ತಿ ಎಲ್ಲಮ್ಮ, ಕೆರೂರು ಎಲ್ಲಮ್ಮ, ದೇವಗಿರಿ ಎಲ್ಲಮ್ಮ, ಉಪ್ಪಿನ ಬೆಟಗೇರಿ ಎಲ್ಲಮ್ಮ. ಹುಲ್ಲೂರು ಎಲ್ಲಮ್ಮ. ಬಂಕಾಪುರ ಎಲ್ಲಮ್ಮ, ಬೆಳಗಾಂವಿಯ ಎಲ್ಲಮ್ಮ, ಗದಗ ಎಲ್ಲಮ್ಮ, ರಾಣೀಬೆನ್ನೂರು ಎಲ್ಲಮ್ಮ ಹೀಗೆ ನಾನಾ ಊರಿನಲ್ಲಿ ಹೆಣ್ಣು ದೇವತೆ ವಾಸವಾಗಿದ್ದಾಳೆ. (ಹುಲಿಗೆಮ್ಮ: ಅಧ್ಯಯನ ಡಾ. ಪುರುಷೋತ್ತಮ ಬಿಳಿಮಲೆ. ಅಪ್ರಕಟಿತ) ಈ ಮೇಲಿನ ಎಲ್ಲಮ್ಮನಲ್ಲದೆ ಅಂಥಾ ಊರು, ಗ್ರಾಮಗಳಿಗೆ ಬೇರೆ ಬೇರೆ ದೇವತೆಗಳು ಇವೆ. ಉದಾಹರಣೆಗೆ: ಮುನಿರಾಬಾದ ಅಥವಾ ಹುಲಿಗಿಯ ಹುಲಿಗೆಮ್ಮ, ಉಜ್ಜನಿ ಚೌಡಮ್ಮ, ಸವದತ್ತಿ ಎಲ್ಲಮ್ಮ, ಶಿರಸಿ ಮಾರಮ್ಮ, ಕೊಲ್ಲೂರು ಮೂಕಮ್ಮ, ಸಿರಸಂಗಿ ಕಾಳಮ್ಮ, ಗೋಕಾಕದ ದ್ಯಾಮಮ್ಮ, ಬಳ್ಳಾರಿ ದುರ್ಗಮ್ಮ, ಬಾದಾಮಿ ಬನಶಂಕರಿ ಅಲ್ಲದೆ ಹೊಂಬಾಳಮ್ಮ, ಹುಚ್ಚಮ್ಮ, ಬನ್ನಿಕಾಳಮ್ಮ, ಕೆಂಚಮ್ಮ ಮುಂತಾದ ನೂರಾರು ಹೆಣ್ಣು ದೇವತೆಗಳ ಸಾಲಿನಲ್ಲಿ ಬರುವ ಈ ಹೊಸೂರು ಗ್ರಾಮದ ಹೊಸೂರಮ್ಮ ಸಹ ಗ್ರಾಮದೇವತೆಯಾಗಿ ಕೆಲವರ ಕುಲ ದೇವತೆಯಾಗಿ ತಮ್ಮ ಮಹಿಮೆಯನ್ನು ವ್ಯಕ್ತಪಡಿಸಿದ್ದಾಳೆಂದು ಅಲ್ಲಿನ ಜನರು ಹೇಳುತ್ತಾರೆ.

6·3 ಜಾತ್ರೆ

ನಿಘಂಟುಗಳ ಪ್ರಕಾರ 'ಜಾತ್ರೆ' ಅಂದರೆ 'ಯಾತ್ರೆ' ಯ ತದ್ಭವ ರೂಪ. ಮನುಷ್ಯ ಪ್ರಾಣಿಯು ಈ ಸೃಷ್ಟಿಯಲ್ಲಿ ಬದಲಾಗುವ ಸನ್ನಿವೇಶಗಳಾದ ರಾತ್ರಿ–ಹಗಲು ಬಿಸಿಲು–ಗಾಳಿಗಳ ಈ ಬದಲಾವಣೆಗಳನ್ನು ನೋಡಿ ಕಣ್ಣಿಗೆ ಕಾಣದ ಅಗೋಚರವಾದ ಈ ಶಕ್ತಿಯನ್ನು ಕಂಡು ಕೆಲವೊಮ್ಮೆ ಭೀತಿಗೊಳಾದಾದರೆ, ಮತ್ತೊಮ್ಮೆ ಭಕ್ತಿಯಿಂದ ತಲೆಬಾಗತೊಡಗಿದ. ಈ ಭೀತಿಯ ನಿವಾರಣೆಗಾಗಿ ಆ ದೇವರ ಕಲ್ಪನೆ ತಂದುಕೊಂಡು ಧಾರ್ಮಿಕ ಭಾವನೆಯಲ್ಲಿ ಗುಂಪು ಗುಂಪಾಗಿ ಜನರೊಡಗೂಡಿ ದೇವರನ್ನು ಆರಾಧಿಸಲು ಮುಂದಾದನು. ನಂತರ ವರ್ಷಕ್ಕೊಂದಾವರ್ತಿ ವಿಶೇಷ ಉತ್ಸವ ಮಾಡಲು ಅನುವಾದಾಗ 'ಜಾತ್ರೆ' ಎಂಬುದು ಹುಟ್ಟಿಕೊಂಡಿತು.

ಪ್ರತಿ ನಿತ್ಯವೂ, ಪ್ರತಿ ಕ್ಷಣವೂ ನಿಸರ್ಗದ ಮಡಿಲಲ್ಲಿ ದುಡಿಯುವ ಜನತೆ ಈ ಬದುಕಿನಿಂದ ಸ್ವಲ್ಪ ಕಾಲ ವಿರಾಮ ಪಡೆದು ನೆಮ್ಮದಿಯಾಗಿ ಉಸಿರಾಡಲು ವರ್ಷದಲ್ಲಿ ಒಂದೆರಡು ದಿನ ಹಬ್ಬ, ತೇರು, ಉತ್ಸವ ಎಂಬುದರ ಮೂಲಕ ಜಾತ್ರೆಯನ್ನು ಆಚರಿಸುವುದನ್ನು ಕಲಿತರು. ರಥ ಎಳೆಯುವುದು, ಹರಕೆ–ಕಾಣಿಕೆ ಅರ್ಪಿಸುವುದು, ಭಜನೆ ಹಾಡು, ಕುಣಿತ, ಬರುಸುಬಾಣ ಇತ್ಯಾದಿಗಳೆಲ್ಲವೂ ಜಾತ್ರೆಯಲ್ಲಿ ಸೇರಿಕೊಂಡಿರುತ್ತದೆ. ಅನೇಕರ ದೃಷ್ಟಿಯಲ್ಲಿ ಹಳ್ಳಿಗಳಲ್ಲಿ ಜಾತ್ರೆಯೆಂದರೆ, ಇಡೀ ಗ್ರಾಮದ ಹಬ್ಬವಾಗಿರುತ್ತದೆ. ಬಂಧು–ಬಳಗವನ್ನು ಆಹ್ವಾನಿಸುವುದು, ಊರು–ಕೇರಿಗಳನ್ನು ಹತ್ತಿರ ತಂದು ಒಂದು ಮಾಡುವುದು ಇದೇ ಸಂದರ್ಭದಲ್ಲಿ ಹೆಚ್ಚು ಕಂಡುಬರುತ್ತದೆ. ಅನೇಕ ಧರ್ಮಗಳ ಸಂಗಮವನ್ನು ಇಲ್ಲಿ ಕಾಣುವುದರಿಂದ ಜಾತಿಯ ಸಮಸ್ಯೆ ಇಲ್ಲಿ ಕಂಡುಬರುವುದಿಲ್ಲ. ಇಲ್ಲಿಯ ಜನರಲ್ಲಿ ಸಂಪತ್ತು ಶಾಶ್ವತವಾಗಿರುವುದಿಲ್ಲ ಧರ್ಮವೇ ನಿಜವಾದ ಸಂಪತ್ತು ಎಂದು ಭಾವಿಸಿಕೊಂಡಿರುತ್ತಾರೆ.

ಜಾತ್ರೆಯು ಕುಲದೇವತೆ ಹಾಗೂ ಗ್ರಾಮದೇವತೆಗಳ ಉತ್ಸವವಾಗಿದ್ದು ವಿಭಿನ್ನ ಜಾನಪದ ವೃಂದಗಳನ್ನು ಅವರವರ ಕೌಟುಂಬಿಕ ಪರಿಧಿಯನ್ನು ದಾಟಿಸಿ ಎಲ್ಲರನ್ನೂ ಸಾಮಾಜಿಕ ವಲಯದಲ್ಲಿ ಒಂದುಗೂಡಿಸುವಂಥಾದ್ದಾಗಿರುತ್ತದೆ. ಎಲ್ಲರಲ್ಲಿ ಸಾಮರಸ್ಯ ಮನೋಭಾವ ಉಂಟುಮಾಡುವಂಥದ್ದು, ಜಾತ್ರೆ ಎನ್ನುವುದು ಗ್ರಾಮದ ಒಕ್ಕಟ್ಟಿನ ಸಂಕೇತವಾಗಿರುತ್ತದೆ.

ಇನ್ನು ಜಾತ್ರೆ ನೆರವೇರದ ಯಾವ ಗ್ರಾಮವೂ ಇಲ್ಲ. ಧಾರ್ಮಿಕ ಸಮನ್ವಯ, ಭಕ್ತಿ ಭಾವಗಳ ಜೊತೆ ಜೊತೆಗೆ ವಿವಿಧ ಜನಪದವೃಂದಗಳಲ್ಲಿ ಒಡಮೂಡುವ ಸಾಮಾಜಿಕ ಸಮನ್ವಯ ಮತ್ತು ಸಾಮೂಹಿಕ ಕ್ರಿಯಾಶೀಲತೆಗಳು ಜಾತ್ರೆಗೆ ಒಂದು ಬಗೆಯಲ್ಲಿ ಸಾಂಸ್ಕೃತಿಕ ಸ್ವರೂಪ ತಂದುಕೊಡುವಲ್ಲಿ ಸಫಲವಾಗುತ್ತವೆ. ಜಾತ್ರೆ ಎಂಬುದು ಜಾನಪದ ರೂಢಿಯ ಸಂಪ್ರದಾಯಗಳ ಒಂದು ವಿಶೇಷ ಅಂಗ.

ಈ ಆಚರಣೆಗಳು ಹುಟ್ಟಿಕೊಂಡಿದ್ದೇ ಸಂತೋಷವಾಗಿ ಜೀವನ ನಡೆಸಬೇಕೆಂಬ ಉದ್ದೇಶದಿಂದ. ಈ ಮುಂತಾದ ವಿಧಿ ವಿಧಾನಗಳೆಲ್ಲ ಜಾನಪದದ ಭಾಗವೇ ಆಗಿವೆ. ಇಲ್ಲಿ ವೈಯುಕ್ತಿಕತೆಗಿಂತ ಸಮಷ್ಟಿಯ ಹಿತಾಸಕ್ತಿಯ ಕಡೆಗೆ ಒಲವು ಹೆಚ್ಚು ಮಾಡುವಂಥಹ ಕ್ರಿಯೆ ನಡೆದಿರುತ್ತದೆ.

ವರ್ಷದ ನಿರ್ದಿಷ್ಟ ದಿನದಂದು ಗುರುತಿಸಿಕೊಂಡು ಅದೇ ದಿನ ದೇವತೆಯ ಜಾತ್ರೆಯನ್ನು ಆಚರಿಸುವ ಸಂಪ್ರದಾಯ ಬಹಳ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ದೂರದ ಜಾತ್ರೆಗೆ ಹೋಗಬೇಕಾದ ಸಂದರ್ಭದಲ್ಲಿ ಹಿಂದಿನ ಕಾಲದಲ್ಲಿ ಅನೇಕ ಕುಟುಂಬಗಳು ಒಂದುಗೂಡಿ ಎತ್ತಿನ ಬಂಡಿಯನ್ನು ಕಟ್ಟಿಕೊಂಡು ಹೋಗುತ್ತಿದ್ದರು. ಇತ್ತೀಚೆಗೆ ವಿವಿಧ ವಾಹನಗಳ ಸೌಕರ್ಯ ಒದಗಿ ಬಂದಿದ್ದರಿಂದ ಕಾಲ್ನಡಿಗೆ ಮತ್ತು ಎತ್ತಿನ ಬಂಡಿಗಳು ಕೆಲವೆಡೆ ಮೂಲೆಗುಂಪಾಗಿವೆ. ನಾಗರಿಕತೆಯ ಬೆಳವಣಿಗೆ ಎಲ್ಲಾ ಕಡೆ ಬಹಳ ಬೇಗ ಪರಿಣಾಮಕಾರಿಯಾಗಿ ಕಾಲಿಡುತ್ತಿರುವುದರಿಂದ ಹಳೆಯ ಮೌಲ್ಯಗಳು ಮೂಲೆ-ಗುಂಪಾಗುವ ಸ್ಥಿತಿ ಬಂದಿದೆ. ಹಾಗೆಯೇ ಬದಲಾಗುತ್ತಿರುವುದೂ ಸಹ ವಾಸ್ತವಿಕ ಸಹಜಕ್ರಿಯೆ ಅಲ್ಲವೆ?

ಇನ್ನು ಶಿಷ್ಟದೇವರುಗಳ ಜಾತ್ರೆಗಳಿಗಿಂತ ಗ್ರಾಮೀಣ ಪರಿಸರದ ಜಾತ್ರೆಗಳು ವಿಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಹೊಸೂರಮ್ಮನ ಜಾತ್ರೆ ಎನ್ನುವುದು ರಥದಲ್ಲಿ ಉತ್ಸವ ಮೂರ್ತಿಗಳನ್ನಿಟ್ಟು ವರ್ಷದಲ್ಲಿ ಒಂದು ದಿನ ಎಳೆಯುವ ರೀತಿಯದಲ್ಲ. ಇಲ್ಲಿಯ ಜಾತ್ರೆ ಸತತವಾಗಿ ಹತ್ತು-ಹನ್ನೊಂದು ದಿನಗಳ ಕಾಲ ಬೇರೆ ಬೇರೆ ರೀತಿಯ ಉತ್ಸವ ಹಾಗೂ ಪೂಜಾವಿಧಿಗಳ ಮೂಲಕ ಜಾತ್ರೆಯು ಅನೇಕ ನಿಯಮಗಳಿಂದ ಜರುಗುತ್ತದೆ. ಅಲ್ಲದೆ ಈ ಉತ್ಸವದ ಹಿಂದಿನ ದಿನಗಳಲ್ಲಿ ಗ್ರಾಮದ ಸಮಸ್ತ ಜನರು

ತಮ್ಮ ತಮ್ಮ ಮನೆಗಳಿಗೆ ಸುಣ್ಣ-ಬಣ್ಣ ಹಚ್ಚಿಕೊಳ್ಳುತ್ತಾರೆ. ಮತ್ತು ತಮ್ಮ ತಮ್ಮ ನೆಂಟರಿಷ್ಟರನ್ನು ಮುಂದು ಬರುವ ಜಾತ್ರೆಗೆ ಆಹ್ವಾನಿಸುತ್ತಾರೆ. ಹೊಸ ಹೊಸ ಬಟ್ಟೆಗಳನ್ನು ಸಿದ್ಧಪಡಿಸಿಟ್ಟುಕೊಳ್ಳುತ್ತಾರೆ. ಮನೆಗಳಲ್ಲಿ ಮಹಿಳೆಯರು ವಿವಿಧ ರೀತಿಯ ಸಿಹಿ-ಖಾರದ ತಿಂಡಿ ತಿನಿಸುಗಳ ಜೊತೆಗೆ ರೊಟ್ಟಿಯನ್ನು ಸಹ ಮಾಡಿಟ್ಟುಕೊಳ್ಳುತ್ತಾರೆ.

ಈ ಗ್ರಾಮದ ಜಾತ್ರೆಯ ದಿನಗಳಲ್ಲಿ ಇಲ್ಲಿಯ ಪೂಜಾಪದ್ಧತಿಯು ಪ್ರಧಾನ ಅರ್ಚನೆ ಬ್ರಾಹ್ಮಣ ಪೂಜಾರಿಯಿಂದ ನಡೆಯುತ್ತದೆ. ಆದರೆ ಅಕ್ಕಿಪಡಿ, ಬಾಳೆದಂಡಿಗೆ ಹಾಗೂ ಅಗ್ನಿಕುಂಡದ ದಿನದಲ್ಲಿ ವೀರಶೈವ ಪೂಜಾರಿಯು ಪೂಜೆ ಸಲ್ಲಿಸು-ತ್ತಾನೆ. ಹಾಗೂ ಆತನಿಂದ ಕೆಲವು ಪವಾಡಗಳು ನಡೆಯುತ್ತವೆ. ಒಟ್ಟಾರೆ ಈ ಹೊಸೂರಮ್ಮನ ಜಾತ್ರಾ ಉತ್ಸವವು ಎರಡು ಪಂಥಗಳಿಂದ ಸಾಂಗವಾಗಿ ಅನುಷ್ಠಾನಗೊಳ್ಳುತ್ತದೆ.

: <u>ಹೊಸೂರಮ್ಮ ದೇವಿ ಜಾತ್ರೆಯ ವಿವಿಧ ಕಾರ್ಯಕ್ರಮಗಳು ಹೀಗಿವೆ</u> :

ಜಾತ್ರೆಗೆ ಸಂಬಂಧಿಸಿದ ವಿವಿಧ ಉತ್ಸವದ ಕಾರ್ಯಕ್ರಮಗಳ ಪಟ್ಟಿಯನ್ನು ಸುಮಾರು ಒಂದು ತಿಂಗಳು ಮೊದಲೇ ಪಂಚಾಂಗವನ್ನು ನೋಡಿ ಸಿದ್ಧಪಡಿಸುತ್ತಾರೆ. ಈ ಬಗ್ಗೆ ಗ್ರಾಮದಲ್ಲಿ ಪೂಜಾರಿಗಳು ಹಾಗೂ ಪ್ರಮುಖರು ಸಂಬಂಧಿಸಿದ ಇತರೇ ಜನರೆಲ್ಲಾರೂ ಸೇರಿ ಸಭೆಯೊಂದನ್ನು ಮಾಡುತ್ತಾರೆ. ಇದರಲ್ಲಿ ಜಾತ್ರೆಗೆ ಸಂಬಂಧ ಪಟ್ಟ ಕೆಲವು ಕಾರ್ಯಕ್ರಮಗಳ ಮತ್ತು ಇತರ ವಿಚಾರಗಳ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾರೆ. ಮೇಲೆ ತಿಳಿಸಿದಂತೆ ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಿ ಅದನ್ನು ಆಹ್ವಾನ ಪತ್ರಿಕೆಯಲ್ಲಿ ಪ್ರಕಟಪಡಿಸಿ ಎಲ್ಲಾ ಜನರಿಗೆ ಕೊಡುತ್ತಾರೆ.

ಈ ಬಾರಿ ಅಂದರೆ ಶ್ರೀ ಮನ್ನೃಪ ಶಾಲಿವಾಹನ ಶಕೆ 1918 ನೇ ಧಾತೃನಾಮ ಸಂವತ್ಸರದ 1996 ನೇ ಇಸ್ವಿಯ ಜಾತ್ರೆಯ ಕಾರ್ಯಕ್ರಮಗಳು ಈ ರೀತಿಯಾಗಿವೆ. ದಿನಾಂಕ 18.05.1996 ರ ಪ್ರತಿಪದ ಶನಿವಾರದಂದು ಜಾತ್ರಾ ಉತ್ಸವವು ಮೊದಲು ಕಂಕಣಧಾರಣೋತ್ಸವದ ಮೂಲಕ ಆರಂಭವಾಯಿತು.

ಕಂಕಣಧಾರಣ :

ಜಾತ್ರೆಯ ಮೊದಲ ದಿನದಂದು ಹೊಸೂರಮ್ಮ ದೇವಿಗೆ ವಿಶೇಷ ಪೂಜೆ ಮಾಡುತ್ತಾರೆ. ಅಂದು ದೇವಿಯನ್ನು ನೀರಿನಿಂದ ತೊಳೆದು ಸಂಪೂರ್ಣ ಹೂವು ಬಿಲ್ವಪತ್ರಿಗಳಿಂದ ಅಲಂಕಾರಗೊಳಿಸುತ್ತಾರೆ. ಜೊತೆಗೆ ಕುಂಕುಮಾರ್ಚನೆ, ಪುಷ್ಪಾರ್ಚನೆ ಹಾಗೂ ಮಂತ್ರಪಠಣದ ಮೂಲಕ ಮಹಾ ಮಂಗಳಾರತಿ ಜರುಗುತ್ತದೆ. ಈ ದಿನ ವೀರಶೈವ ಪೂಜಾರಿಯವರನ್ನು ರಾತ್ರಿ ಪಂಜಿನೊಡನೆ ಹಾಗೂ ಮಂಗಳ ವಾದ್ಯಗಳ ಸಮೇತವಾಗಿ ಮನೆಯಿಂದ ದೇವಿಯ ಗುಡಿಗೆ ಕರೆದುಕೊಂಡು ಬರುತ್ತಾರೆ. ನಂತರ ದೇವಸ್ಥಾನದೊಳಗಿರುವ ಪಂಚಲೋಹದ (ಕಂಚಿನ) ಮೂರ್ತಿಗಳಾದ ಪರಶುರಾಮ ಮತ್ತು ರೇಣುಕೆಯ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ತುಂಗಭದ್ರಾ ನದಿಗೆ ಹೋಗುತ್ತಾರೆ. ಸಾಮಾನ್ಯವಾಗಿ ಗ್ರಾಮದ ಹಾಗೂ ಇತರಡೆಗಳಿಂದ ಬಂದಂಥಹ ಭಕ್ತಾದಿಗಳೆಲ್ಲರೂ ಸಹ ಭಾಗವಹಿಸಿರುತ್ತಾರೆ. ನದಿಯಲ್ಲಿ ಎಲ್ಲಾರೂ ಸ್ನಾನಾದಿಗಳನ್ನು ಮುಗಿಸಿಕೊಂಡು ಅದೇ ಸಂದರ್ಭದಲ್ಲಿ ಗಂಗಮ್ಮನ ಪೂಜೆಯನ್ನೂ ಹಾಗೂ ಮೂರ್ತಿಗಳ ಪೂಜೆಯನ್ನು ಮಾಡುತ್ತಾರೆ. ನಂತರ ಅದೇ ವಾದ್ಯಗಳ ಸಮೇತವಾಗಿ ವಾಪಾಸು ಹೊಸೂರಮ್ಮನ ಗುಡಿಗೆ ಬರುತ್ತಾರೆ.

ದೇವಸ್ಥಾನಕ್ಕೆ ಬಂದು ಆ ಕಂಚಿನ ಮೂರ್ತಿಗಳಿಗೆ ಹಾಗೂ ದೇವಿಗೆ ಕಂಕಣವನ್ನು ಕಟ್ಟುತ್ತಾರೆ. ನಂತರ ಬ್ರಾಹ್ಮಣ ಮತ್ತು ವೀರಶೈವ ಪೂಜಾರಿಗಳಿಬ್ಬರೂ ಕಂಕಣವನ್ನು ಕಟ್ಟಿಕೊಳ್ಳುತ್ತಾರೆ. ಪೂಜಾರಿಯನ್ನು ಅದೇ ಮಂಗಳ ವಾದ್ಯಗಳ ಸಮೇತವಾಗಿ ಅವರ ಮನೆಗೆ ಬಿಟ್ಟುಬರುತ್ತಾರೆ. ಆ ಪೂಜಾರಿಯವರು ಅಂದಿನಿಂದ ಎಲ್ಲಾ ಉತ್ಸವಕಾರ್ಯಗಳು ಮುಗಿಯುವವರೆಗೂ ಉಪವಾಸ ವ್ರತವನ್ನು ಕೈಗೊಳ್ಳುತ್ತಾರೆ. ಈ ದಿನಗಳಲ್ಲಿ ಅವರು ಬಹಳ ಮಡಿಯಿಂದ ಇದ್ದು ಅಲ್ಪ ಉಪಹಾರವನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಈ ಕಂಕಣ ಕಾರ್ಯಕ್ರಮ ಪ್ರತಿಪದ ಪಾಡ್ಯದ ದಿನದಂದು ರಾತ್ರಿ ಸುಮಾರು ಹತ್ತು ಗಂಟೆಗೆ ನಡೆಯುತ್ತದೆ. ಅಲ್ಲದೆ ಈ ದೇವಿಯ ಉತ್ಸವದಲ್ಲಿ ಪಾಲ್ಗೊಳ್ಳುವ ಸದುದ್ದೇಶದಿಂದ ಆ ಗ್ರಾಮದಲ್ಲಿ ಯಾರೂ ಯಾವುದೇ ಕಾರ್ಯಕ್ರಮಗಳು ಮನೆಯಲ್ಲಿ ನಡೆಯದಂತೆ ಹಾಗೂ ಮತ್ತೊಮ್ಮೆ ಕಂಕಣವನ್ನು ಕಟ್ಟಿಕೊಳ್ಳದಂತೆ ನೋಡಿಕೊಳ್ಳುತ್ತಾರೆ; ಸಾಧ್ಯವಾದಷ್ಟು ಯಾರೂ ತಪ್ಪಿಸದೆ ಈ ಉತ್ಸವಗಳಲ್ಲಿ ಪಾಲ್ಗೊಂಡಿರುತ್ತಾರೆ ಎಂದು ಅಲ್ಲಿನ ಜನರು ಹೇಳುತ್ತಾರೆ.

ಮಯೂರ ವಾಹನೋತ್ಸವ :

ದಿನಾಂಕ 19.05.1996 ರ ರವಿವಾರ ಅಂದರೆ ಮರುದಿನ ಬಿದಿಗೆಯ ದಿನದಂದು ಮಯೂರ ವಾಹನೋತ್ಸವ ಕಾರ್ಯಕ್ರಮ ಆರಂಭವಾಯಿತು.

ಮಯೂರ ವಾಹನವೆಂದರೆ, ಕಟ್ಟಿಗೆಯಿಂದ ತಯಾರಿಸಿಲಾದ ನವಿಲನ್ನು ಮೊದಲು ಪಲ್ಲಕ್ಕಿಯಲ್ಲಿ ಇಟ್ಟು ಅದು ಅಲುಗಾಡದಂತೆ ಹುರಿಯಿಂದ ಕಟ್ಟುತ್ತಾರೆ. ನಂತರ ಪರಶುರಾಮ ಹಾಗೂ ರೇಣುಕೆಯ ಮೂರ್ತಿಗಳನ್ನು ಆ ನವಿಲನ ಮೇಲೆ ಇಟ್ಟು ಬಿಗಿಯಾಗಿ ಕಟ್ಟುತ್ತಾರೆ.

ಪ್ರತಿ ವರ್ಷ ಜಾತ್ರೆಯ ಉತ್ಸವದಲ್ಲಿ ಅನುಕೂಲವಾಗುವುದಕ್ಕೋಸ್ಕರವಾಗಿ ಈ ಮಯೂರವನ್ನು ಕಟ್ಟಿಗೆಯಿಂದ ಸಿದ್ಧಪಡಿಸಿ ಇಟ್ಟಿರುತ್ತಾರೆ. ಹಾಗೆಯೇ ಇನ್ನುಳಿದ ಅಶ್ವವಾಹನ, ಸಿಂಹವಾಹನ, ಶೇಷವಾಹನ, ಶ್ವೇತ ವಾಹನ ಹಾಗೂ ಗೋಪುರನ್ನು ಪ್ರತಿ ವರ್ಷ ಉಪಯೋಗಕ್ಕೆ ಬರುವಂತೆ ತಯಾರು ಮಾಡಿಟ್ಟಿರುತ್ತಾರೆ. ಜಾತ್ರಾ ಸಮಯದಲ್ಲಿ ಮಾತ್ರ ಅವುಗಳಿಗೆ ಮತ್ತೊಮ್ಮೆ ಬಣ್ಣವನ್ನು ಹಚ್ಚಿ ಪಲ್ಲಕ್ಕಿಯಲ್ಲಿ ಇಡುತ್ತಾರೆ.

ಮಯೂರ ವಾಹನೋತ್ಸವದ ದಿನ ಕಾರ್ಯಕ್ರಮವು ಬೆಳಿಗ್ಗೆ ಸುಮಾರು ಹತ್ತು ಗಂಟೆಗೆ ಆರಂಭವಾಗುತ್ತದೆ. ಪೂಜಾರಿಗಳು ಮತ್ತು ಇತರೇ ಜನರು ಕೂಡಿಕೊಂಡು ಮಂಗಳ ವಾದ್ಯಗಳ ಸಮೇತವಾಗಿ ನದಿಗೆ ಹೋಗುತ್ತಾರೆ. ಅಲ್ಲಿ ಗಂಗಮ್ಮನ ಪೂಜೆ ಮಾಡಿಕೊಂಡು ಹಿಂದಿನಂತೆ ವಾಪಾಸು ಗುಡಿಗೆ ಬರುತ್ತಾರೆ. ಉತ್ಸವ ಮೂರ್ತಿಗಳನ್ನು ಮತ್ತು ದೇವಿಯನ್ನು ಪೂಜೆ ಮಾಡುತ್ತಾರೆ. ನಂತರ ಪಲ್ಲಕ್ಕಿಯಲ್ಲಿಟ್ಟುಕೊಂಡು ದೇವಸ್ಥಾನದ ಸುತ್ತಲೂ ಮೂರು ಬಾರಿ ಪ್ರದಕ್ಷಿಣೆಯನ್ನು ಹಾಕುತ್ತಾರೆ. ಆ ಮೂರ್ತಿಗಳನ್ನು ಮೊದಲಿನ ಸ್ಥಳದಲ್ಲಿ ಇಡುತ್ತಾರೆ. ಎಲ್ಲಾರಿಗೂ ಪ್ರಸಾದ ವಿತರಣೆಯಾದ ನಂತರ ಇಲ್ಲಿಗೆ ಮಯೂರ ವಾಹನೋತ್ಸವದ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

<u>ಅಶ್ವವಾಹನೋತ್ಸವ :</u>

ದಿನಾಂಕ 20.05.1996 ರ ಸೋಮವಾರ ತದಿಗೆಯ ದಿನ ಬೆಳಿಗ್ಗೆ ನಾಲ್ಕೈದು ಗಂಟೆಯ ಹೊತ್ತಿನಲ್ಲಿ ಈ ಉತ್ಸವ ಆರಂಭವಾಗುತ್ತದೆ. ಮಯೂರ ವಾಹನೋತ್ಸವದ ರೀತಿಯಲ್ಲಿಯೇ ಈ ಉತ್ಸವವನ್ನು ಮಾಡುತ್ತಾರೆ. ಅಂದರೆ ಕಟ್ಟಿಗೆಯಿಂದ ತಯಾರಾದ ಅಶ್ವವನ್ನು ಪಲ್ಲಕ್ಕಿಯಲ್ಲಿಟ್ಟು ಅಲುಗಾಡದಂತೆ ಹುರಿಯಿಂದ ಕಟ್ಟುತ್ತಾರೆ. ಅದರ ಮೇಲೆ ಉತ್ಸವ ಮೂರ್ತಿಗಳನ್ನಿಟ್ಟು ಕಟ್ಟುತ್ತಾರೆ. ಈ ದಿನವೂ ಸಹ ಎಲ್ಲರೂ ನದಿಗೆ ವಾದ್ಯಗಳ ಸಮೇತವಾಗಿ ಹೋಗುತ್ತಾರೆ. ಅಲ್ಲಿ ಸ್ನಾನ ಮಾಡಿದ ನಂತರ ಗಂಗಮ್ಮನ ಪೂಜೆಯನ್ನು ಮಾಡಿ ವಾಪಸು ದೇವಸ್ಥಾನಕ್ಕೆ ಬರುತ್ತಾರೆ. ನಂತರ ಪಲ್ಲಕ್ಕಿಯನ್ನು ಹಿಂದೆ ಮತ್ತು ಮುಂದೆ ಒಬ್ಬೊಬ್ಬರು ಅಥವಾ ಇಬ್ಬಬ್ಬರು ಹೆಗಲಮೇಲೆ ಹೊತ್ತುಕೊಂಡು ದೇವಸ್ಥಾನವನ್ನು ಮೂರು ಬಾರಿ ಪ್ರದಕ್ಷಿಣವನ್ನು ಹಾಕುತ್ತಾರೆ. ನಂತರ ಆ ಮೂರ್ತಿಗಳನ್ನು ಅಶ್ವದಿಂದ ಬೇರ್ಪಡಿಸಿಡುತ್ತಾರೆ. ಇಲ್ಲಿಗೆ ಈ ದಿನದ ಕಾರ್ಯ ಮುಕ್ತಾಯವಾಗುತ್ತದೆ.

<u>ಸಿಂಹವಾಹನೋತ್ಸವ :</u>

ದಿನಾಂಕ 21.05.1996 ರ ಮಂಗಳವಾರ ಚೌತಿಯ ದಿನದಂದು ಸುಮಾರು ನಾಲ್ಕು ಗಂಟೆಗೆ ಸಿಂಹವಾಹನೋತ್ಸವ ಆರಂಭವಾಗುತ್ತದೆ. ಸಿಂಹದ ಆಕಾರದಲ್ಲಿ ಕಟ್ಟಿಗೆಯಿಂದ ಮಾಡಲಾದ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಹುರಿಯಿಂದ ಕಟ್ಟುತ್ತಾರೆ. ಅದರ ಮೇಲೆ ಉತ್ಸವ ಮೂರ್ತಿಗಳನ್ನಿಟ್ಟು ಕಟ್ಟುತ್ತಾರೆ. ನಂತರ ಪೂಜಾರಿಗಳು ಹಾಗೂ ಇತರ ಜನರೆಲ್ಲರೂ ನದಿಗೆ ವಾದ್ಯಗಳೊಂದಿಗೆ ಹೋಗುತ್ತಾರೆ. ಅಲ್ಲಿ ಗಂಗಮ್ಮನ ಪೂಜೆ ಮಾಡಿಕೊಂಡು ವಾಪಸು ದೇವಸ್ಥಾನಕ್ಕೆ ಬರುತ್ತಾರೆ. ಹೊಸೂರಮ್ಮನ ಪೂಜೆ ಹಾಗೂ ಮೂರ್ತಿಗಳ ಪೂಜೆಯಾದ ನಂತರ ಪಲ್ಲಕ್ಕಿಯನ್ನು ಹೊತ್ತುಕೊಂಡು ದೇವಸ್ಥಾನವನ್ನು ಮೂರು ಬಾರಿ ಪ್ರದಕ್ಷಿಣೆ ಹಾಕುತ್ತಾರೆ. ಈ ದಿನದ ಕಾರ್ಯಕ್ರಮ ಇಲ್ಲಿಗೆ ಮುಗಿಯುತ್ತದೆ.

ಶೇಷವಾಹನೋತ್ಸವ :

ದಿನಾಂಕ 22.05.1996 ರ ಬುಧವಾರ ಪಂಚಮಿಯಂದು ದಿನದಂದು ಬೆಳಿಗ್ಗೆ ನಾಲ್ಕು ಗಂಟೆಗೆ ಶೇಷವಾಹನೋತ್ಸವ ಪ್ರಾರಂಭವಾಗುತ್ತದೆ. ಕಟ್ಟಿಗೆಯಿಂದ ಮಾಡಲಾದ ಶೇಷವನ್ನು ಪಲ್ಲಕ್ಕಿಯಲ್ಲಿಟ್ಟು ಹುರಿಯಿಂದ ಕಟ್ಟುತ್ತಾರೆ. ನಂತರ ಮೂರ್ತಿಗಳನ್ನಿಡುತ್ತಾರೆ. ಮಂಗಳವಾದ್ಯಗಳೊಂದಿಗೆ ಎಲ್ಲರೂ ನದಿಗೆ ಹೋಗಿ ಗಂಗಮ್ಮನ ಪೂಜೆ ಮಾಡಿಕೊಂಡು ವಾಪಾಸು ಗುಡಿಗೆ ಬರುತ್ತಾರೆ. ಇಲ್ಲ ದೇವಿಗೆ ಮತ್ತೆ ಮೂರ್ತಿಗಳಿಗೆ ಪೂಜೆ ಮಾಡುತ್ತಾರೆ. ನಂತರ ಪಲ್ಲಕ್ಕಿಯನ್ನು ಹೆಗಲ ಮೇಲೆ ತೆಗೆದುಕೊಂಡು ದೇವಸ್ಥಾನವನ್ನು ಮೂರು ಬಾರಿ ಪ್ರದಕ್ಷಿಣೆ ಹಾಡುತ್ತಾರೆ; ಈ ಸಂದರ್ಭದಲ್ಲಿ ಜೋಗತಿಯರು ಮತ್ತು ಪೂಜಾರಿಗಳು 'ದೇವಿಯ ಹಾಡುಗಳನ್ನು ಹಾಡುತ್ತಾರೆ. ಇಲ್ಲಿಗೆ ಈ ಉತ್ಸವದ ಕಾರ್ಯವು ಮುಗಿಯುತ್ತದೆ.

ಶ್ವೇತವಾಹನೋತ್ಸವ :

ದಿನಾಂಕ 23.05.96 ರ ಗುರುವಾರ ಷಷ್ಠಿಯದಿನದಂದು ಎಂದಿನಂತೆ ಬೆಳಿಗ್ಗೆ ಈ ಉತ್ಸವವೂ ಸಹ ಆರಂಭಗೊಳ್ಳುತ್ತದೆ. ಅದೇ ಪಲ್ಲಕ್ಕಿಯಲ್ಲಿ ಬಿಳಿ ಬಟ್ಟೆಯನ್ನು ಹಾಕಿ ಅದರ ಮೇಲೆ ಉತ್ಸವ ಮೂರ್ತಿಗಳನ್ನಿಡುತ್ತಾರೆ.
ನದಿಗೆ ಹೋಗಿ ಗಂಗಮ್ಮನ ಪೂಜೆ ಮಾಡಿಕೊಂಡು ಬಂದ ನಂತರ ಪಲ್ಲಕ್ಕಿಯನ್ನು ತೆಗೆದುಕೊಂಡು ಪ್ರದಕ್ಷಿಣೆಯನ್ನು ಹಾಕುತ್ತಾರೆ.

ಗೋಪುರೋತ್ಸವ :

ಸಪ್ತಮಿಯದಿನ ಅಂದರೆ ದಿನಾಂಕ 24.05.96 ರ ಶುಕ್ರವಾರದ ದಿನದಂದು ಈ ಉತ್ಸವವು ಬೆಳಿಗ್ಗೆ ಪ್ರಾರಂಭಗೊಳ್ಳುತ್ತದೆ. ಈ ದಿನವೂ ಸಹ ಕಟ್ಟಿಗೆಯಿಂದ ತಯಾರಿಸಲಾದ ಗೋಪುರವನ್ನು ಪಲ್ಲಕ್ಕಿಯಂತೆ ತಯಾರಿಸಿದ ಬಿದಿರಿನ ಬಂಬುಗಳ ಮೇಲೆ ಬಿಗಿಯಾಗಿ ಕಟ್ಟುತ್ತಾರೆ. ಅದರ ಮುಂದೆ ಉತ್ಸವ ಮೂರ್ತಿಗಳನ್ನಿಡುತ್ತಾರೆ. ಇದೇ ಸಮಯದಲ್ಲಿ ವಾದ್ಯಗಳೊಂದಿಗೆ ಎಲ್ಲರೂ ನದಿಗೆ ಹೋಗಿ ಅಲ್ಲಿ ಗಂಗಮ್ಮ ಪೂಜೆಯನ್ನು ಸಲ್ಲಿಸಿ ಮತ್ತೆ ವಾಪಾಸು ದೇವಸ್ಥಾನಕ್ಕೆ ಬರುತ್ತಾರೆ. ನಂತರ ಇಲ್ಲಿ ದೇವಿಯ ಪೂಜೆ ಹಾಗೂ ಉತ್ಸವ ಮೂರ್ತಿಗಳ ಪೂಜಾ ಕಾರ್ಯವನ್ನು

ಮುಗಿಸಿದ ನಂತರ ಗೋಪುರದ ಪಲ್ಲಕ್ಕಿಯನ್ನು ಇಬ್ಬರು ಭುಜದ ಮೇಲೆ ಹೊತ್ತು, ಕೊಂಡು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆಯನ್ನು ಹಾಕುತ್ತಾರೆ. ಭಕ್ತಾಧಿಗಳಿಗೆಲ್ಲಾ ಪ್ರಸಾದ ವಿತರಣೆ ನಡೆಯುತ್ತದೆ. ಇಲ್ಲಿಗೆ ಈ ದಿನದ ಉತ್ಸವ ಕಾರ್ಯ ಮುಕ್ತಾಯವಾಗುತ್ತದೆ.

<u>ಗಜವಾಹನೋತ್ಸವ</u> :

ದಿನಾಂಕ 25.05.96 ರ ಶನಿವಾರ ಅಷ್ಟಮಿಯ ದಿನದಂದು ಬೆಳಿಗ್ಗೆ ಸುಮಾರು 2 ಗಂಟೆ 30 ನಿಮಿಷಕ್ಕೆ ವೀರಶೈವ ಪೂಜಾರಿ ಹಾಗೂ ಬ್ರಾಹ್ಮಣ ಪೂಜಾರಿಗಳೊಡನೆ ಉಳಿದ ಅನೇಕ ಭಕ್ತಾಧಿಗಳೆಲ್ಲರೂ ಜೊತೆಗೂಡಿ ಮಂಗಳವಾದ್ಯಗಳೊಂಡನೆ ನದಿಗೆ ದೇವಸ್ಥಾನದಿಂದ ಹೋಗುತ್ತಾರೆ.

ಈ ಹಿಂದೆ ತಿಳಿಸಿದಂತೆ ಕಂಕಣಧಾರಣ ದಿನದಿಂದ ಈ ದಿನದವರೆಗೆ ವೀರಶೈವ ಪೂಜಾರಿಯು ಬಹಳ ಮಡಿಯಿಂದ ಇದ್ದು ಉಪವಾಸ ವ್ರತ ಕೈಗೊಂಡಿರುತ್ತಾನೆ. ಹಾಗೂ ಸುಮಾರು 8 ಅಥವಾ 10 ದಿನಗಳವರೆಗೆ ಮುಖಕ್ಷೌರ ಮಾಡಿಕೊಂಡಿರುವುದಿಲ್ಲ. ಈ ವೀರಶೈವ ಪೂಜಾರಿಯನ್ನು ಬಹಳ ಮುತುವರ್ಜಿಯಿಂದ ಎಲ್ಲಾರೂ ನೋಡಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಒಂದು ಬಂಡಿಯಲ್ಲಿ ಕಟ್ಟಿಗೆಯಿಂದ ತಯಾರಿಸಲಾದ ಗಜವನ್ನು (ಆನೆಯನ್ನು) ಅಲುಗಾಡದಂತೆ ಬಿಗಿಯಾಗಿ ಕಟ್ಟಿ ಅದರ ಮೇಲೆ ಉತ್ಸವ ಮೂರ್ತಿಗಳನ್ನೂ ಸಹ ಅಲುಗಾಡದಂತೆ ಬಿಗಿಯಾಗಿ ಕಟ್ಟಿ ಅಲಂಕಾರ ಮಾಡುತ್ತಾರೆ. ಎತ್ತಿನ ಬಂಡಿಯಲ್ಲಿರುವ ಈ ಉತ್ಸವ ಮೂರ್ತಿಗಳ ಮುಂದೆ ಪೂಜಾರಿಯು ಕುಳಿತುಕೊಳ್ಳುತ್ತಾನೆ. ದೇವಸ್ಥಾನದಿಂದ ಮೆರವಣಿಗೆಯ ಮೂಲಕ ನದಿಗೆ ಹೋಗುತ್ತಾರೆ. ನಂತರ ನದಿಯ ದಡೆಯಲ್ಲಿ ವೀರಶೈವ ಪೂಜಾರಿಗೆ ಮುಖಕ್ಷೌರ ಮಾಡಿಸಲಾಗುತ್ತದೆ. ನೆರೆದ ಭಕ್ತರೆಲ್ಲಾರ ಸ್ನಾನಾದಿಗಳು ಮುಗಿದ ನಂತರ ಗಂಗಮ್ಮನ ಪೂಜೆಯನ್ನು ಮಾಡುತ್ತಾರೆ. ಪೂಜೆ ಮುಗಿದ ನಂತರ ಅದೇ ಮಂಗಳ ವಾದ್ಯಗಳ ಸಮೇತವಾಗಿ ವಾಪಾಸು ದೇವಸ್ಥಾನಕ್ಕೆ ಬರುವಾಗ ದಾರಿಯ ಬದಿಯಲ್ಲಿ ಇರುವ ಪವಾಡದ ಆಂಜನೆಯ, ಬಸವಣ್ಣ, ಊರಮ್ಮ ಇತ್ಯಾದಿ ದೇವರುಗಳಿಗೆ ಪೂಜೆ ಮಾಡುತ್ತಾರೆ. ಹಾಗೆಯೇ ದೇಸ್ಥಾನದ ಸುತ್ತಲೂ ಇರುವ ಎಲ್ಲಾ ಉಪದೇವತೆಗಳಿಗೆ ಪೂಜೆ ಸಲ್ಲಿಸಿ ಕಾಯಿ,

ಕರ್ಪೂರ ಹಾಗೂ ನೈವೇದ್ಯಗಳನ್ನು ಅರ್ಪಿಸುತ್ತಾರೆ. ಆ ಪಲ್ಲಕ್ಕಿಯಲ್ಲಿರುವ ಹಾಗೂ ಗಜದ ಮೇಲೆ ಕಟ್ಟಲಾದ ಉತ್ಸವ ಮೂರ್ತಿಗಳಿಗೂ ಪೂಜೆ ಮಾಡುತ್ತಾರೆ. ನಂತರ ಆ ಪಲ್ಲಕ್ಕಿಯನ್ನು ಹೊತ್ತುಕೊಂಡು ಕೆಲ ಭಕ್ತರು ದೇವಸ್ಥಾನದ ಸುತ್ತ ಮೂರು ಪ್ರದಕ್ಷಿಣೆಯನ್ನು ಹಾಕುತ್ತಾರೆ. ಉತ್ಸವ ಮೂರ್ತಿಗಳನ್ನು ಮುಖ್ಯ ದೇವಸ್ಥಾನದ ಮುಂದಿನ ಮುಖ ಮಂಟಪದಲ್ಲಿ ಕಟ್ಟಲಾಗಿರುವ ತೊಟ್ಟಿಲಿನಲ್ಲಿ ಇಟ್ಟು ಮತ್ತೊಮ್ಮೆ ಪೂಜಿಸುತ್ತಾರೆ. ಆನಂತರ ತೊಟ್ಟಿಲು ತೂಗುತ್ತಾ ತೊಟ್ಟಿಲೋತ್ಸವವನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಈ ಸಂದರ್ಭದಲ್ಲಿ ದೇವಸ್ಥಾನಕ್ಕೆ ಸಂಬಂಧಿಸಿದ ಜೋಗತಿಯರು ದೇವಿಯ ಕುರಿತಾದ ಹಾಡುಗಳನ್ನು ಹಾಡುತ್ತಾರೆ. ಈ ತೊಟ್ಟಿಲೋತ್ಸವವನ್ನು ನೋಡಲು ಸಾವಿರಾರು ಜನರು ನೆರೆದಿರುತ್ತಾರೆ.

6.5 ಪವಾಡಗಳು :

ನಮಗೆ ಸಾಧ್ಯವಾಗದ ಯಾವುದೇ ಕೆಲಸ ಕಾರ್ಯಗಳು ಮತ್ತೊಬ್ಬರಿಂದ ನಿರ್ಭಯವಾಗಿ ಅಷ್ಟೇ ಸಹಜ ರೀತಿಯಲ್ಲಿ ನಡೆದಾಗ ಅದನ್ನೇ ಕಣ್‌ಕಟ್ಟೆಂದು ಅಥವಾ ಮಾಯ-ಮಂತ್ರವೆಂದು ಅಥವಾ ವಿಶೇಷವಾಗಿ ಪವಾಡವೆಂದು ಕರೆಯುತ್ತೇವೆ. ಈ ಪವಾಡವೆನ್ನುವುದು ಚಿಕ್ಕದಾಗಿರಬಹುದು, ದೊಡ್ಡದಾಗಿರಲೂ ಬಹುದು. ಉದಾಹರಣೆಗೆ, ವೀರಭದ್ರದೇವರ ಭಕ್ತರು ಆ ದೇವರ ಮುಂದೆ ಆವೇಶದಿಂದ ಒಡಪುಗಳನ್ನು ಹೇಳುತ್ತಾ ನಾಲಗೆ ಮತ್ತು ತುಟಿಗಳಿಗೆ ಶಸ್ತ್ರವನ್ನು ಚುಚ್ಚಿ(ಹಾಕಿ)ಕೊಳ್ಳುತ್ತಾರೆ. ಮೈಲಾರಲಿಂಗನ ಭಕ್ತರು ಭಕ್ತಿಯ ಆವೇಶದಲ್ಲಿ ಮೈಮರೆತು ಕಾಲಿಗೆ ಮೊಳೆ ಹೊಡೆದುಕೊಳ್ಳುತ್ತಾರೆ. ಅಲ್ಲದೆ ಹುಲಿಗೆಮ್ಮನ ಜೋಗತಿಯರು ತಲೆಯ ಮೇಲೆ ಯಾವುದೇ ಆಧಾರವಿಲ್ಲದೆ ನೀರಿನ ಕೊಡವನ್ನಿಟ್ಟುಕೊಂಡು ತದೇಕ ಚಿತ್ತದಿಂದ ಕುಣಿಯುತ್ತಾರೆ. ಹೀಗೆ ಆ ದೇವರ ಭಕ್ತಿಯಲ್ಲಿ ತಲ್ಲೀನವಾದಾಗ ಬಾಹ್ಯ ಜಗತ್ತನ್ನೇ ಸಂಪೂರ್ಣ ಮೈಮರೆತು ಅಸಾಧ್ಯವಾದುದನ್ನು ಸಾಧಿಸುವುದರ ಮೂಲಕ ಆಶ್ಚರ್ಯಕರವಾದ ಕೆಲವು ಪವಾಡಗಳು ನಡೆಯಲ್ಪಡುತ್ತವೆ. ಹಾಗೆಯೇ ಶ್ರೀ ಕ್ಷೇತ್ರ ಹೊಸೂರಿನ ಜಾತ್ರೆಯಲ್ಲಿ ಕೆಲವು ಪವಾಡಗಳು ನಡೆಯುತ್ತವೆ.

ಈ ಪವಾಡಗಳ ಕುರಿತು ಶ್ರೀ ರಂಗೋಪಂತ ನಾಗರಾಜರಾಯರು ತಮ್ಮ ಶ್ರೀ ಹೊಸೂರಾಂಬಾ ಸುಪ್ರಭಾತ ಪದ್ಯವೊಂದರಲ್ಲಿ ಈ ರೀತಿ ವರ್ಣನೆ ಮಾಡಿದ್ದಾರೆ.

ಧರಣಿಗಚ್ಚರಿಯಾದ ಬಹಳ ಕೌತುಕವಸುರಿವ
ವರಬಾಳೆ ದಂಡಿಗೆಯು ಪಾಯಸ ಪವಾಡಗಳ
ಶರಣರಿಂಮತ್ತಗ್ನಿ ಕುಂಡಲೀಲೆಯು ನಡೆಸಿ
ವರುಷ ಹಿಗ್ಗುವದೇವಿ ತವ ಸುಪ್ರಭಾತಂ :26:

ಹೊಸೂರಮ್ಮ ನಂಬಿದಂತಹ ತನ್ನ ಭಕ್ತರಿಗೆ ವರಗಳನ್ನು ಪವಾಡದ ಮೂಲಕ ಅನುಗ್ರಹಿಸುವಂತಹ ಕಾರ್ಯ ಜಾತ್ರೆಯಲ್ಲಿ ನಡೆಯುತ್ತದೆ ಎಂದು ಸ್ಥಳೀಯರು ಬಹಳವಾಗಿ ನಂಬುತ್ತಾರೆ. ಈ ಪವಾಡವನ್ನು ನೋಡಲು ಬೇರೆ ಬೇರೆ ಊರುಗಳಿಂದ ಅನೇಕ ಜನ ಭಕ್ತರು ಬಂದು ಸೇರಿರುತ್ತಾರೆ.

ಬಾಳೆ ದಂಡಿಗೆ :

ದಿ. 26.05.96ರ ರವಿವಾರ ಜ್ಯೇಷ್ಠ ಶುದ್ಧ ನವಮಿಯ ದಿನದಂದು ಈ ಬಾಳೆದಂಡಿಗೆಯು ಪವಾಡವು ವೀರಶೈವ ಪೂಜಾರಿಯಿಂದ ನಡೆಯುತ್ತದೆ.
ಅತೀ ಸಣ ಎಸಳಿನಂತಿರುವುದನ್ನು ಬಾಳೆದಿಂಡಿನಿಂದ ಹೊರತೆಗೆದು ಪೂರ್ಣ ಬೇರ್ಪಡಿಸಿ ಅವರ ಜೊತೆಗೆ ಗಟ್ಟಿಯಾದ ಸುಮಾರು ಮೂರ್ನಾಲ್ಕು ಕಬ್ಬುಗಳನ್ನು ಅದರ ಜೊತೆಯಲ್ಲಿ ಸೇರಿಸಿ ಅದರ ಮೇಲೆ ಬಾಳೆ ಎಲೆಗಳನ್ನು ಮತ್ತು ಹೂವುಗಳನ್ನು ಚೆನ್ನಾಗಿ ಸುತ್ತಿ ಬಿಗಿಯಾಗಿ ಕಟ್ಟಲಾಗಿರುತ್ತದೆ. ಇದನ್ನು ಹಿಂದಿನ ದಿನವೇ ತಯ್ಯಾರು ಮಾಡಿ ವೀರಶೈವ ಪೂಜಾರಿಯ ಮನೆಯಲ್ಲಿ ಇಟ್ಟಿರುತ್ತಾರೆ.

ಈ ದಿನ ಬೆಳಿಗ್ಗೆ ಸು. ಮೂರು ಗಂಟೆಗೆ ಪೂಜಾರಿ ಮತ್ತು ಕೆಲ ಭಕ್ತರು ವಾದ್ಯಗಳ ಸಮೇತವಾಗಿ ನದಿಗೆ ಹೋಗುತ್ತಾರೆ. ಅಲ್ಲಿ ಸ್ನಾನ ಮುಗಿದನಂತರ ದೇವಿಯ ಉಗ್ರ ಸ್ವರೂಪದ ಸಂಕೇತವಾಗಿ ಮುಖಕ್ಕೆ ಕುಂಕುಮವನ್ನು ಹಚ್ಚಿಕೊಳ್ಳುತ್ತಾರೆ. ಗಂಗಾಪೂಜೆಯನ್ನು ಮಾಡಿದ ನಂತರ ವಾದ್ಯಗಳೊಂದಿಗೆ ದೇವಸ್ಥಾನಕ್ಕೆ ಬರುತ್ತಾರೆ.

ಈ ಮೊದಲೇ ದೇವಸ್ಥಾನದ ಹತ್ತಿರವಿರುವ ಆಂಜನೇಯ ದೇವಸ್ಥಾನದಲ್ಲಿ ದೇವಿಗೆ ಸಂಬಂಧಿಸಿದ ಸೀರೆ, ಕುಪ್ಪಸ ಹಾಗೂ ಇತರೇ ವಸ್ತ್ರಗಳನ್ನು ಇಲ್ಲಿ ತಂದಿರಿಸಲಾಗಿರುತ್ತದೆ. ನದಿಯಿಂದ ಬಂದ ನಂತರ ಆ ಆಂಜನೇಯನ ದೇವಸ್ಥಾನದಲ್ಲಿ ಎಲ್ಲಾರೂ ಸೇರುತ್ತಾರೆ. ಅಲ್ಲಿ ತಂದಿಟ್ಟಿರುವ ಬಟ್ಟೆಗಳಿಗೆ ಹರಿಷಿಣ ಕುಂಕುಮ ಹಚ್ಚಿ ಪೂಜೆ ಮಾಡುತ್ತಾರೆ.

ಈ ದಿನ ಬೆಳಿಗ್ಗೆ ರಾತ್ರಿ ಹತ್ತು ಗಂಟೆಗೆ ವಾದ್ಯಗಳ ಮೂಲಕ ವೀರಶೈವ ಪೂಜಾರಿಯನ್ನು ಆತನ ಮನೆಯಿಂದ ದೇವಸ್ಥಾನಕ್ಕೆ ಕರೆತರಲಾಗುತ್ತದೆ. ಜೊತೆಗೆ ಬಾಳೆದಂಡಿಗೆಯನ್ನು ತೆಗೆದುಕೊಂಡು ಬಂದು ದೇವಸ್ಥಾನದಲ್ಲಿ ಇಟ್ಟು ಪೂಜೆ ಸಲ್ಲಿಸಲಾಗುತ್ತದೆ. ನಂತರ ಆ ಪೂಜಾರಿಯು ಆ ಬಾಳೆದಂಡಿಗೆಯನ್ನು ಏರಿ ಕುಳಿತುಕೊಳ್ಳುತ್ತಾನೆ. ಅದನ್ನು ಇಬ್ಬರು ಹಿಂದೆ ಮತ್ತು ~~ಇಬ್ಬರು~~ ಮುಂದೆ ಭುಜದ ಮೇಲೆ ಹೊತ್ತು ಕೊಳ್ಳುತ್ತಾರೆ. ಆಗ ಎಲ್ಲರೂ ಉದೋ...ಉದೋ... ಎಂದು ಜೋರಾಗಿ ಹೇಳುತ್ತಾರೆ. ಆ ಬಾಳೆದಂಡಿಗೆ ಏನೂ ಮುರಿಯುವುದಿಲ್ಲ. ಇದನ್ನೇ ದೇವಿಯ ಮಹಿಮೆ ಎಂದು ನೆರೆದ ಭಕ್ತರು ನಂಬುತ್ತಾರೆ. ಮೂರು ಬಾರಿ ದೇವಸ್ಥಾನವನ್ನು ಪ್ರದಕ್ಷಿಣೆ ಮುಗಿವ ನಂತರ ಗರ್ಭಗುಡಿಯೊಳಗೆ ಪೂಜಾರಿಯನ್ನು ಬಾಳೆದಂಡಿಗೆಯಿಂದ ಕೆಳಗೆ ಇಳಿಸುತ್ತಾರೆ.

ಇದಕ್ಕೂ ಮೊದಲು ಸುಮಾರು ನಾಲ್ಕು ಗಂಟೆಗೆ ಒಂಭತ್ತು ಹೂವಿನ ಪ್ರಸಾದಗಳನ್ನು ಸ್ವೀಕರಿಸಲಾಗುತ್ತದೆ. ಅಂದರೆ ದೇವಿಯ ತಲೆಯ ಮೇಲೆ ಇಟ್ಟಿರುವ ಹೂಗಳನ್ನು ಕೆಳಗೆ ಬೀಳುತ್ತವೆ. ಇದರಿಂದ ಎಲ್ಲಾ ಉತ್ಸವ ಕಾರ್ಯಗಳು ಸುಗಮವಾಗಿ ನಡೆಯಲ್ಪಡುತ್ತವೆ ಎಂದು ಜನರು ನಂಬುತ್ತಾರೆ. ಆ ಹೂವುಗಳನ್ನು ಪೂಜಾರಿಯು ತೆಗೆದುಕೊಂಡು ಕೆಲ ಭಕ್ತರಿಗೆ ಹಂಚುತ್ತಾನೆ. ಇದರಿಂದ ಬೇಡಿಕೊಂಡ ಭಕ್ತರಿಗೆ ತಮಗೆ ಒಳ್ಳೆಯದಾಗುತ್ತದೆಂದು ಆ ಹೂವನ್ನು ಸ್ವೀಕರಿಸುತ್ತಾರೆ. ಈ ಘಟನೆಯನ್ನು ನೋಡಲು ಸಾವಿರಾರು ಜನರು ಸೇರಿರುವುದು ಕಂಡುಬರುತ್ತದೆ.

<u>ಪಾಯಸ ಮತ್ತು ಅಗ್ನಿಕುಂಡ :</u>

ಈ ಕಾರ್ಯಕ್ರಮವು ದಿ. 27.05.96 ರ ಸೋಮವಾರ ಜ್ಯೇಷ್ಠ ಶುದ್ಧ ದಶಮಿಯಂದಿನ ನಡೆಯುತ್ತದೆ. ಈ ಕಾರ್ಯವು ರಾತ್ರಿ ಸುಮಾರು 10 ಗಂಟೆಗೆ ಆರಂಭವಾಗುತ್ತದೆ. ಮೊದಲೇ ತಂತ್ರ್ಯರು ಮಾಡಲಾದ ಚಿಕ್ಕ ಹೊಂಡದಲ್ಲಿ ಒಂದು ಬಂಡಿ ಕಟ್ಟಿಗೆಗಳನ್ನು ಕ್ರಮವಾಗಿ ಜೋಡಿಸಲಾಗುತ್ತದೆ. ಆ ಹೊಂಡಕ್ಕೆ ಅಥವಾ ಕುಂಡಕ್ಕೆ ಪೂಜೆಯನ್ನು ಪೂಜಾರಿಯು ಮಾಡುತ್ತಾನೆ. ಗಂಧದ ಕಟ್ಟಿಗೆಯ ಚಿಕ್ಕ ತುಂಡುಗಳಿಗೆ ಬಟ್ಟೆಯನ್ನು ಸುತ್ತಿ, ಎಣ್ಣೆಯಲ್ಲಿ ಅದ್ದಿದ ಆ ತುಂಡನು ಒಂದು ದೊಡ್ಡ ಕಟ್ಟಿಗೆಗೆ ಸಿಕ್ಕಿಸಿಕೊಂಡು ಆ ಪೂಜಾರಿಯು ಗರ್ಭಗುಡಿಯೊಳಗಿರುವ ದೀಪದ ಸಹಾಯದಿಂದ ಅದನ್ನು ಹಚ್ಚಿಕೊಂಡು ಬಂದು ಜೋಡಿಸಿಟ್ಟರಲಾದ ಕಟ್ಟಿಗೆಗಳಿಗೆ ಹಚ್ಚುತ್ತಾನೆ. ನಂತರ ದೇವಸ್ಥಾನಕ್ಕೆ ಎಡಕ್ಕಿರುವ ಚಿಕ್ಕದಾದ ಸಿಡಿ ಕಟ್ಟೆಯೆಂದು ಕರೆಯಲಾಗುವ ಆ ಕಟ್ಟೆಯ ಮೇಲೆ ರಾತ್ರಿ ಸುಮಾರು 11 ಗಂಟೆಗೆ ಒಂದು ಕಂಬಳಿ ಹಾಸಿ ಅದರ ಮೇಲೆ ಸೇರು ಪಾವು ಅಕ್ಕಿಯನ್ನು ಹಾಕಿ ಪಾಯಸ ಮಾಡುವುದಕ್ಕೆ ಬೇಕಾಗುವ ಒಂದು ಹೊಸ ಗಡಿಗೆಯನ್ನು ಆ ಅಕ್ಕಿಯ ಮೇಲಿಟ್ಟು ಅದಕ್ಕೆ ಪೂಜೆ ಮಾಡುತ್ತಾರೆ. ನಂತರ ಗಡಿಗೆಯನ್ನು ವಾದ್ಯ ಸಮೇತವಾಗಿ ಪೂಜಾರಿಯು ತನ್ನ ಮನೆಗೆ ತೆಗೆದುಕೊಂಡು ಹೋಗುತ್ತಾನೆ.

ಮತ್ತೆ ಬೆಳಿಗ್ಗೆ ಸುಮಾರು ಮೂರು ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಪೂಜಾರಿಯ ಜೊತೆಗೆ ಎಲ್ಲರೂ ನದಿಗೆ ಹೋಗುತ್ತಾರೆ. ಅಲ್ಲಿ ಪೂಜಾರಿಗೆ ಮತ್ತೆ ಮೀಸೆ ಮತ್ತು ಗಡ್ಡವನ್ನು ಕ್ಷೌರಿಕರಿಂದ ತೆಗೆಯಿಸಲಾಗುತ್ತದೆ. ಎಲ್ಲರೂ ಸ್ನಾನ ಮುಗಿಸಿದ ನಂತರ ಗಂಗಮ್ಮ ಪೂಜೆಯನ್ನು ಮಾಡುತ್ತಾರೆ. ಪಾಯಸಕ್ಕೆ ಬೇಕಾಗುವ ಅಕ್ಕಿಯನ್ನು ನದಿಯಲ್ಲಿ ತೊಳೆದು ಆ ಸಮಯದಲ್ಲಿ ಎಲ್ಲರೂ ಮುಖಕ್ಕೆ ಕುಂಕುಮವನ್ನು ಹಚ್ಚಿಕೊಳ್ಳುತ್ತಾರೆ. ಅದೇ ವಾದ್ಯಗಳೊಂದಿಗೆ ವಾಪಾಸು ದೇವಸ್ಥಾನಕ್ಕೆ ಬರುವಾಗ ಆ ಗಡಿಗೆಯನ್ನು ತನ್ನ ಮನೆಯಿಂದ ಪೂಜಾರಿಯು ಹೊತ್ತುಕೊಂಡು ದೇವಸ್ಥಾನಕ್ಕೆ ಬರುತ್ತಾನೆ. ಇತ್ತಕಡೆ ದೇವಿಗೆ ಪ್ರಸಾದ ಕಟ್ಟುವ ಕಾರ್ಯ ಸುಮಾರು 4 ಗಂಟೆಗೆ ನಡೆದಿರುತ್ತದೆ. ಅಂದರೆ ದೇವಿಯ ಮುಡಿಗೆ ಏರಿಸಲಾದ ಹೂಗಳನ್ನು ಒಂಭತ್ತು ಬಾರಿ ದೇವಿಯು ಕರುಣಿಸುತ್ತಾಳೆ ಆ ಹೂವುಗಳನ್ನು ತೆಗೆದುಕೊಂಡು ಪವಾಡದ ಪೂಜಾರಿಯು ನೆರೆದ ಭಕ್ತರಿಗೆ ಹಂಚುತ್ತಾನೆ.

ಬೆಳಿಗ್ಗೆ ಐದು ಗಂಟೆಗೆ ದೇವಸ್ಥಾನದ ಮುಂದಿರುವ ಮೂರಾರು ಕಲ್ಲು ಗುಂಡುಗಳ ನಡುವೆ ಬೆಂಕಿಯನ್ನು ಮಾಡುತ್ತಾರೆ. ಆ ಮೂರಾರು ಗುಂಡುಗಳ ಮೇಲೆ ಬಟ್ಟೆಯಿಂದ ಸುತ್ತಿದ ಸಣ್ಣ ತುಂಡುಗಳನ್ನು ಎಣ್ಣೆಯಲ್ಲಿ ಅದ್ದಿ ಇಟ್ಟಿರುತ್ತಾರೆ. ಆ ಬಟ್ಟೆ ತುಂಡುಗಳ ಮೇಲೆ ಪಾಯಸದ ಗಡಿಗೆಯನ್ನು ಇಟ್ಟು ಪೂಜೆ ಸಲ್ಲಿಸುತ್ತಾರೆ. ಗಡಿಗೆಯಲ್ಲಿ ನೀರು ಮತ್ತು ಅಕ್ಕಿಯನ್ನು ಹಾಕಿ ಪಾಯಸ ತಯ್ಯಾರು ಮಾಡುತ್ತಾರೆ. ಮೇಲೆ ಹಿಂದೆ ತಿಳಿಸಿದಂತೆ ದೇವಿಯಿಂದ ಹೂವುಗಳ ಪ್ರಸಾದ ನಡೆಯುವ ಹೊತ್ತಿಗೆ ಈ ಕಡೆ ಪಾಯಸ ಸಿದ್ಧವಾಗಿರುತ್ತದೆ. ನಂತರ ಪವಾಡದ ಪೂಜಾರಿಯು ಗರ್ಭಗುಡಿಯಿಂದ ಹೊರಬಂದು ಬಿಸಿಬಿಸಿಯಾಗಿ ಕುದಿಯುತ್ತಿರುವ ಆ ಪಾಯಸದ ಗಡಿಗೆಯೊಳಗೆ ಕೆ ಎರಡೂ ಕೈ ಹಾಕಿ ಮೂರಾರ್ನಾಲ್ಕು ಬಾರಿ ತಿರುವುತ್ತಾನೆ. ಮತ್ತು ಬೊಗಸೆಯಿಂದ ಮೂರು ಬಾರಿ ಪಾಯಸವನ್ನು ಹೊರತೆಗೆದು ದೊಡ್ಡ ಪರಾತದಲ್ಲಿ ಹಾಕುತ್ತಾನೆ. ಆ ಬಿಸಿಯಾದ ಪ್ರಸಾದ ಪೂಜಾರಿಯ ಕೈಗೆ 'ಏನೂ ಅಘಾತ ಆಗುವುದಿಲ್ಲ. ಇದೆಲ್ಲಾ ಆ ದೇವಿಯ ಮಹಿಮೆ ಹಾಗೂ ಪವಾಡವೆಂದು ಜನರು ಭಾವಿಸಿಕೊಳ್ಳುತ್ತಾರೆ. ಈ ಘಟನೆಯನ್ನು ನೋಡಲು ಬೆಳಗಿನ ಸಮಯದಲ್ಲಿಯೇ ಸಾವಿರಾರು ಜನರು ಸೇರಿರುತ್ತಾರೆ. ಅಗ ಆ ಪ್ರಸಾದವನ್ನು ತೆಗೆದುಕೊಂಡು ಗರ್ಭಗುಡಿಯೊಳಗೆ ಬಂದು ದೇವಿಗೆ ನೈವೇದ್ಯ ಅರ್ಪಿಸುತ್ತಾರೆ.

ಆ ನೈವೇದ್ಯವನ್ನು ನೆರೆದಂತಹ ಭಕ್ತರಿಗೆಲ್ಲಾ ಹಂಚಲಾಗುತ್ತದೆ. ಅಲ್ಲದೆ ಆ ಪ್ರಸಾದವನ್ನು ಪೂಜಾರಿಯು ಮನೆಗೆ ತೆಗೆದುಕೊಂಡು ಹೋಗುತ್ತಾನೆ. ಸ್ವೀಕರಿಸಿದ ಪ್ರಸಾದವನ್ನು ಜನರು ತಮ್ಮ ದನ ಕರುಗಳಿಗೆ ತಿನ್ನಿಸುತ್ತಾರೆ. ಅಥವಾ ತಮ್ಮ ಹೊಲ-ಗದ್ದೆಗಳಿಗೆ ಹರಡುತ್ತಾರೆ. ಇದರಿಂದ ಭೂಮಿಯಲ್ಲಿ ಹುಲುಸಾದ ಬೆಳೆ ಬರುತ್ತದೆಂದು ನಂಬುತ್ತಾರೆ. ಅದೇರೀತಿ ಪ್ರಸಾದವನ್ನು ತಮ್ಮ ಮನೆಯ ಮುಂಬಾಗಿಲಿಗೆ ಬಟ್ಟೆಯಲ್ಲಿ ಕಟ್ಟುತ್ತಾರೆ. ಇದರಿಂದ ಯಾವ ಅನಿಷ್ಟ ಗಾಳಿ ಬರುವುದಿಲ್ಲವೆಂಬ ಭಾವನೆ ಅವರಲ್ಲಿ ಕಂಡುಬರುತ್ತದೆ. ಈ ಪ್ರಸಾದ ಕಾರ್ಯಕ್ರಮ ಮುಗಿದ ನಂತರ ದೇವಸ್ಥಾನದ ಮುಂದಿರುವ ಅಗ್ನಿಕೊಂಡದ ಪ್ರವೇಶ ನಡೆಯುತ್ತದೆ.

ಮೊದಲು ಪೂಜಾರಿಯು ಬೆಳಿಗ್ಗೆ ಸುಮಾರು 5.30 ಕ್ಕೆ ಈಗಾಗಲೇ ಬೆಂಕಿ ಕೆಂಡವಾಗಿರುವ ಅಗ್ನಿಯನ್ನು ಪ್ರವೇಶಮಾಡಿ ತುಳಿಯುತ್ತಾನೆ. ನಂತರ ಬೇಡಿಕೊಂಡಿದ್ದ ಭಕ್ತರು ಒಬ್ಬೊಬ್ಬರಾಗಿ ಆ ಅಗ್ನಿಯನ್ನು ತುಳಿಯುತ್ತಾರೆ. ಇಲ್ಲಿ ಪಾಯಸ ಮತ್ತು ಅಗ್ನಿಕೊಂಡದ ಪವಾಡಗಳ ಕಾರ್ಯಕ್ರಮಗಳು ಮುಗಿಯುತ್ತವೆ.

ಅಧ್ಯಾಯ — ಏಳು :

ಹುಲಿಗೆಮ್ಮ ಮತ್ತು ಹೊಸೂರಮ್ಮನ ಸಂಬಂಧ :

ಹೊಸೂರು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನಲ್ಲಿದೆ. ಹುಲಿಗಿಯು ರಾಯಚೂರುಜಿಲ್ಲೆ ಕೊಪ್ಪಳ ತಾಲೂಕಿನಲ್ಲಿದೆ. ಈ ಎರಡೂ ಕ್ಷೇತ್ರಗಳ ಮಧ್ಯ ತುಂಗಭದ್ರಾ ನದಿಯು ಸದಾ ಹರಿಯುತ್ತಿರುತ್ತದೆ. ಈ ಗ್ರಾಮಗಳನ್ನು ಆಯಾ ದೇವತೆಗಳ ಹೆಸರಿನಿಂದಲೇ ಕರೆಯುವ ರೂಢಿಯು ಬಹಳ ವರ್ಷಗಳಿಂದ ಇರುವುದು ಕಂಡುಬರುತ್ತದೆ.

ಹುಲಿಗೆಮ್ಮ ಮತ್ತು ಹೊಸೂರಮ್ಮರನ್ನು ಗಮನಿಸಿದಾಗ ಇವರಿಬ್ಬರಲ್ಲಿಯೂ ಇರುವ ಸ್ವಭಾವಗಳು ಒಂದೆಯಾಗಿವೆ. ದುಷ್ಟ ಶಿಕ್ಷಕ, ಶಿಷ್ಟ ರಕ್ಷಕ ಎಂಬ ಗುಣಗಳೆರಡೂ ಎದ್ದು ಕಾಣುತ್ತವೆ. ನಂಬಿದವರಿಗೆ ಸದಾ ರಕ್ಷಣೆಗೈಯುವ ಹೊಣೆ ಈ ದೇವತೆಗಳಿಗಿದೆ. ಹಾಗೆಯೇ ದುಷ್ಟತನದಿಂದ ನಡೆದುಕೊಳ್ಳುವವರಿಗೆ ಶಿಕ್ಷಿಸುವ ಶಕ್ತಿಯೂ ಇವರಿಗಿದೆ. ಸಂದರ್ಭದಲ್ಲಿ ಹೇಳುವುದಾದರೆ ಜನರು ನಂಬಿರುವಂತೆ ಇವರಿಬ್ಬರೂ ಮಕ್ಕಳನ್ನು ಸಲಹುವ ತಾಯಿಗಳಿದ್ದಂತೆ. ತಪ್ಪು ದಾರಿಯಲ್ಲಿರುವವರಿಗೆ ಶಿಕ್ಷಿಸಿ ಬುದ್ಧಿ ಕಲಿಸುವ ಗುರುವಿದ್ದಂತೆ. ಈ ದೇವತೆಗಳನ್ನು 'ಅಮ್ಮ' ಎಂದು ಜನರು ಸಂಬೋಧಿಸಿ ಕರೆಯುತ್ತಾರೆ. ಹುಲಿಗೆಮ್ಮ ನಿನ್ನಾಲ್ಕುದೋ...ಉಧೋ... ಎಂದಂತೆ ಹೊಸೂರಮ್ಮ ನಿನ್ನಾಲ್ಕುವೋ,,, ಉದೋ,,, ಎಂಬ ಘೋಷಣೆ ಇಲ್ಲಿಯೂ ಕೇಳಿಬರುತ್ತದೆ.

ಈ ಎರಡೂ ದೇವತೆಗಳಿಗೂ ಅನ್ವಯಿಸುವ ಜನಪದ ಕಥೆಯೊಂದು ಹೀಗಿದೆ. ಜಮದಗ್ನಿಯು ಪೂಜೆಯಲ್ಲಿದ್ದಾಗ ನೀರು ತರಲು ನದಿಗೆ ಹೋದ ರೇಣುಕೆ ಅಲ್ಲಿ ಚಿತ್ರರಥನೆಂಬ ಗಂಧರ್ವನನ್ನು ನೋಡಿ ಚಂಚಲಗೊಳ್ಳುತ್ತಾಳೆ. ಇದರಿಂದ ಅವಳಿಗೆ ಉಸುಗಿನಿಂದ ಕೊಡ ಮಾಡಲು, ಹಾಗೂ ಹಾವನ್ನು ಸಿಂಬೆಯನ್ನಾಗಿಸುತ್ತಿ, ಕೊಳ್ಳಲೂ ಸಹ ಬರುವುದಿಲ್ಲ. ಹಾಗೆಯೇ ಬಂದ ರೇಣುಕೆಗೆ ಜಮದಗ್ನಿ ಶಾಪ ಕೊಟ್ಟು ತನ್ನ ಮಗ ಪರಶುರಾಮನಿಂದ ಆಕೆಯ ಶಿರವನ್ನು ಕಡಿಸುತ್ತಾನೆ.

ಅನೇಕ ತುಂಡುಗಳಾಗಿ ಬದ್ದಂತಹ ಆ ಶಿರವು ಅನೇಕ ಕಡೆಗಳಲ್ಲಿ ಗ್ರಾಮದೇವತೆಗಳಾದವು. ಹೀಗೆ ಪ್ರಚಲಿತವಿರುವ ಕಥೆಯನ್ನು ಸವದತ್ತಿ ಎಲ್ಲಮ್ಮನಿಗೂ ಹಾಗೂ ಈ ಎರಡೂ ದೇವತೆಗಳಿಗೂ ಒಂದೇ ಸಂಬಂಧ ಕಲ್ಪಿಸಿ ಇಲ್ಲಿನ ಜನಪದರು ಹೇಳುತ್ತಾರೆ. ಈ ಎರಡೂ ದೇವತೆಗಳು ಬಹುಶಃ ವಿಜಯನಗರದ ಕಾಲದಲ್ಲಿ ಉದ್ಭವವಾಗಿವೆ. ಹುಲಿಗಿಯು ಸುಮಾರು 13 ನೇ ಶತಮಾನದಲ್ಲಿತ್ತೆಂಬುದಕ್ಕೆ ಅಲ್ಲಿ ಸಿಕ್ಕಿರುವ ಶಾಸನದಿಂದ ತಿಳಿದುಬರುತ್ತದೆ. ಹೊಸೂರಮ್ಮ 14 ನೇ ಶತಮಾನದಲ್ಲಿ ಬೆಳಕಿಗೆ ಬಂದಿರುವ ವಿಷಯ ಅಲ್ಲಿಯೇ ಕಂಡುಬರುವ ದಾನ ದತ್ತಿಗಳಿಗೆ ಸಂಬಂಧಿಸಿದ ಶಾಸನಗಳಲ್ಲಿ ತಿಳಿದುಬರುತ್ತದೆ. ಈ ಎರಡೂ ದೇವತೆಗಳು ಅಂದಿನಿಂದ ಇಂದಿನ ವರೆಗೂ ಗ್ರಾಮದೇವತೆಗಳಾಗಿ, ಕೆಲವು ಜನರ ಕುಲದೇವತೆಗಳಾಗಿ ತಮ್ಮ ಮಹಿಮೆಯನ್ನು ಹೆಚ್ಚಿಸಿಕೊಂಡಿವೆ. ಎರಡೂ ದೇವತೆಗಳಿಗೆ ಬೇಡಿಕೊಳ್ಳುವ ಭಕ್ತರ ಹರಕೆಗಳು, ನಂಬಿಕೆಗಳು, ಆಂತರಿಕ ಆಚರಣೆಗಳು, ಆರಾಧನೆಯ ಸಂಬಂಧಗಳೂ , ಇಂದಿಗೂ ಒಂದೇ ಯಾಗಿ ಕಂಡುಬರುತ್ತದೆ.

ಹೊಸೂರಮ್ಮ ದೇವಸ್ಥಾನವು ಗರ್ಭಗೃಹ ಸುಖನಾಸಿ, ಮುಖಮಂಟಪ, ಹಾಗೂ ನವರಂಗದಲ್ಲಿ ಅನೇಕ ಕಂಬಗಳನ್ನೊಳಗೊಂಡಿದೆ. ಮುಖ ಮಂಟಪದಲ್ಲಿ ನಾಲ್ಕು ಕಂಬಗಳು, ಸುತ್ತಲೂ ಉಪದೇವತೆಗಳು, ಹಾಗೂ ಗುಡಿಯ ಸುತ್ತಲೂ ದೊಡ್ಡದಾದ ಪಾಳಿಯು ಇದೆ. ಹುಲಿಗೆಮ್ಮ ದೇವಸ್ಥಾನದಲ್ಲಿ ಗರ್ಭಗೃಹ, ಸುಖನಾಸಿ ಮುಖಮಂಟಪವಷ್ಟೇ ಇದ್ದು ನವರಂಗವಿಲ್ಲ. ಗರುಡಗಂಭ ಮಾತ್ರ ಎತ್ತರವಾಗಿದೆ. ಇಲ್ಲಿಯೂ ಉಪದೇವತೆಗಳಿವೆ ಅಲ್ಲದೆ ಸುತ್ತಲೂ ಪಾಳಿ ಕಟ್ಟಲಾಗಿದೆ. ಎರಡೂ ದೇವತೆಗಳ ಮೂಲ ಮೂರ್ತಿ ಒಂದು ದುಂಡಾದ ಕಲ್ಲಿನ ಶಿಲೆಯಂತೆ ಕಂಡುಬರುತ್ತದೆ. ಎರಡೂ ಕಣ್ಣುಗಳಲ್ಲಿ ಸಾಲಿಗ್ರಾಮಗಳಿವೆ, ಮುಖವನ್ನು ಅಲಂಕಾರಗೊಳಿಸಿದಾಗ ಮೀಸೆ, ಬಾಯಿ, ಕಿರೀಟ ಇತ್ಯಾದಿಗಳನ್ನು ಇಂದಿಗೂ ಅಲ್ಲಿಯ ಪೂಜಾರಿಗಳು ಕಾಪಾಡಿಕೊಂಡು ಬರುತ್ತಿದ್ದಾರೆ. ಬೆಳಗಿನ ಸಮಯದಲ್ಲಿ ಅಂದರೆ ಪೂಜಾ ಸಂದರ್ಭದಲ್ಲಿ ಗರ್ಭಗುಡಿಯ ಬಾಗಿಲನ್ನು ಮುಚ್ಚುವ ರೂಢಿ ಇದೆ. ಪ್ರತಿ ಮಂಗಳವಾರ ಶುಕ್ರವಾರ ಹಾಗೂ ಅಮಾವಾಸ್ಯೆ, ಹುಣ್ಣಿಮೆಗಳ ಸಂದರ್ಭದಲ್ಲಿ ಹುಲಿಗಿಯಲ್ಲಿ ಪಲ್ಲಕ್ಕಿ ಸೇವೆ, ತೊಟ್ಟಿಲು ಸೇವೆ, ಅಲ್ಲದೇ ವಿಶೇಷ ಅಭಿಷೇಕದ ಪೂಜೆಗಳು ನಡೆಯುತ್ತವೆ.

ಈ ದಿನಗಳಲ್ಲಿ ಸುತ್ತಮುತ್ತಲಿನ ಅನೇಕ ಊರುಗಳಿಂದ ಜನರು ಬರುತ್ತಾರೆ. ಆದರೆ ಹೊಸೂರಿನಲ್ಲಿ ಮೇಲೆ ತಿಳಿಸಿದ ದಿನಗಳಲ್ಲಿ ವಿಶೇಷ ಪೂಜಾ ಅಭಿಷೇಕಾದಿಗಳು ನಡೆಯುತ್ತವೆ. ಈ ಹಿಂದೆ ಪಲ್ಲಕ್ಕಿ ಸೇವೆ, ತೊಟ್ಟಿಲು ಸೇವೆಗಳು ನಡೆಯುತ್ತಿದ್ದುವೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಆದರೆ ಇತ್ತೀಚೆಗೆ ಇದನ್ನು ನಿಲ್ಲಿಸಲಾಗಿದೆ. ಬಹಳ ಮುಖ್ಯವಾದ ಹಬ್ಬ ಹರಿದಿನಗಳಲ್ಲಿ ಇಲ್ಲಿಯೂ ಪಲ್ಲಕ್ಕಿ ಸೇವೆ ನಡೆಯುತ್ತದೆಂದು ಸ್ಥಳೀಯರು ಹೇಳುತ್ತಾರೆ.

ಇನ್ನು ಹುಲಿಗೆಮ್ಮನ ಜಾತ್ರೆ ವೈಶಾಖ ಬಹುಳ ಪ್ರತಿಪದೆಯಿಂದ ಏಕಾದಶಿಯವರೆಗೆ ಒಟ್ಟು 8–10 ದಿನಗಳ ಕಾಲ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಲಕ್ಷಾಂತರ ಜನರು ಆಗ ಸೇರಿರುತ್ತಾರೆ. ಜಾತ್ರೆಯಲ್ಲಿ ಗಂಗಾಮುತಸ್ಥಳದಿಂದ ಬಾಳೆದಿಂಡಿಗೆ, ಪಾಯಸ, ಅಗ್ನಿಕೊಂಡದ ಪವಾಡಗಳು ನಡೆಯುತ್ತವೆ. ಹಾಗೆಯೇ ಹೊಸೂರಮ್ಮನ ಜಾತ್ರೆಯು ಜ್ಯೇಷ್ಠಶುದ್ಧ ಪ್ರತಿಪದೆಯಿಂದ ಹುಣ್ಣಿಮೆಯವರೆಗೆ 8–10 ದಿನಗಳೂ ನಡೆಯುತ್ತದೆ. ಇಲ್ಲಿ ಲಿಂಗಾಯುತ ಪೂಜಾರಿಯಿಂದ ಮೇಲೆ ಹೇಳಲಾದ ಪವಾಡಗಳು ಜರುಗುತ್ತವೆ. ಸಾವಿರಾರು ಜನರು ಈ ಜಾತ್ರೆಯಲ್ಲಿ ಕಂಡುಬರುತ್ತಾರೆ. ಎರಡೂ ದೇವತೆಗಳು ದೇವಾಲಯದಲ್ಲಿ ಹೆಚ್ಚಾಗಿ ಮಡಿಯನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಈ ದೇವತೆಗಳ ಅರ್ಚಕರು ಎರಡೂ ಹೊತ್ತು ಸ್ನಾನಾದಿಗಳನ್ನು ಮಾಡುವುದು, ಜಾತ್ರೆಯಲ್ಲಿ ಮದ್ಯ, ಮಾಂಸ ಹಾಗೂ ಲೈಂಗಿಕ ಚಟುವಟಿಕೆಗಳು ನಿಷೇಧಿಸಿರುವುದು ಕಂಡುಬರುತ್ತದೆ. ಮೈಲಿಗೆಯಾದವರು ಅಂದರೆ ಋತುಮತಿಯಾದವರು, ಮುಟ್ಟಾದವರು, ಸಾವಿನ ಮೈಲಿಗೆಯುಳ್ಳವರು ಈ ಗುಡಿಯೊಳಗೆ ಬರಬಾರದೆಂಬ ನಿಯಮವಿದೆ. ಒಂದುವೇಳೆ ಬಂದರೆ ಅವರಿಗೆ ಕಾಯಿಲೆ, ಅಪಘಾತ ಆಗಬಹುದೆಂಬ ನಂಬಿಕೆ ಜನರಲ್ಲಿ ಇದೆ.

ಭೌಗೋಳಿಕವಾಗಿ ಈ ಕ್ಷೇತ್ರಗಳನ್ನು ತುಲನೆ ಮಾಡಿದಾಗ ಸ್ವಲ್ಪ ಭಿನ್ನವಾಗಿ ಕಂಡುಬರುತ್ತವೆ. ಹೊಸೂರಿನಲ್ಲಿರುವ ನಿಸರ್ಗ ಸೌಂದರ್ಯ ಹಾಗೂ ಶಾಂತಿಯ ವಾತಾವರಣ ಹುಲಿಗಿಯಲ್ಲಿ ಕಾಣಬರುವುದಿಲ್ಲ. ಹಾಗೆಯೇ ಹುಲಿಗಿಯೂ ಸದಾ ದಟ್ಟವಾದ ಜನಸಂದಣಿ, ವ್ಯಾಪಾರ ವಹಿವಾಟು, ಶಿಕ್ಷಣ, ಸಿನೇಮಾ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳು ಮುಂತಾದವುಗಳೆಲ್ಲಾ ಹೊಂದಿದೆ. ಆದರೆ ಇವು ಹೊಸೂರಿನಲ್ಲಿ ಬಹಳ ಕಡಿಮೆ ಎಂದೇ ಹೇಳಬಹುದು. ಹುಲಿಗಿಯಲ್ಲಿ ಭಕ್ತರ ಸಂಖ್ಯೆ ಹೆಚ್ಚು, ಇಲ್ಲಿ ಕಡಿಮೆ. ಅಲ್ಲಿ ಜೋಗಪ್ಪ – ಜೋಗಮ್ಮಂದಿರುಗಳು ಹೆಚ್ಚು, ಇಲ್ಲಿ ಕೆಲವೇ

ಜೋಗಮ್ಮರಿದ್ದಾರೆ. ಭಕ್ತರ ಸಂಖ್ಯೆ ಹೆಚ್ಚಾಗಿ ಕಂಡುಬರಲು ಒಂದೆರಡು ಕಾರಣಗಳು ಹೀಗಿವೆ. ಹುಲಿಗಿ ಕ್ಷೇತ್ರವು ರಾಷ್ಟ್ರೀಯ ಹೆದ್ದಾರಿ 13ರಲ್ಲಿ ಬರುವುದರಿಂದ, ವಾಹನಗಳ ಸೌಲಭ್ಯ ಅನುಕೂಲವಾಗಿರುವುದರಿಂದ, ಜನರಿಗೆ ಬಹಳ ಅನುಕೂಲವಿದೆ. ಹೊಸೂರು ಒಂದು ಮೂಲೆಯಲ್ಲಿದೆ, ಇಲ್ಲಿ ಬರೀ ಕೃಷಿ ಆಧಾರಿತ ಜನರಿದ್ದಾರೆ. ಇತ್ತೀಚೆಗೆ ಸುಮಾರು 25 –30 ವರುಷಗಳಿಂದ ಮಾತ್ರ ಗ್ರಾಮವಾಗಿ ಬೆಳೆಯುತ್ತಾ ಬಂದಿದೆ. ಆದರೆ ಹುಲಿಗಿಯು ಬಹಳ ವರ್ಷಗಳಿಂದ ಹಿಂದೆಯೇ ಗ್ರಾಮವಾಗಿ ಪರಿವರ್ತನೆಯಾಗಿದೆ.

ಐತಿಹ್ಯದ ವಿಷಯದ ಹಿನ್ನೆಲೆಯಲ್ಲಿ ನೋಡಿದಾಗ ಒಮ್ಮೆ ಟಿಪ್ಪು ಹುಲಿಗೆಮ್ಮನನ್ನು ಅವಮಾನಿಸಿದನಂತೆ ಆಗ ಕೋಪಗೊಂಡ ಹುಲಿಗೆಮ್ಮ ಆತನಿಗೆ ಶಕ್ತಿಗುಂದುವಂತೆ ಮಾಡಿದಾಗ ಟಿಪ್ಪುವು ಆಕೆಯನ್ನು ಭಕ್ತಿಯಿಂದ ಬೇಡಿಕೊಂಡು ಚಿನ್ನಾಭರಣಗಳನ್ನು ಹರಕೆಯಾಗಿ ಒಪ್ಪಿಸಿದನಂತೆ. ಆಗ ದೇವಿಯು ಸುಪ್ರೀತಳಾಗಿ ಆತನಿಗೆ ಶಕ್ತಿ–ಧೈರ್ಯ ತುಂಬಿದಳಂತೆ. ಹಾಗೆಯೇ ಹೊಸೂರಿಗೆ ಒಮ್ಮೆ ವ್ಯಾಸ ಮುನಿಗಳು ಬಂದಾಗ ಜನರು ಸ್ವಾಗತಿಸಿ ಗುಡಿಯೊಳಗೆ ಪ್ರಾರ್ಥನೆ ಮತ್ತು ಕೀರ್ತನೆಗಳನ್ನು ನಡೆಸಿಕೊಡಬೇಕೆಂದು ಕೇಳಿದರಂತೆ. ವ್ಯಾಸ ಮುನಿಗಳು ಇದಕ್ಕೆ ನಿರಾಕರಿಸಿದಾಗ ಅವರಿಗೆ ದೇವಿಯು ಕಣ್ಣು ಕಳೆದಳಂತೆ. ತಮ್ಮ ದಿವ್ಯದೃಷ್ಟಿಯಿಂದ ಎಲ್ಲವನ್ನೂ ತಿಳಿದುಕೊಂಡು ದೇವಿಯಲ್ಲಿ ಪ್ರಾರ್ಥಿಸಿ ಜನರ ಇಚ್ಛೆಯಂತೆ ಗುಡಿಯಲ್ಲಿ ಕೀರ್ತನೆ ನಡೆಸಿಕೊಟ್ಟರಂತೆ ಅಲ್ಲದೆ ತಮ್ಮಲ್ಲಿದ್ದ ಎರಡು ಸಾಲಿಗ್ರಾಮಗಳನ್ನು ಹೊಸೂರಮ್ಮನಿಗೆ ಕೊಟ್ಟರಂತೆ ಇದರಿಂದ ಪ್ರಸನ್ನಳಾದ ಹೊಸೂರಮ್ಮ ಅವರಿಗೆ ಮತ್ತೆ ಕಣ್ಣು ಕಾಣುವಂತೆ ಆಶೀರ್ವಸಿದಳೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ.

ಒಟ್ಟಾರೆ ಹೇಳುವುದಾದರೆ ಹೊಸೂರಮ್ಮ ಮತ್ತು ಹುಲಿಗೆಮ್ಮ ಈ ದೇವತೆಗಳಿಬ್ಬರೂ ಒಂದೇ ದೇವತೆಗಳಾಗಿದ್ದಾರೆ. ಈ ಭಾಗದ ಜನರಾಗಲಿ ಅಥವಾ ಆ ಭಾಗದ ಜನರಾಗಲಿ ತಮ್ಮ ತಮ್ಮ ಅನುಕೂಲಕ್ಕಾಗಿ ಎರಡು ದೇವತೆಗಳನ್ನು ಸೃಷ್ಟಿಸಿಕೊಂಡಿರಬಹುದೆಂದು ಕಂಡುಬರುತ್ತದೆ. ಎರಡೂ ದೇವತೆಗಳಿಗೆ ಬೇರೆ ಭಕ್ತರು ಇದ್ದಂತೆ ಎರಡೂ ಒಂದೇ ದೇವತೆಗಳೆಂದು ನಂಬಿಕೊಂಡಿರುವವರೂ ಸಹ ಕಂಡುಬರುತ್ತಾರೆ.

ಅಧ್ಯಾಯ — ಎಂಟು : ಸಮಾರೋಪ

ಜನಪದರ ದೇವತೆಗಳಲ್ಲಿ ಗ್ರಾಮ ದೇವತೆಗಳು ಕುಲದೇವತೆಗಳು, ಬುಡಕಟ್ಟಿನ ದೇವತೆಗಳು, ಪುರಾಣಕಾಲೀನ ದೇವತೆಗಳು ಹಾಗೂ ಇತರ ದೇವತೆಗಳು ಸೇರಿರುತ್ತವೆ. ಈ ಜನಪದರ ದೇವತೆಗಳು ಮತ್ತು ಶಿಷ್ಟ ದೇವತೆಗಳಲ್ಲಿ ಕೆಲವು ವಿಷಯಗಳಲ್ಲಿ ಸಾಮ್ಯವಿರುವಂತೆ ಅನೇಕ ಆಚಾರ ವಿಚಾರಗಳಲ್ಲಿ ಭಿನ್ನತೆ ಇರುವುದನ್ನು ಕಾಣಬಹುದಾಗಿದೆ. ದ್ರಾವಿಡ ಸಂಸ್ಕೃತಿಯ ಮೂಲದಿಂದ ಬಂದ ದೇವತೆಗಳನ್ನು ಜನಪದ ದೇವತೆಗಳೆಂದು ಆರ್ಯ ಸಂಸ್ಕೃತಿಯ ಮೂಲದಿಂದ ಬಂದ ದೇವತೆಗಳನ್ನು ಶಿಷ್ಟ ದೇವತೆಗಳೆಂದು ವರ್ಗೀಕರಿಸಬಹುದಾಗಿದೆ. ಎರಡೂ ಸಂಸ್ಕೃತಿಯಲ್ಲಿರುವ ನಿಯಮಾಚರಣೆಗಳನ್ನು ಆಯಾ ದೇವತೆಗಳ ಪೂಜಾ ವಿಧಾನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಕಾಣಬಹುದಾಗಿದೆ.

ಗ್ರಾಮ ದೇವತೆಗಳಿಗೆ ಬೆತ್ತಲೆ ಸೇವೆ, ಬೇವಿನುಡಿಗೆ ಸೇವೆ, ಬಸವಿ ಬಿಡುವ ಪದ್ಧತಿ, ಸಿಡಿಯಾಡುವ ಪದ್ಧತಿ, ಕೆಂಡ ಹಾಯುವ ಪದ್ಧತಿ, ಕೆಲವು ಕಡೆ ಒಂದೊಂದು ಕಂಡುಬರುತ್ತವೆ. ಗ್ರಾಮದ ಸ್ತ್ರೀ ದೇವತೆಗಳು ಕೋರೆಹಲ್ಲು, ಮೀಸೆಗಳನ್ನು ಹೊಂದಿ ಭಯಂಕರವಾಗಿ ಕಾಣುತ್ತವೆ. ಕ್ವಾರೇಮೀಸೆ ಧರಿಸಿರುವುದು ಪೌರುಷದ ಸಂಕೇತವಾಗಿರಬಹುದು.

ಈ ಹೊಸೂರಿನ ದೇವತೆಯೂ ದ್ರಾವಿಡ ಜನಾಂಗದ ಜನಪದರ ದೇವತೆಯಾಗಿರುವಳು. ಈ ದೇವತೆಗೆ ಅನೇಕ ಜಾತಿಯ ಭಕ್ತರಿದ್ದಾರೆ. ಈಕೆಯನ್ನು ನಿಷ್ಕಲ್ಮಷ ಭಕ್ತಿಯಿಂದ ಪೂಜಿಸಿದರೆ ಆರೋಗ್ಯ ಸಂಪತ್ತು ಕರುಣಿಸಬಲ್ಲಳೆಂಬ ನಂಬಿಕೆ ಜನರಲ್ಲಿದೆ. ಹೊಸೂರಮ್ಮನ ಅನೇಕ ಆಶೀರ್ವಾದಗಳಲ್ಲಿ ರೋಗ ನಿವಾರಣೆಯೂ ಒಂದಾಗಿದೆ. ಭಕ್ತರು ತಮ್ಮ ಕಷ್ಟ ಕಾರ್ಪಣ್ಯಗಳನ್ನು ದೇವಿಯಲ್ಲಿ ಬೇಡಿಕೊಂಡಾಗ ಅನೇ ರೀತಿಯಲ್ಲಿ ಹರಕೆಯನ್ನು ಒಪ್ಪಿಸಲು ಸಿದ್ಧರಾಗಿರುತ್ತಾರೆ. ಮಾತೃ ಸ್ವರೂಪಳಾದ ಈ ದೇವತೆಯನ್ನು ಪ್ರಾರ್ಥಿಸಿ ಹರಕೆ ಒಪ್ಪಿಸುತ್ತಾರೆ. ಒಟ್ಟಾರೆ ಸಮಾಜ ಸಂರಚನೆಯಲ್ಲಿ ಮಾತೃ ದೇವತೆಗಳೇ ಹೆಚ್ಚಾಗಿ ಕಂಡುಬರುತ್ತಿವೆ. ಆದರೆ ಮಾತೃ ದೇವತೆಗಳಿಗೆ ಉಗ್ರ ಸ್ವರೂಪವನ್ನೂ ಸಹ ಈ ಮಾನವ ಕಲ್ಪಿಸಿಕೊಂಡಿದ್ದಾನೆ. ಭಾರತೀಯ ಸಮಾಜದಲ್ಲಿ ತಾಯಿ ಮಗುವಿನ ಸಂಬಂಧವೇ ಇಂತಹ ದೇವತೆಗಳಲ್ಲಿ

ಕಾಣಬರುತ್ತದೆ. ಉದಾಹರಣೆಗೆ ಎಲ್ಲಮ್ಮ, ಚೌಡಮ್ಮ, ದುರ್ಗಮ್ಮ, ಕಾಳಮ್ಮ ಮಾರಮ್ಮ, ಹೀಗೆ ಎಲ್ಲಾ ದೈವಗಳನ್ನು 'ಅಮ್ಮ' ನೆಂದು ಸಂಬೋಧಿಸುವ ರೂಢಿ ಬಹಳ ವರ್ಷಗಳ ಹಿಂದೆಯೇ ಕಂಡುಬರುತ್ತದೆ. ಇಲ್ಲಿ ಮಗು ತನ್ನ ತಾಯಿಯನ್ನು ಆಶ್ರಯಿಸಿದಂತೆ ಮಾನವನೂ ಸಹ ಆ ದೇವತೆಯಾದ 'ಅಮ್ಮ' ನ ಮಡಿಲಿನಲ್ಲಿ ನೆಮ್ಮದಿಯನ್ನು ಪಡೆಯಲು ಪ್ರಯತ್ನಿಸುವನು.

ಎಲ್ಲಾ ಪುಣ್ಯ ಕ್ಷೇತ್ರಗಳಿಗಿರುವಂತೆ ಈ ಹೊಸೂರಮ್ಮ ಕ್ಷೇತ್ರಕ್ಕೂ ಒಂದು ಸ್ಥಳ ಪುರಾಣವಿದೆ. ಹಾಗೆಯೇ ಈ ದೇವತೆಯ ಇತಿಹಾಸ, ಆಚರಣೆ, ಪೂಜಾ ವಿಧಾನ ಇತ್ಯಾದಿಗಳನ್ನೆಲ್ಲಾ ಈ ಪ್ರಬಂಧದಲ್ಲಿ ವಿವರಿಸಲಾಗಿದೆ.

ಅಧ್ಯಾಯ – ಒಂಭತ್ತು : ಅನುಬಂಧ

9.1 ದಾನಪತ್ರ
9.2 ಶಾಸನ
9.3 ವಿಶೇಷ ಸೇವಾ ಕಾರ್ಯಗಳು
9.4 ಹಾಡುಗಳು
9.5 ಭಾವ ಚಿತ್ರಗಳು
9.6 ರೇಖಾ ನಕ್ಷೆ
9.7 ವಕ್ತೃಗಳ ಪರಿಚಯ
9.8 ಗ್ರಂಥಸೂಚಿ

ಜಿಲ್ಲಾ ಮುನ್ಸೀಫರವರು ದಿ. 31.01.1882ರಲ್ಲಿ ಸಂಗ್ರಸಿದ ಹೊಸೂರಿಗೆ ಸಂಬಂಧಿಸಿದ ದಾನಪತ್ರವನ್ನು ಹರಪನಹಳ್ಳಿಯ ಶ್ರೀ ಸಿ. ಗೋವಿಂದಾಚಾರ ಅವರು ದಿ. 1.03.1953 ರಲ್ಲಿ ಅನಂತರ ಹಗರಿಬೊಮ್ಮನಹಳ್ಳಿಯ ಶ್ರೀಮತಿ ಎಸ್. ಸಕ್ಕೂಬಾಯಿಯವರು ದಿ. 11.12 1992ರಲ್ಲಿ ಈ ರೀತಿ ಸಂಗ್ರಹಿಸಿದ್ದಾರೆ.

<u>ದಾನಪತ್ರ</u> :

ಶುಭಮಸ್ತು, ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ. ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲವಾಹನ ಶಕ ವರುಷಗಳು 1637 (ಸಾವಿರದ ಅರುನೂರ ಮೂವತ್ತೇಳನೆಯ) ಕ್ರಿ.ಶ. 1715) ಮನ್ಮಥನಾಮ ಸಂವತ್ಸರದ ಆಶ್ವೀಜ ಬಹುಳ ಶ್ರೀ ಮನ್ಮಹಾನಾಯಕಾ. ಆಚಾರ್ಯ, ಭಾಷೆಗೆ ತಪ್ಪುವ ನಾಯಕರ ಗಂಡ ಮೋರೆಹೊಕ್ಕರೆ ಕಾಯ್ವ ಮೋರಾಂತರ ಗೆಲ್ವ ಬಾಗಳಿ ಬಸಪ್ಪನಾಯಕ ಅಯ್ಯವವರು ನಮ್ಮ ಪುರೋಹಿತರಾದ ವಿಶ್ವನಾಥಭಟ, ಹಿರೇವೊಬಲಳ ಭಟ, ಚಿಕ್ಕ ಓಬಳಭಟ, ಸಿಂಹಾದ್ರಿಭಟ್ಟರ ಪುತ್ರರಿಗೆ ಬರೆದುಕೊಟ್ಟ ಭೂದಾನದ ಪಟ್ಟೀದ ಕ್ರಮವೆಂತೆಂದರೆ, ಆದಾಗಿ ನಮ್ಮಗೆ ಪಟ್ಟಾಭೀಷೇಕವಾದ ಸಮಯದಲ್ಲಿ ನಿಮಗೆ ದಾನಪೂರಕವಾಗಿ ನಮ್ಮ ಹೊಸೂರು ಪಟ್ಟಡಿಯೊಳಗಣ ಚಿತ್ರವಾಡಿಗೆ ಗ್ರಾಮದಲ್ಲಿ ಆ 2 ಯುಶ್ಕಳ ಬೀಜವರಿಗದ್ದೆನು ಸಿವಾರ್ಪಿತವಾಗಿ ಕೊಟ್ಟಿದ್ದೇವೆ. ಅಲ್ಲಿಯೊಳನುಂಟಾದ ಜಲತಿರು ಪಾಷಾಣ..........

<u>ಶಾಸನ</u> :

ನಮಸ್ತುಂಗ ಶಿರ
ಶ್ಚುಂಬ ಚಂದ್ರ ಚಾಮರ
ತ್ರೈಲೋಕ್ಯ ನಗರಾರಂಭ ಮೂ
ಲಸ್ತಂಭಾಯ ಶಂಭವೆ ಸ್ವಸ್ತಿಶ್ರೀ ಜ
ಯಾಭ್ಯುದಯ ಶಾಲವಾಹನ ಶಕ ವ
ರುಷ 1435 ನೆಯ ಶ್ರೀ ಮುಖ ಸಂ
ವತ್ಸರ ತಿಥಿಯ ಭಾದ್ರಪದ ಶು. 15
ಮಂಗಳವಾರದಲೂ(ಶ್ರೀ ಹೊಸೂರು) ಶ್ರೀ ಹೊಸ ಊರ

ಎಕ್ಕನಾಥೆಗೆ ಶ್ರೀ ವೀರಕೃಷ್ಣರಾಯರಿಗೆ ಧ
ರ್ಮ ವಾಗಬೇಕೆಂದು ಗಾರೆ ದಣಾಯಕ
ರ ಮಕ್ಕಳು ಬಳವಪ್ಪನವರು ಪ ಉಪಾದೆ
ದಾನ ಸೋಮೇವರರ ಸಹ ಕೂಡಿ ಕೂಡಿದ

ಶ್ರೀ ಹೊಸೂರಮ್ಮ ದೇವಿಯ ಸನ್ನಿಧಿಯಲ್ಲಿ ನಡೆಯುವ ಸೇವಾ ವಿವರಗಳು :

ಸೇವಾದಿಗಳ ಹೆಸರು	ಸೇವಾಧರ
ಪಂಚಾಮೃತ ಅಭಿಷೇಕ	15·00
ಕುಂಕುಮಾರ್ಚನೆ	10·00
ಸಹಸ್ರವಾಮ ಅರ್ಚನೆ	15·00
ಮಹಾಪೂಜೆ	50·00
ಕರ್ಪೂರ ಮಂಗಳಾರತಿ	1·00
ತೆಂಗಿನಕಾಯಿ 1ಕ್ಕೆ	00·50
ಎಲೆಪೂಜೆ	15·00
ಶಾಶ್ವತಾ ಪೂಜೆ	
ಪ್ರತಿವರ್ಷದಲ್ಲಿ 1 ದಿನ	300·00
ಜವಳ	25·00

ಹೊಸೂರಮ್ಮ ದೇವತೆಗೆ ಸಂಬಂಧಿಸಿದ ಹಾಡುಗಳು :

1) ಅಂಬಾಪಾಲಿಸೆ
ಜಗದಂಬಾ ಜನನಿ ದೇವಿ ಪಾಲಿಸೆ

ಸುತ್ತ ಮುತ್ತ ತೋಟ
ನಡುವೆ ನಿನ್ನ ಪೀಠ
ಮಾಡಿದೆ ಪಲ್ಲಟ
ತೋರೆ ನಿನ್ನ ಆಟ

ಸಾಲು ನಂದಾ ದೀಪ
ಮೇಲೆ ನಿನ್ನ ಪ್ರತಾಪ
ಮಾಡಿದೆ ನೀ ಪ್ರತಾಪ
ಬಿಡಿಸೆನ್ನ ತಾಪ

ಶಿರದ ಮ್ಯಾಗಿನ ದಂಡೆ
ತಗದು ಕೊಡುವುದೂ ಕಂಡೆ
ದಂಡಿಗೆ ಪಾಂತುಸ
ಕಂಡು ಧನ್ಯಳಾದೆ

ತುಂಗಭದ್ರಾ ತೀರ
ಮೇಲೆ ರಾಮೇಶ್ವರ
ಹೊಸೂರಮ್ಮೂರ
ಹೊಸೂರಮ್ಮ ದೇವರ

2) ಮಂಗಳಾರತಿ
ಬೆಳಗುವೆ ದೇವಿ ಮಂಗಳಾರತಿ

ಶುಂಬಾನಿಶುಂಬಾ ದೈತ್ಯರನ್ನೆಲ್ಲಾ ಕಾದಾಡಿ
ಶುಂಬಾ ದೇವತೆಗಳನು
ಅಂಬಾನೆಲ್ಲ ಬೇಡಿ

ರಕ್ತಬಿಜಾ ಮಹಿಶಾಸುರ
ಬಿಡಲೆನೆ ಕೊಂದಿ
ರಕ್ತದಿ ಕಾಲುವೆ ಹರೀಸಿದಂತೆ
ತಾಂಡಿ ಬಾರೆ ಮುಂದೆ

ಶಾಂಭುವೀಪುರದಲ್ಲ
ಸಿಂಹ ಏರಿದ ಮಾತೆ
ಶಂಭೋಧರಣೀಶನ
ಮಗನಿಗೆ ಸೋತೆ

---

3) ಪ್ರೇಮಧಾರತಿ
ಪ್ರೇಮದಿಂದಲೇ ತಂದು
ಸ್ವಾಮಿ ಶಂಕರ ನಿಮಗೆ
ಆರತಿಗಳು ಬೆಳಗುವೆ

ಕುಂದಣಧಾರತಿ
ಚಂದದಿಂದಲೇ ತಂದು
ಚಂದ್ರ ಶಂಕರ ನಿಮಗೆ
ಆರತಿಗಳು ಬೆಳಗುವೆ

ಮುತ್ತಿನಾರತಿ
ಎತ್ತಿನ ಚಪ್ಪರ ಇಟ್ಟು
ಚೇತ ಜಾಣಂತ್ಯ ನಿಮಗೆ
ಆರತಿಗಳು ಬೆಳಗುವೆ ಜಾಣಾ ನಿಮಗೆ

ಧರಿಂತ್ರಾಳಧಿಕ್ಯವಾದ
ಗಿರಿಂತು ಮೇಲೆರಿರುವ
ತಿರುಪತಿ ವೆಂಕಟೇಶ ನಿಮಗೆ
ಆರತಿಗಳು ಬೆಳಗುವೆ ಜಾಣಾ ನಿಮಗೆ.





[illegible]



[illegible]





ಶ್ರೀ ಹೊಸೂರಮ್ಮ ದೇವಿ.



ಶ್ರೀ ಹೊಸೂರಮ್ಮ ದೇವಿಯ ಶಾಲಿಗ್ರಾಮಗಳು.











ಪಂಚಲೋಹದ ಉತ್ಸವ ಮೂರ್ತಿಗಳು
(ಕೌಶಿಕೆ ಮತ್ತು ಪರಶುರಾಮ)

ನವಗ್ರಹಗಳು



ಗರುಡಗಂಭ









ಜಮದಗ್ನಿ ಹಾಗು ರೇಣುಕೆ



ದತ್ತಾತ್ರೇಯ ಸ್ವಾಮಿ ಮತ್ತು
ಪರಶುರಾಮನ ಪಾದಗಳು.



ಕ್ಷೇತ್ರಪಾಲ (ಶಿಲಾ ವಿಗ್ರಹ)









ತಾಯಿಮುಕ್ಕಮ್ಮ (ಏಕ ಶಿಲಾ ಕೃತಿ)



ಆಂಜನೇಯ ಸ್ವಾಮಿ



ಆಲದಮರ ಮತ್ತು ನಾಗಮೂರ್ತಿಗಳು








ನೈವೇದ್ಯಕ್ಕಾಗಿ ಪಾಯಸವನ್ನು ಸಿದ್ಧಗೊಳಿಸುತ್ತಿರುವುದು.



ನೈವೇದ್ಯಕ್ಕಾಗಿ ಗಡಿಗೆಯಿಂದ ಪಾಯಸವನ್ನು ಹೊರತೆಗೆಯುತ್ತಿರುವುದು.

ಹೊಸೂರಮ್ಮ ದೇವಾಲಯದ ರೇಖಾ ನಕ್ಷೆ :



ರೇಖಾ ನಕ್ಷೆಯ ವಿವರ ಈ ರೀತಿಯಿದೆ :

1) ಶ್ರೀ ಹೊನಸೂರಮ್ಮ ಮುಖ್ಯ ದೇವಾಸ್ಥಾನ
2) ದೇವಸ್ಥಾನದ ಮುಖ್ಯ ದ್ವಾರ ಬಾಗಿಲು (ಉತ್ತರದ ಕಡೆ)
3) ದೇವಸ್ಥಾನದ ಇನ್ನೊಂದು ದ್ವಾರ ಬಾಗಿಲು (ಪೂರ್ವದ ಕಡೆ)
4) ಮೈಲಾರಲಿಂಗ ಮತ್ತು ಆನೆಕಲ್ಲು ಬಿನಕಪ್ಪ
5) ಆಲದ ಮರ ಮತ್ತು ನಾಗರ ಕಲ್ಲಿನ ಮೂರ್ತಿಗಳು
6) ಪಾಯಸದಪಗಡಿಗೆ ಪೂಜಿಮಾಡುವ ಚಿಕ್ಕ ಕಟ್ಟೆ
7) ಆಲದ ಮರದ ಕಟ್ಟೆ
8) ಶಿವಲಿಂಗ
9) ಜಮದಗ್ನಿ ಮತ್ತು ರೇಣುಕೆ
10) ದತ್ತಾತ್ರಯ ಮತ್ತು ಪರಶುರಾಮನ ಪಾದ
11) ತಾಯ ಮುದ್ದಮ್ಮ
12) ಆಂಜನೇಯ ಸ್ವಾಮಿ
13) ಪೂಜಾರಿಯ ಮನೆ
14) ದೇವಸ್ಥಾನದ ಕಛೇರಿ
15) ಬದಮ್ದ ಹೊರಗಿರುವ ಹಳೆಯ ಕೋಟೆ ಗೋಡೆ
16) ಗರುಡ ಗಂಭ
17) ಅಗ್ನಿಕುಂಡ
18) ಪಾಯಸ ಮಾಡುವ ಮೂರು ಚಿಕ್ಕ ಕಲ್ಲುಗುಂಡುಗಳು
19) ಬಲಿಪೀಠ
20) ಮುಖ್ಯ ದೇವಸ್ಥಾನದ ಪ್ರದಕ್ಷಿಣಾ ಪಥ
21) ಮುಖ್ಯ ದ್ವಾರದ ಮುಂದೆ ಅಕ್ಕಪಕ್ಕದಲ್ಲಿರುವ ಕಟ್ಟೆಗಳು

ವಕ್ತೃಗಳು :

	ವಯಸ್ಸು	ಜಾತಿ	ವೃತ್ತಿ
1) ಶ್ರೀ ಕಣವೆಪ್ಪ ಹೊಸೂರು	60	ನಾಯಕ	ವ್ಯವಸಾಯ
2) ಶ್ರೀ ಗುರುರಾಜ ಪುರೋಹಿತ ಕಾರ್ಯನಿರ್ವಾಹಣ ಅಧಿಕಾರಿಗಳು ಶ್ರೀಕ್ಷೇತ್ರ ಹೊಸೂರು	50	ಬ್ರಾಹ್ಮಣ	ದೇವಸ್ಥಾನದ ಅಧಿಕಾರಿಗಳು
3) ಶ್ರೀಪಾರ್ಥೇಶ್ವರ ಭಟ ಹೊಸಪೇಟೆ	65	ಬ್ರಾಹ್ಮಣ	ನಿವೃತ್ತ ವೈದ್ಯರು
4) ಶ್ರೀಹೆಚ್. ಪಿ. ಕಲಂಭಟ ಚಿತ್ರವಾಡಿಗ	34	„	ವಕೀಲರು
5) ಶ್ರೀವೆಂಕಟೇಶಆಚಾರ ಹೊಸೂರು	35	„	ದೇವಸ್ಥಾನದ ಅರ್ಚಕರು
6) ಶ್ರೀ ದ್ವಾರಕನಾಥ ಹೊಸಪೇಟೆ	45	„	ಗ್ರಾಮ ಲೆಕ್ಕಾಧಿಕಾರಿ
7) ಶ್ರೀ ಹೊಸೂರು ರಾಘವೇಂದ್ರಾಚಾರ ಹೊಸಪೇಟೆ.	65	„	ನಿವೃತ್ತ ಶಿಕ್ಷಕರು
8) ಶ್ರೀ ಜಿ. ತಿರುಕಪ್ಪ ಇಪ್ಪತ್ತೇರಿ.	60	ನಾಯಕ	ವ್ಯವಸಾಯ
9) ಶ್ರೀಪೂಜಾರಿ ವೀರಣ್ಣ ಹೊಸೂರು	58	ಲಿಂಗಾಯತ	„

: ಗ್ರಂಥಋಣ :

1) ಇಂಡವಾಳು ಹಿರಿಯಮ್ಮ: ಲೇ.ಡಾ.ಡಿ.ಎ.ಗಿರಿಜಮ್ಮ,
ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, 1995.

2) ಉಜ್ಜನಿ ಚೌಡಮ್ಮ: ಲೇ. ಹೀ.ಚಿ. ಬೋರಲಿಂಗಯ್ಯ,
ದಿನಕರ ಪ್ರಕಾಶನ, ಬೆಂಗಳೂರು, 1979.

3) ಒಂದು ಗ್ರಾಮದ ಜಾನಪದೀಯ ಅಧ್ಯಯನ: ಲೇ.ಚೆನ್ನಣ್ಣ ವಾಲೀಕಾರ
ಅಕ್ಷರ ಪ್ರಕಾಶನ, ಹೆಗ್ಗೋಡು, 1991.

4) ಕರ್ನಾಟಕದ ಜಾತ್ರೆಗಳು: ಸಂ. ಸಿ.ಎನ್. ಶಿವಕುಮಾರಸ್ವಾಮಿ,
ಸ್ನಾತಕೋತ್ತರ ಕೇಂದ್ರ ಬಿ.ಆರ್.ಪ್ರಾಜೆಕ್ಟ್, ಮೈ.ವಿ.ವಿ. 1988.

5) ಕರ್ನಾಟಕದ ಗ್ರಾಮದೇವತೆಗಳು: ಲೇ.ಡಿ.ಲಿಂಗಯ್ಯ
ಐಬಿಎಚ್ ಪ್ರಕಾಶನ, ಮೈಸೂರು, 1934.

6) ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಕ ಅಧ್ಯಯನ: ಲೇ.ಡಾ.ಅರ್ಜುನ ಗೊಳಸಂಗಿ,
ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ, 1995.

7) ಜಾತ್ರೆ : ಸಂ.ಚಂದ್ರಶೇಖರ ದಾಮ್ಲೆ,
ನೆಹರು ಮೆಮೋರಿಯಲ್ ಕಾಲೇಜ್, ಸುಳ್ಯ, 1990.

8) ಜಾತ್ರೆಗಳು ಒಂದು ಜಾನಪದೀಯ ಅಧ್ಯಯನ: ಲೇ.ಡಾ.ಚಂದ್ರಶೇಖರ ದಾಮ್ಲೆ,
ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, 1995.

9) ಜನಪದ ದೇವತೆಗಳು ಮತ್ತು ಶಿಷ್ಟ ದೇವತೆಗಳು : ಲೇ.ಡಾ.ಬಸವರಾಜ ಸಬರದ,
ಡಾ.ಗುಂಡ್ಮಿ ಚಂದ್ರಶೇಖರ ಐತಾಳ ಜಾನಪದ ಪ್ರಶಸ್ತಿ ಸಮಿತಿ, ಕುಂದಾಪುರ, 1994.

10) ಮಲೆನಾಡು ಜಾನಪದ: ಸಂ. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಎಚ್.ಜಿ.ಲಕ್ಕಪ್ಪಗೌಡ,
ಮೈಸೂರು ವಿಶ್ವವಿದ್ಯಾಲಯ, ಬಿ.ಆರ್.ಪ್ರಾಜೆಕ್ಟ್, 1983.

11) ಮಲಯಮ್ಮ ನಿನ್ನಾಲಯದೋ ಇದೋ... ಲೇ.ಡಾ.ಮಂಜುನಾಥ ಬೇವಿನಕಟ್ಟಿ,
ಅಂಬಿಕಾ ಪ್ರಕಾಶನ, ಹೊಸಪೇಟೆ, 1994.

12) ಮೈಲಾರಲಿಂಗ-ಖಂಡೋಬಾ : ಲೇ. ಡಾ.ಎಂ.ಬಿ.ನೇಗಿನಹಾಳ,
ಪ್ರಸಾರಂಗ ಕ.ವಿ.ಧಾರವಾಡ, 1992.

13) ಸಂಶೋಧನೆ (ಡಾ.ಚಿದಾನಂದಮೂರ್ತಿ ಗೌರವ ಸಂಪುಟ)
ಸಂ.ಪ್ರೊ. ಲಕ್ಷ್ಮಣ ತೆಲಗಾವಿ. ಡಾ. ಎಂ. ಚಿದಾಮೂರ್ತಿ ಅಭಿನಂದನಾ ಸಮಿತಿ,
ಬೆಂಗಳೂರು 1991

14) ಸವದತ್ತಿ ಎಲ್ಲಮ್ಮ : ಲೇ.ಡಾ.ಕಮಲಾ ಹೆಮ್ಮಿಗಿ,
ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, 1995.

15) ಸ್ಥಳ ಪುರಾಣ : ಲೇ.ಡಾ: ಪಿ.ಗುರುರಾಜ ಭಟ್,
ದೇವಾಲಯದ ಎಗ್ಸಿಕ್ಯೂಟಿವ್ ಆಫೀಸರರು, ಹೊಸೂರು, 1976.

16) ಹುಲಿಗೆಮ್ಮ ಅಧ್ಯಯನ : (ಅಪ್ರಕಟಿತ) ಲೇ.ಡಾ.ಪುರುಷೋತ್ತಮ ಬಿಳಿಮಲೆ,
ಕನ್ನಡ ವಿಶ್ವವಿದ್ಯಾಲಯ ಹಂಪಿ, 1996.